ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 18 ಭಾನುವಾರ 2022

ಸಂಪುಟ: 43 | ಸಂಚಿಕೆ: 241 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸಾಂಸ್ಕೃತಿಕ ನಗರಿಯಲ್ಲಿ ಮೊಳಗಿದ ಹನುಮ ಘೋಷ

● ಅದ್ದೂರಿ ಶೋಭಾಯಾತ್ರೆ ● ಸಾವಿರಾರು ಮಂದಿ ಭಾಗಿ

ಮೈಸೂರು, ಡಿ.17 (ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಶನಿವಾರ ಎಲ್ಲೆಡೆ ಕೇಸರಿ ಬಾವುಟ ರಾರಾಜಿಸಿದವು. ಎರಡು ವರ್ಷಗಳ ಬಳಿಕ ಹನುಮ ಜಯಂತಿ ಅಂಗವಾಗಿ ಆಯೋಜಿಸಿದ್ದ 4ನೇ ವರ್ಷದ ಹನುಮೋತ್ಸವದ ಶೋಭಾಯಾತ್ರೆ ಅದ್ದೂರಿಯಾಗಿ ನೆರವೇರಿತು. ಸಾವಿರಾರು ಮಂದಿ ಪಾಲ್ಗೊಂಡು ಹನುಮ ಭಕ್ತಿ ಮೆರೆದರು.

ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ತೆರೆದ ವಾಹನದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಹನುಮನ ವಿಗ್ರಹಕ್ಕೆ ಅರ್ಚಕ ಎಸ್.ವಿ. ಪ್ರಹ್ಲಾದರಾವ್ ಶಾಸ್ತ್ರೋಕ್ತವಾಗಿ ಪೂಜೆ ನೆರವೇರಿಸಿದ ಬಳಿಕ ಶೋಭಾಯಾತ್ರೆಗೆ ಚಾಲನೆ ನೀಡಲಾಯಿತು. ಪಕ್ಷಭೇದ ಮರೆತು ಮೂರು ಪಕ್ಷಗಳ ಮುಖಂಡರು, ಕಾರ್ಯಕರ್ತರು ಹಾಗೂ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಅಲಂಕೃತ ವಾಹನದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಹನುಮನ ವಿಗ್ರಹಗಳೊಂದಿಗೆ ಶೋಭಯಾತ್ರೆಯಲ್ಲಿ ಸಾಗಿ ಗಮನ ಸೆಳೆದರು.

ಹನುಮನ ವಿವಿಧ ಬಗೆಯ ಮೂರ್ತಿಗಳನ್ನು ತೆರೆದ ಅಲಂಕೃತ ವಾಹನಗಳಲ್ಲಿರಿಸಿ





ಹನುಮೋತ್ಸವದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಅಪಾರ ಹನುಮ ಭಕ್ತ ಸಮೂಹವನ್ನು ಚಿತ್ರದಲ್ಲಿ ಕಾಣಬಹುದು.

ಕೋಟೆ ಅಂಜನೇಯಸ್ವಾಮಿ ದೇವಾಲಯದಿಂದ ಆರಂಭವಾದ ಮೆರವಣಿಗೆ ಅಶೋಕ ರಸ್ತೆ, ಇರ್ವಿನ್ ರಸ್ತೆ, ಆಯುರ್ವೇದ ಆಸ್ಪತ್ರೆ ವೃತ್ತ, ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ ಮಾರ್ಗವಾಗಿ ಸಾಗಿ ದೊಡ್ಡಕೆರೆ ಮೈದಾನದಲ್ಲಿ ಅಂತ್ಯಗೊಂಡಿತು. ಮೆರವಣಿಗೆ ಯುದ್ದಕ್ಕೂ ಕೇಸರಿ ಧ್ವಜಗಳು ರಾರಾಜಿಸುತ್ತಿದ್ದವು. ನಗಾರಿ, ಡೊಳ್ಳು ಕುಣಿತದ ಮೇಳ ಮೆರವಣಿಗೆಗೆ ಕಳೆ ತಂದವು. ಕಾರ್ಯಕರ್ತರು ಕುಣಿದು ಕುಪ್ಪಳಿಸಿದರು. ಮೆರವಣಿಗೆಗೆ ಪೊಲೀಸರಿಂದ ಬಿಗಿ ಭದ್ರತೆ ಒದಗಿಸಲಾಗಿತ್ತು.

ಇದೇ ವೇಳೆ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಯುವ ಪಡೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬದಂತಿರುವ ಹನುಮನ ಜಯಂತಿ ಆಚರಣೆ ಮಾಡುತ್ತಿವೆ. ಇದರಿಂದ ನಮ್ಮ ಧಾರ್ಮಿಕ ಅಸ್ಮಿತೆಯನ್ನು ಗಟ್ಟಿಯಾಗಿ ಉಳಿಸಿಕೊಂಡು ಹೋಗಲು ಸಾಧ್ಯವಾಗಿದೆ. ಇಡೀ ನಾಡು ಹನುಮ ಜಯಂತಿ ಆಚರಿಸುತ್ತಿರುವಂತೆ ಮೈಸೂರಿನಲ್ಲಿಯೂ ಅತೀ ವಿಜೃಂಭಣೆಯಿಂದ ಜಯಂತಿ ಆಚರಿಸುತ್ತಿರುವುದು ಶ್ಲಾಘನೀಯ ಎಂದರು. ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ ಸಿಂಹ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಬಿಜೆಪಿ ನಗರ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಾಸು, ಕಾಂಗ್ರೆಸ್ ಯುವ ಮುಖಂಡ ಪ್ರದೀಪ್, ರಾಷ್ಟ್ರೀಯ ಹಿಂದೂ ಸಮಿತಿ ಅಧ್ಯಕ್ಷ ವಿಕಾಸ್ ಶಾಸ್ತ್ರಿ, ಮುರಳಿ, ಹನುಮೋತ್ಸವ ಸಮಿತಿಯ ಜೀವನ್ ಸಂಜಯ್ ದಾಸ್ ಮತ್ತಿತರರು ಭಾಗವಹಿಸಿದ್ದರು.

ವಿಧಾನಸೌಧದಲ್ಲೇ ನಕಲಿ ವಿಭಾಗಾಧಿಕಾರಿ ಬಂಧನ

ಬೆಂಗಳೂರು, ಡಿ.17– ನಗರಾಭಿವೃದ್ಧಿ ಇಲಾಖೆಯ ವಿಭಾಗಾಧಿಕಾರಿ ಎಂಬುದಾಗಿ ಹೇಳಿ ಜನರು ಹಾಗೂ ಸರ್ಕಾರಿ ಅಧಿಕಾರಿಗಳನ್ನು ವಂಚಿಸುತ್ತಿದ್ದ ಆರೋಪಿ ಎನ್.ಚಂದ್ರಪ್ಪ (36) ಎಂಬಾತನನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಸವೇಶ್ವರನಗರದ ಕಿರ್ಲೋಸ್ಕರ್ ಬಡಾವಣೆಯ ನಿವಾಸಿ ಚಂದ್ರಪ್ಪ, ವಿಧಾನಸೌಧದಲ್ಲಿ ಹೆಚ್ಚು ಸುತ್ತಾಡುತ್ತಿದ್ದ. ವಿಭಾಗಾಧಿಕಾರಿ ಎಂಬುದಾಗಿ ಹೇಳಿಕೊಂಡು ಹಲವರನ್ನು ವಂಚಿಸುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ವಿಧಾನಸೌಧದಲ್ಲೇ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿಭಾಗಾಧಿಕಾರಿ, ನಗರಾಭಿವೃದ್ಧಿ ಇಲಾಖೆ ಎಂಬ ಹೆಸರಿನಲ್ಲಿ ನಕಲಿ ಗುರುತಿನ ಚೀಟಿ ಸೃಷ್ಟಿಸಿಕೊಂಡಿದ್ದ. ಕರ್ನಾಟಕ ಸರ್ಕಾರದ ಸಚಿವಾಲಯದಿಂದ ಗುರುತಿನ ಚೀಟಿ ರೀತಿಯಲ್ಲಿ, ಗುರುತಿನ ಚೀಟಿ ನಂ. 193/2019 ಎಂಬುದಾಗಿಯೂ ನಮೂದಿಸಿಕೊಂಡಿದ್ದ. ಹಲವರು ಈ ಗುರುತಿನ ಚೀಟಿ ನಿಜವೆಂದು ನಂಬಿದ್ದರು. ನಕಲಿ ಗುರುತಿನ ಚೀಟಿಯನ್ನು ಸಾರ್ವಜನಿಕರು ಹಾಗೂ ಅಧಿಕಾರಿಗಳಿಗೆ ಆರೋಪಿ ತೋರಿಸುತ್ತಿದ್ದ. ನಗರಾಭಿವೃದ್ಧಿ ಇಲಾಖೆಯಲ್ಲಿರುವ ಹಲವು ಕಾಮಗಾರಿ, ಕೆಲಸ ಕೊಡಿಸುವ ಆಮಿಷವೊಡ್ಡಿ ಹಲವರಿಂದ ಹಣ ಪಡೆಯುತ್ತಿದ್ದನೆಂಬ ಮಾಹಿತಿ ಇದೆ ಎಂದು ತಿಳಿಸಿವೆ. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದ ಸಂದರ್ಭದಲ್ಲೂ ತಾನೊಬ್ಬ ಸರ್ಕಾರಿ ಅಧಿಕಾರಿಯೆಂದು ಸುಳ್ಳು ಹೇಳಿದ್ದ.

ನಾಳೆಯಿಂದ ಬೆಳಗಾವಿ ಅಧಿವೇಶನ: ಚುನಾವಣೆ ಹೊಸ್ತಿಲಲ್ಲಿ

ಬರೀ ಮೇಲಾಟಕ್ಕೆ ವೇದಿಕೆಯಾಗುವ ಸಾಧ್ಯತೆ

ಸರ್ಕಾರದ ಹುಳುಕು ಎತ್ತಿ ತೋರಲು ಕಾಂಗ್ರೆಸ್ ಸಜ್ಜಾಗಿದ್ದರೆ; 'ಭಯೋತ್ಪಾದಕ' ವಾಗ್ಬಾಂಬ್ ಹಾಕಲು ಬಿಜೆಪಿ ತಯಾರಿ: ಇನ್ನು ಇವರ ಪ್ರತಿಷ್ಠೆ ಮೇಲಾಟದಲ್ಲಿ ಜನರ ಸಮಸ್ಯೆ ಬಗ್ಗೆ ಕಿಂಚಿತ್ತು ಕಾಳಜಿ ಇವರಿಗಿಲ್ಲ ಎಂದು ಜೆಡಿಎಸ್ ಆಲಾಪ



ಬೆಂಗಳೂರು, ಡಿ.17(ಕೆಎಂಶಿ)–ವಿಧಾನಸಭಾ ಚುನಾವಣಾ ಹೊಸ್ತಿಲಲ್ಲಿ ಕುಂದಾನಗರಿ ಸುವರ್ಣಸೌಧದಲ್ಲಿ ಸೋಮವಾರದಿಂದ ಆರಂಭಗೊಳ್ಳುವ ವಿಧಾನಮಂಡಲದ ಅಧಿವೇಶನವನ್ನು ಎಲ್ಲಾ ರಾಜಕೀಯ ಪಕ್ಷಗಳು ಚುನಾವಣಾ ವೇದಿಕೆಯಾಗಿ ಬಳಸಿಕೊಳ್ಳಲು ಸಿದ್ಧತೆ ನಡೆಸಿವೆ.

ಆಡಳಿತ ಮತ್ತು ಅಭಿವೃದ್ಧಿ ಕೆಲಸಗಳಿಗಿಂತ ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿ, ರಾಜಕೀಯವಾಗಿ ಮೇಲುಗೈ ಸಾಧಿಸಲು ಪ್ರತಿಪಕ್ಷ ಕಾಂಗ್ರೆಸ್ ಸಿದ್ಧತೆ ನಡೆಸಿದೆ ವೋಟರ್ ಐಡಿ, 40 ಪರ್ಸೆಂಟ್ ಕಮಿಷನ್ ಸೇರಿದಂತೆ ಹತ್ತು ಹಲವು ವಿಷಯಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾಂಗ್ರೆಸ್ ಹೊರಟಿದೆ.

ಕಾಂಗ್ರೆಸ್‌ಗೆ ಪ್ರತಿಯಾಗಿ ಆಡಳಿತಾರೂಢ ಬಿಜೆಪಿ ಕೂಡ ಬೆಳಗಾವಿ ಅಧಿವೇಶನವನ್ನು ಪ್ರತಿಪಕ್ಷಗಳ ಬಣ್ಣ ಬಯಲು ಮಾಡಿ, ಸರ್ಕಾರದ ಕಾರ್ಯಕ್ರಮಗಳನ್ನು ಬಿಂಬಿಸುವ ಪ್ರಯತ್ನ ಮಾಡಲಿದೆ. ಅಷ್ಟೇ ಅಲ್ಲ ಚಳಿಗಾಲದ ಅಧಿವೇಶನದಲ್ಲಿ ಗ್ರಾಮೀಣ, ಬಡವರು ಮತ್ತು ಮಧ್ಯಮವರ್ಗದವರಿಗೆ ಅನುಕೂಲವಾಗುವ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳಿಗೆ

▶ 8ನೇ ಪುಟಕ್ಕೆ

ಅಧಿವೇಶನ ಕಾವಲಿಗೆ 4,931 ಪೊಲೀಸರು

ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಅಧಿಕಾರಿಗಳೂ ಸೇರಿದಂತೆ 4,931 ಪೊಲೀಸ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗುತ್ತಿದೆ. ನಗರ ಪೊಲೀಸ್ ಆಯುಕ್ತ ಡಾ.ಎಂ.ಬಿ. ಬೋರಲಿಂಗಯ್ಯ ಅವರು ಶನಿವಾರ ಭದ್ರತೆ ಸಿದ್ಧತೆಗಳನ್ನು ಪರಿಶೀಲಿಸಿದರು. 2021ರ ಅಧಿವೇಶನ ವೇಳೆ ಆದ ಸಣ್ಣಪುಟ್ಟ ಲೋಪಗಳನ್ನು ಗಮನ ದಲ್ಲಿಟ್ಟುಕೊಂಡು ಭದ್ರತೆ ಏರ್ಪಡಿಸಲಾಗುತ್ತಿದೆ. ಅನುಭವಿ ಅಧಿಕಾರಿಗಳಿಗೇ ವಿವಿಧ ವಿಭಾಗಗಳ ಜವಾಬ್ದಾರಿ ವಹಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಡಾ.ಎಂ.ಬಿ. ಬೋರಲಿಂಗಯ್ಯ ತಿಳಿಸಿದ್ದಾರೆ. ಈ ಬಾರಿ 6 ಮಂದಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, 11 ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು, 43 ಡಿವೈಎಸ್ಪಿಗಳು, 95 ಸರ್ಕಲ್ ಪೊಲೀಸ್ ಇನ್‌ಸ್ಪೆಕ್ಟರ್‌ಗಳು, 241 ಪಿಎಸ್‌ಐ,298 ಎಎಸ್‌ಐ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ.

ನಿಖಿಲ್ ಕುಮಾರಸ್ವಾಮಿ ರಾಮನಗರ ಜೆಡಿಎಸ್ ಅಭ್ಯರ್ಥಿ

ತಾಯಿ, ಶಾಸಕಿ ಅನಿತಾ ಕುಮಾರಸ್ವಾಮಿ ಘೋಷಣೆ



ರಾಮನಗರ, ಡಿ.17– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಕಣಕ್ಕೆ ಇಳಿಯಲಿದ್ದಾರೆ.

ನಗರದಲ್ಲಿ ಶನಿವಾರ ನಡೆದ ಪಂಚರತ್ನ ರಥಯಾತ್ರೆ ಸಂದರ್ಭ ಹಾಲಿ ಶಾಸಕಿ ಅನಿತಾ ಕುಮಾರಸ್ವಾಮಿ ಈ ಘೋಷಣೆ ಮಾಡಿದರು. ಕೆಲವರು ನನ್ನ ಬಗ್ಗೆ ಅಪಪ್ರಚಾರ ಮಾಡುತ್ತಿದ್ದರು. ಇದಕ್ಕೆಲ್ಲ ತೆರೆ ಎಳೆಯಬೇಕು ಎಂದೇ ಇಂದು ಈ ಘೋಷಣೆ ಮಾಡಿದ್ದೇನೆ. 2023ರ ಚುನಾವಣೆಯಲ್ಲಿ ನನ್ನ ಮಗನನ್ನು ಈ ಕ್ಷೇತ್ರದಿಂದ ಅಭ್ಯರ್ಥಿಯಾಗಿಸಲು ತೀರ್ಮಾನಿಸಿದ್ದೇವೆ. ನಮ್ಮ ಕುಟುಂಬಕ್ಕೆ ಆಶೀರ್ವಾದ ನೀಡಿದಂತೆ ಅವನನ್ನೂ ಬೆಂಬಲಿಸಬೇಕು ಎಂದು ಕೋರಿದರು. ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹಾಗೂ ನಿಖಿಲ್ ಈ ಸಂದರ್ಭ ಜೊತೆಗಿದ್ದರು.

ಯುವಕರ ಒತ್ತಾಯ: ಹೊಸ ಮುಖಕ್ಕೆ ಅವಕಾಶ ನೀಡಬೇಕೆಂಬ ಉದ್ದೇಶದಿಂದ ತಮ್ಮ ಪತ್ನಿಯೂ ಆದ ಶಾಸಕಿ ಅನಿತಾ ಕುಮಾರಸ್ವಾಮಿಯವರು ರಾಮನಗರ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಅವರನ್ನು ಘೋಷಿಸಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.


ತಾಲೂಕಿನ ಸುಗ್ಗನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಬೇಕೆಂಬ ಒತ್ತಾಯವನ್ನು ರಾಮನಗರ ಕ್ಷೇತ್ರದ ಯುವಕರು ಮಾಡುತ್ತಲೇ ಬಂದಿದ್ದರು. ಬಹಳ ದಿನಗಳಿಂದ ಇದನ್ನು ಗಮನಿಸಿದ್ದ ಅನಿತಾ, ಇಂದು ನಿಖಿಲ್ ಅವರನ್ನು ಅಭ್ಯರ್ಥಿ ಎಂದು ಘೋಷಿಸಿದ್ದಾರೆ ಎಂದರು.

ಶಾಸಕಿಯಾಗಿ ಅನಿತಾ ಉತ್ತಮ ಕೆಲಸ ಮಾಡಿದ್ದಾರೆ. ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದ ಅವರು, ಚನ್ನಪಟ್ಟಣದಲ್ಲಿ ಸೋತಿದ್ದರು. ಮತ್ತೊಮ್ಮೆ ಶಾಸಕರಾಗಬೇಕೆಂಬ ಬಯಕೆಯಿಂದ ರಾಮನಗರದಲ್ಲಿ ಸ್ಪರ್ಧಿಸಿ ಶಾಸಕಿಯಾಗಿದ್ದರು ಎಂದ ಕುಮಾರಸ್ವಾಮಿ, ರಾಮನಗರ ಕ್ಷೇತ್ರ ನಮ್ಮ ಕುಟುಂಬದ ಕಣ್ಣಿದ್ದಂತೆ. ಹೆಚ್.ಡಿ. ದೇವೇಗೌಡರಿಗೂ ರಾಮನಗರಕ್ಕೂ ಅವಿನಾಭಾವ ಸಂಬಂಧವಿದೆ. ರಾಮನಗರ ಜನತೆ ನಿಖಿಲ್ ಕುಮಾರಸ್ವಾಮಿಯವರಿಗೂ ಕೂಡ ಆಶೀರ್ವದಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಕುಮಾರಸ್ವಾಮಿ ಹೇಳಿದರು.

▶ 8ನೇ ಪುಟಕ್ಕೆ

ನೇಕಾರಿಕೆ ಉದ್ಯಮಿಗಳಿಗೆ ಶೇ.50ರಷ್ಟು ಸಹಾಯಧನ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ



ಬೆಂಗಳೂರು, ಡಿ.17– ನೇಕಾರ ಸಮುದಾಯದವರು ನೇಕಾರಿಕೆಗೆ ಸಂಬಂಧಿಸಿದ ಉದ್ಯಮಗಳನ್ನು ಆರಂಭಿಸಲು ನೀಡುವ ಸಹಾಯಧನದ ಮೊತ್ತವನ್ನು ಶೇ.30ರಿಂದ ಶೇ 50ಕ್ಕೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನೇಕಾರರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಶನಿವಾರ ಉನ್ನತ ಮಟ್ಟದ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ನೇಕಾರರ ಹಲವು ಬೇಡಿಕೆಗಳನ್ನು ಈಡೇರಿಸುವ ತೀರ್ಮಾನವನ್ನು ಸಭೆಯಲ್ಲಿ ಕೈಗೊಂಡಿದ್ದೇವೆ. ವೃತ್ತಿಪರ ನೇಕಾರರಿಗೆ

▶ 8ನೇ ಪುಟಕ್ಕೆ

ಇಂದು ಫಿಫಾ ಫುಟ್‌ಬಾಲ್ ವಿಶ್ವಕಪ್ ಫೈನಲ್

● 3ನೇ ಬಾರಿ ಚಾಂಪಿಯನ್ ಪಟ್ಟಕ್ಕೆ ಫ್ರಾನ್ಸ್–ಅರ್ಜೆಂಟೀನಾ ಹಣಾಹಣಿ ● ಸತತ ಎರಡನೇ ಬಾರಿಗೆ ಟ್ರೋಫಿ ಗೆಲ್ಲುವ ವಿಶ್ವಾಸದಲ್ಲಿ ಫ್ರಾನ್ಸ್



ದೋಹಾ, ಡಿ.17– ಫಿಫಾ ವಿಶ್ವಕಪ್ ಪಂದ್ಯಾವಳಿಯ 22ನೇ ಆವೃತ್ತಿಯ ಫೈನಲ್ ಪಂದ್ಯ ಭಾನುವಾರ(ಡಿ.18) ರಾತ್ರಿ ಭಾರತೀಯ ಕಾಲಮಾನ 8.30ಕ್ಕೆ ಇಲ್ಲಿನ ಲುಸೇಲ್ ಸ್ಟೇಡಿಯಂನಲ್ಲಿ ನಡೆಯಲಿದ್ದು, ವಿಶ್ವದ 2 ಬಲಿಷ್ಠ ತಂಡಗಳಾದ ಫ್ರಾನ್ಸ್–ಅರ್ಜೆಂಟೀನಾ ಪ್ರಶಸ್ತಿಗಾಗಿ ಸೆಣಸಲಿವೆ. ವಿಶ್ವದ ಕೋಟ್ಯಾಂತರ ಫುಟ್ಬಾಲ್ ಅಭಿಮಾನಿಗಳು ಫೈನಲ್ ಪಂದ್ಯಕ್ಕಾಗಿ ಕುತೂಹಲದಿಂದ ಕಾಯುತ್ತಿದ್ದು, ಪಂದ್ಯ ಆರಂಭಕ್ಕೆ ಕ್ಷಣಗಣನೆ ಆರಂಭವಾಗಿದೆ. ಫ್ರಾನ್ಸ್ 4ನೇ ಬಾರಿ ಫೈನಲ್‌ಗೇರಿ 3ನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದು, 60 ವರ್ಷದಲ್ಲೇ ಸತತ 2ನೇ ಬಾರಿ ಪ್ರಶಸ್ತಿ ಗೆದ್ದ ಮೊದಲ ತಂಡ ಎನಿಸಿಕೊಳ್ಳುವ ನಿರೀಕ್ಷೆಯಲ್ಲಿದೆ. ಇನ್ನು 6ನೇ ಫೈನಲ್ ಆಡುತ್ತಿರುವ ಅರ್ಜೆಂಟೀನಾ ಕೂಡಾ 3ನೇ ಬಾರಿ ಚಾಂಪಿಯನ್ ಎನಿಸಿಕೊಳ್ಳುವ ಕಾತರದಲ್ಲಿದೆ. ಅರ್ಜೆಂಟೀನಾ ತಂಡ 1978, 1986ರಲ್ಲಿ ಚಾಂಪಿಯನ್ ಆಗಿದ್ದರೆ, 1930, 1990 ಹಾಗೂ 2014ರಲ್ಲಿ ರನ್ನರ್–ಅಪ್ ಆಗಿತ್ತು. ಅರ್ಜೆಂಟೀನಾ, 2002ರಲ್ಲಿ ಬ್ರೆಜಿಲ್ ಬಳಿಕ ಪ್ರಶಸ್ತಿ ಗೆದ್ದ ದಕ್ಷಿಣ ಅಮೆರಿಕದ ಮೊದಲ ತಂಡ ಎನಿಸಿಕೊಳ್ಳುವ ತವಕದಲ್ಲಿದೆ.

▶ 8ನೇ ಪುಟಕ್ಕೆ

ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಆಗ್ರಹಿಸಿ ಬೀದರ್‌ನಲ್ಲಿ ಜನವರಿಯಲ್ಲಿ

ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಾ ಅಧಿವೇಶನ

● ಮೈಸೂರಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ನಿರ್ಧಾರ ● ಇದು ರಾಜಕೀಯೇತರ ಸಮಾವೇಶ; ಸಮುದಾಯದ ಮುಖಂಡರ ಘೋಷಣೆ

ಮೈಸೂರು, ಡಿ.17(ಎಸ್‌ಬಿಡಿ)– ಲಿಂಗಾಯತ ಪ್ರತ್ಯೇಕ ಧರ್ಮಕ್ಕಾಗಿ ಆಗ್ರಹಿಸಿ ಮುಂದಿನ ಜನವರಿಗೆ ಬೀದರ್‌ನಲ್ಲಿ 'ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಾ ಅಧಿವೇಶನ' ಆಯೋಜಿಸಲು ಜಾಗತಿಕ ಲಿಂಗಾಯತ ಮಹಾಸಭಾ ನಿರ್ಧರಿಸಿದೆ.

ಮೈಸೂರಿನ ಹೊಸಮಠದಲ್ಲಿ ಶನಿವಾರ ಜಾಗತಿಕ ಲಿಂಗಾಯತ ಮಹಾಸಭಾದ 2022–23ನೇ ಸಾಲಿನ ತೃತೀಯ ಕಾರ್ಯಕಾರಿ ಸಮಿತಿ ಸಭೆಯ ಬಳಿಕ ಪದಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರೂ ಆದ ವಿಶ್ರಾಂತ ಜಿಲ್ಲಾ ನ್ಯಾಯಾಧೀಶ ಎಸ್.ಎನ್. ಕೆಂಪೇಗೌಡರ ಮಾತನಾಡಿ, ಲಿಂಗಾಯತ ಪ್ರತ್ಯೇಕ ಧರ್ಮಕ್ಕಾಗಿ ಹೋರಾಟ ಮುಂದುವರೆಯಲಿದ್ದು, ಜನವರಿ ಕೊನೆಯ ವಾರ ಬೀದರ್‌ನಲ್ಲಿ ರಾಜಕೀಯೇತರ ಮಹಾ ಅಧಿವೇಶನ ಆಯೋಜಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಜೊತೆಗೆ ಬಸವತತ್ವ ವಿರೋಧಿಗಳಿಗೆ ಸಂದರ್ಭಾನುಸಾರ ತಕ್ಕ ಉತ್ತರ ನೀಡುವ ನಿಟ್ಟಿನಲ್ಲೂ ಹಲವು ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂದರು. ನಾವು ಹಿಂದೂಸ್ತಾನದ ಲಿಂಗಾಯತ ಧರ್ಮೀಯರು ಎಂದು ಹೆಮ್ಮೆಯಿಂದ ಹೇಳುತ್ತೇವೆ. ಹಾಗೆಯೇ ವೀರಶೈವ ಎನ್ನುವುದು ಧರ್ಮವಲ್ಲ ಅದು ಲಿಂಗಾಯತ ಧರ್ಮದ ನೂರೆಂಟು ಪಂಗಡಗಳಲ್ಲಿ ಒಂದು. ಆದರೆ ಇತ್ತೀಚಿನ ಬೆಳವಣಿಗೆಯಲ್ಲಿ ವೀರಶೈವ–ಲಿಂಗಾಯತ ಎಂದು ಜೋಡಿಸಿಕೊಂಡು ತಿಪ್ಪೆ ಸಾರಿಸುವ ಕೆಲಸ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇದನ್ನು ಲಿಂಗಾಯತ ಮಹಾಸಭಾ ವಿರೋಧಿಸುತ್ತದೆ ಎಂದು ಹೇಳಿದರು.



ಮೈಸೂರಿನ ಹೊಸಮಠ ಆವರಣದ ನಟರಾಜ ಕಲ್ಯಾಣ ಮಂಟಪದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಮಾತನಾಡಿದರು. ಶ್ರೀ ಚಿದಾನಂದ ಸ್ವಾಮೀಜಿ ಹಾಗೂ ಮಹಾಸಭಾದ ಪದಾಧಿಕಾರಿಗಳು ಹಾಜರಿದ್ದರು.

ಲಿಂಗಾಯತರು ಹಾಗೂ ಲಿಂಗಾಯತ ಮಠಾಧೀಶರಿಂದ ಧರ್ಮೀಯರ ಜ್ವಲಂತ ಸಮಸ್ಯೆಗಳಿಗೆ ಸಮರ್ಪಕ ಸ್ಪಂದನೆ ವ್ಯಕ್ತವಾಗುತ್ತಿದೆಯೇ ಎಂದು ಆತ್ಮವಿಮರ್ಶೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದಿದೆ. ನೂರಕ್ಕೂ ಹೆಚ್ಚು ಜನ ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಬಸವತತ್ವವನ್ನು ಹೇಳುವ ಕೆಲ ಮಠಾಧೀಶರು ಹಾಗೂ ರಾಜಕಾರಣಿಗಳು ಅದಕ್ಕೆ ವಿರುದ್ಧವಾಗಿ ನಡೆದು ಬಸವಣ್ಣನವರಿಗೂ ದ್ರೋಹ ಮಾಡುತ್ತಿದ್ದಾರೆ. ಅನೈತಿಕ ಚಟುವಟಿಕೆ ಸಂಬಂಧಿತ ಪ್ರಕರಣಗಳ ಬಗ್ಗೆ ನಿರ್ಣಯಿಸುವ ಹಕ್ಕು ನ್ಯಾಯಾಲಯಕ್ಕಿದೆ. ಇದರಲ್ಲಿ ಮಹಾಸಭಾ ಮಧ್ಯಪ್ರವೇಶ ಮಾಡಬಾರದು ಎಂದು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಖಂಡ್ರೆ ವಿರುದ್ಧ ಕಿಡಿ: ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಮಾತನಾಡಿ, ಅಖಿಲ ಭಾರತ ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಮಾಧ್ಯಮಗಳಿಗೆ ನೀಡಿರುವ ಹೇಳಿಕೆಯಲ್ಲಿ ವಿರಕ್ತ ಮಠಗಳ ಮಠಾಧೀಶರು ನಾಚಿಕೆಪಡಬೇಕೆಂದಿರುವುದು ಖಂಡನೀಯ. ಅವರಿಗೆ ಐತಿಹಾಸಿಕ ಸಂಗತಿಗಳ ಅರಿವಿಲ್ಲ. ಅಖಿಲ ಭಾರತ ವೀರಶೈವ ಮಹಾಸಭಾ ಸಂಸ್ಥಾಪಕರಾದ ಶ್ರೀ ಹಾನಗಲ್ ಕುಮಾರಸ್ವಾಮಿ ಅವರು ವಿರಕ್ತ ಮಠದ ಸಂಪ್ರದಾಯ ಅನುಸರಿಸುತ್ತಿದ್ದರು. ಅವರೆಂದೂ ವಿರಕ್ತ ಮಠ ಪರಂಪರೆಯನ್ನು ವಿರೋಧಿಸಿದವರಲ್ಲ. ಏನೂ ತಿಳಿಯದೆ ಮಾತನಾಡುವ ಈಶ್ವರ ಖಂಡ್ರೆ ಹಾಗೂ ಅದರ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ನಾಚಿಕೆಪಡಬೇಕು. ಶಾಮನೂರು ನನ್ನ ವಿರುದ್ಧ ಏಕವಚನದಲ್ಲಿ ನಿಂದಿಸಿದ್ದಾರೆ. ನಾನು ನವ ತರುಣನಲ್ಲ ಆದರೆ ಅವರಷ್ಟು ವೃದ್ಧನಲ್ಲ. ಹಾಗಾಗಿ ಅವರ ಕೋಪ ವಯಸ್ಸಿನ ಗುಣವೆಂದು ಸುಮ್ಮನಿದ್ದೇನೆ. ನುಂಗಿ ನೀರು ಕುಡಿದಿದ್ದಾನೆ ಎಂದು ಆರೋಪಿಸಿದ್ದಾರೆ. ಈ ಬಗ್ಗೆ ಒಂದೇ ಒಂದು ಉದಾಹರಣೆ ನೀಡಿದರೂ ಅವರ

▶ 8ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 18 ಡಿಸೆಂಬರ್ 2022

ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವೈದ್ಯರಿಂದ ಯಶಸ್ವಿ ಹೃದಯ ಕಸಿ ಚಿಕಿತ್ಸೆ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಸ್ವಾಮೀಜಿ, ಡಿ.ಮಾದೇಗೌಡ, ಪ್ರೊ.ಎಂ.ಕೃಷ್ಣೇಗೌಡ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಹೆಚ್.ಆರ್.ಲೀಲಾವತಿ, ಡಾ.ವಸುಂಧರ ದೊರೆಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಶಶಿಧರಪ್ರಸಾದ್, ನಾಗೇಶ್ ಬೆಟ್ಟಕೋಟೆ, ಮಡ್ಡಿಕೆರೆ ಗೋಪಾಲ್, ರಾಜಶೇಖರ ಕದಂಬ, ಲತಾ ಮೋಹನ್ ಇದ್ದರು.

ಮೈಸೂರು,ಡಿ.17(ಆರ್‌ಕೆ)– ಅಂತಿಮ ಹಂತದ ಹೃದಯ ವೈಫಲ್ಯದಿಂದ ಬಳಲುತ್ತಿದ್ದ ನಾಲ್ವರಿಗೆ ಹೃದಯ ಕಸಿ ಯಶಸ್ವಿ ಚಿಕಿತ್ಸೆ ಮೂಲಕ ಅವರಿಗೆ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ತಜ್ಞ ವೈದ್ಯರು ಮರುಜೀವ ನೀಡಿದ್ದಾರೆ.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹೃದಯ ತಜ್ಞರಾದ ಡಾ. ಎಂ.ಎನ್. ರವಿ, ಡಾ. ವಿ. ಕೇಶವಮೂರ್ತಿ ಹಾಗೂ ಹೃದಯ ವೈಫಲ್ಯ ಕ್ಲಿನಿಕ್ ತಜ್ಞವೈದ್ಯ ಡಾ. ಯು.ಎಂ. ನಾಗಮಲ್ಲೇಶ್, ಹೃದಯ ಸಂಬಂಧಿ ಕಾಯಿಲೆಯು ಇತ್ತೀಚೆಗೆ ಮರಣ ಪ್ರಮಾಣ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ ಎಂದರು.

ದೇಶದಲ್ಲಿ ಸುಮಾರು ಶೇಕಡಾ ಒಂದೂವರೆಯಿಂದ ಎರಡರಷ್ಟು ರೋಗಿಗಳು ಕೊನೆಯ ಹಂತದ ಹೃದಯ ವೈಫಲ್ಯದಿಂದ ಸಾವನ್ನಪ್ಪುತ್ತಿದ್ದಾರೆ. ಅದೇ ಪರಿಸ್ಥಿತಿಯಲ್ಲಿದ್ದ ಮೈಸೂರಿನ ನಂದೀಶ, ಕೇಶವ, ಕುಮಾರ ಮತ್ತು ಶಿವಕುಮಾರ್ ಎಂಬುವರಿಗೆ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೃದಯ ವೈಫಲ್ಯ ಕ್ಲಿನಿಕ್‌ನಲ್ಲಿ ಪರೀಕ್ಷಿಸಿ ಹೃದಯ ಕಸಿ ಚಿಕಿತ್ಸೆ ಪಡೆಯಬೇಕೆಂದು ಸಲಹೆ ನೀಡಲಾಗಿತ್ತು. ಅದರಂತೆ ಆಸ್ಪತ್ರೆಯ ನಿರ್ವಹಿಸುತ್ತಿರುವ ಬೆಂಗಳೂರಿನ ಎಂ.ಎಸ್. ರಾಮಯ್ಯ–ನಾರಾಯಣ ಹಾರ್ಟ್ ಸೆಂಟರ್‌ನಲ್ಲಿ ಹೃದಯ ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಯಿತು ಎಂದು ತಿಳಿಸಿದರು.

ಖ್ಯಾತ ಹೃದಯ ಕಸಿ ತಜ್ಞ ಡಾ.ನಾಗಮಲ್ಲೇಶ ನೇತೃತ್ವದ ವೈದ್ಯರ ತಂಡವು ಮೂರೂವರೆ ವರ್ಷಗಳ ಹಿಂದೆ ಅವರಿಗೆ ಹೃದಯ ಕಸಿ (ಮರು ಜೋಡಣೆ) ಮಾಡಿದರು. ಅಂದಿನಿಂದ ಇಂದಿನವರೆಗೂ ಒಮ್ಮೆಯೂ ಅವರಿಗೆ ಮತ್ತೆ ಹೃದಯದ ತೊಂದರೆ ಕಾಣಿಸಿಕೊಂಡಿಲ್ಲ. ಅವರು ಎಂದಿನಂತೆ ತಮ್ಮ ಕೆಲಸ ಕಾರ್ಯ ಮಾಡುತ್ತಿದ್ದು, ಎಲ್ಲರಂತೆ ಸಾಮಾನ್ಯರಂತೆ ಜೀವನ ನಡೆಸುತ್ತಿದ್ದಾರೆ. ಹೃದಯ ಕಸಿ ಚಿಕಿತ್ಸೆ ಮಾಡಿಸಿಕೊಂಡ ನಾಲ್ಕೂ ಮಂದಿ ಸಂತೋಷದಿಂದ ಎಲ್ಲರಂತೆ ಜೀವನ ನಡೆಸುತ್ತಿದ್ದಾರೆ. ಹೃದ್ರೋಗಿಗಳಿಗೆ ಔಷಧಿ, ಸ್ಟಂಟ್, ಬೈಪಾಸ್ ಸರ್ಜರಿ, ವಾಲ್ವ್ ಆಪರೇಷನ್‌ನಂತಹ ಚಿಕಿತ್ಸೆ ನೀಡಿದ ನಂತರವೂ ಫಲಕಾರಿಯಾಗದೆ ಅಂತಿಮ ಹಂತದ ಹೃದಯ ವೈಫಲ್ಯದಿಂದ ಬಳಲುತ್ತಿದ್ದವರಿಗೆ ಮೆದುಳು ನಿಷ್ಕ್ರಿಯವಾಗಿ ದಾನ ಮಾಡಿದ ಹೃದಯಗಳನ್ನು ನಿಗದಿತ ಅವಧಿಯೊಳಗೆ ತಂದು ಮರು ಜೋಡಣೆ ಮಾಡಿದಲ್ಲಿ ಅಂತಹವರ ಪ್ರಾಣವನ್ನು ಉಳಿಸಬಹುದಾಗಿದೆ ಎಂದು ಡಾ.ನಾಗಮಲ್ಲೇಶ ತಿಳಿಸಿದರು.

ಅಂತಿಮ ಹಂತದ ಹೃದಯ ವೈಫಲ್ಯದಿಂದ ಬಳಲುತ್ತಿದ್ದ ನಾಲ್ವರಿಗೆ ಮರುಜೀವ!



ಐಸಿಎಂಆರ್ ಪ್ರಕಾರ ವಿಶ್ವದ ಹೃದ್ರೋಗ ತೊಂದರೆಯಿಂದ ಬಳಲುತ್ತಿರುವವರ ಪೈಕಿ ಭಾರತದಲ್ಲಿ ಶೇ. 60ರಷ್ಟಿದ್ದಾರೆ. ಅದರಲ್ಲಿ ಹೃದಯ ವೈಫಲ್ಯದಿಂದ 5ನೇ 1 ಭಾಗದ ಜನರು ಬಳಲುತ್ತಿದ್ದಾರೆ. ಈ ಸಮಸ್ಯೆ ಪರಿಹರಿಸಬೇಕೆಂದೇ ಆರಂಭವಾಗಿರುವ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೃದಯ ವೈಫಲ್ಯ ಘಟಕವನ್ನು ಸ್ಥಾಪಿಸಲಾಗಿದೆ ಎಂದು ಡಾ. ಎಂ.ಎನ್. ರವಿ ಇದೇ ವೇಳೆ ನುಡಿದರು.

ಈ ಸಂದರ್ಭ ಮಾತನಾಡಿದ ಆಸ್ಪತ್ರೆ ಹಿರಿಯ ಹೃದ್ರೋಗ ತಜ್ಞ ಡಾ.ವಿ.ಕೇಶವಮೂರ್ತಿ, ಹೃದಯ ವೈಫಲ್ಯ ಕ್ಲಿನಿಕ್ ವಿಶೇಷ ಘಟಕವು ಎಲ್ಲಾ ಬಗೆಯ ಅತ್ಯಾಧುನಿಕ ಕ್ಯಾಥ್‌ಲ್ಯಾಬ್ ಮತ್ತು ತಜ್ಞರ ತಂಡವನ್ನು ಹೊಂದಿದ್ದು, ಅತ್ಯುತ್ತಮ ವೈದ್ಯಕೀಯ ಸೇವೆ ನೀಡುತ್ತಿದೆ. ಹೃದಯದ ತೊಂದರೆ ಇದ್ದವರಿಗೆ ಐಸಿಯುನಲ್ಲಿ ದಾಖಲಿಸಿಕೊಂಡು ಚಿಕಿತ್ಸೆ ನೀಡುತ್ತೇವೆ. ಆದಾಗ್ಯೂ ಹೃದಯ ವೈಫಲ್ಯವಾದವರಿಗೆ ಅಂತಿಮ ಹಂತದಲ್ಲಿ ಹೃದಯ ಕಸಿ (ಹಾರ್ಟ್ ಟ್ರಾನ್ಸ್‌ಪ್ಲಾಂಟೇಷನ್) ಮಾಡುತ್ತೇವೆ ಎಂದರು.

ಮೆದುಳು ನಿಷ್ಕ್ರಿಯವಾದ ರೋಗಿಯ ಅಂಗಾಂಗಗಳನ್ನು ದಾನ ಮಾಡಲು ಸಂಬಂಧಿಕರು ಒಪ್ಪಿಗೆ ನೀಡಿದಲ್ಲಿ ನಿಗದಿತ ಸಮಯದೊಳಗೆ ನೋಂದಣಿ ಮಾಡಿ ಕಾಯುತ್ತಿದ್ದ ಹೃದಯ ವೈಫಲ್ಯದಿಂದ ಬಳಲುವವರಿಗೆ ಮರು ಜೋಡಣೆ ಮಾಡಿ ಪ್ರಾಣ ರಕ್ಷಿಸಬಹುದಾಗಿದೆ. ಎಲ್ಲರೂ ಈ ರೀತಿ ಹೃದಯ, ಕಿಡ್ನಿ, ಲಿವರ್, ಕಣ್ಣುಗಳು ಸೇರಿದಂತೆ ಅಂಗಾಂಗ ದಾನ ಮಾಡಿದಲ್ಲಿ ಅದೆಷ್ಟೋ ರೋಗಿಗಳ ಪ್ರಾಣ ರಕ್ಷಿಸಬಹುದು. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು ಅತ್ಯಗತ್ಯ ಎಂದರು. ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಹೃದಯ ಕಸಿ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಿರುವ ನಂದೀಶ, ಕೇಶವ, ಕುಮಾರ ಹಾಗೂ ಶಿವಕುಮಾರ್ ಅವರೂ ವೈದ್ಯರ ಯಶಸ್ವಿ ಚಿಕಿತ್ಸೆಯಿಂದಾಗಿ ಮರು ಜೀವ ಪಡೆದು ಸಾಮಾನ್ಯರಂತೆ ಜೀವನ ನಡೆಸುತ್ತಿರುವುದಾಗಿ ತಿಳಿಸಿದರು.

ಗೃಹ ಬಳಕೆ ವಸ್ತುಗಳ ಪ್ರದರ್ಶನ: ಗೃಹಶೋಭೆಗೆ ಮೇಯರ್ ಚಾಲನೆ



ಮೈಸೂರು, ಡಿ.17(ಜಿಎ)– ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಅಂತರರಾಷ್ಟ್ರೀಯ ಗೃಹ ಬಳಕೆಯ ವಸ್ತುಗಳ ಪ್ರದರ್ಶನ ಮತ್ತು ಮಾರಾಟದ ಗೃಹಶೋಭೆಗೆ ಮೇಯರ್ ಶಿವಕುಮಾರ್ ಶುಕ್ರವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗುಣಮಟ್ಟದ ವಸ್ತುಗಳು ಗೃಹಶೋಭೆಯ ವಸ್ತುಗಳ ಪ್ರದರ್ಶನ ಹಾಗೂ ಮಾರಾಟದಲ್ಲಿದೆ. ಜನರಿಗೆ ಅಗತ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವುದರಿಂದ ಮೆಚ್ಚುಗೆ ಕೂಡ ವ್ಯಕ್ತವಾಗಿದೆ. ವಿವಿಧ ಮಾದರಿಯ ಕೇಕ್ ಪ್ರದರ್ಶನ ಜನರನ್ನು ಸೆಳೆಯುತ್ತಿದೆ ಎಂದು ಹೇಳಿದರು.

ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಮಾತನಾಡಿ, ಗೃಹಶೋಭೆಯಲ್ಲಿ ಗ್ರಾಹಕರಿಗೆ ಗುಣಮಟ್ಟದ ಸೇವೆ ಜೊತೆಗೆ ವ್ಯಾಪಾರ ಕೂಡ ಚೆನ್ನಾಗಿ ನಡೆಯಲಿ. ನೂತನವಾಗಿ ನಿರ್ಮಾಣವಾಗುತ್ತಿರುವ ಸಂಸತ್ತಿನ ಕೇಕ್ ಮಾದರಿ ನೋಡಿದರೆ ಗ್ರಾಹಕರಿಗೆ ತುಂಬ ಸಂತಸವಾಗಲಿದೆ ಎಂದರು.

ಡಾಲ್ಫಿನ್ ಬೇಕರಿಯಿಂದ ನೂತನ ಪಾರ್ಲಿಮೆಂಟ್ ಮಾದರಿ ಕೇಕ್, ಅಶೋಕ ಸ್ತಂಭ, ಫುಟ್‌ಬಾಲ್ ಚಾಂಪಿಯನ್ ಟೀ–ಶರ್ಟ್ ಮಾದರಿ ಕೇಕ್ ಸೇರಿದಂತೆ ಹಲವು ರೀತಿಯ ಕೇಕ್‌ಗಳನ್ನು ತಯಾರಿಸಲಾಗಿದೆ. ಅಲ್ಲದೇ ಪುರುಷ ಮತ್ತು ಮಹಿಳೆಯರ ಉಡುಪುಗಳು, ಪಾದರಕ್ಷೆ, ಸೋಲಾರ್ ಹೀಟರ್, ಚಪ್ಪಲಿ, ಪಾದರಕ್ಷೆ, ಕಾಟನ್ ಬಟ್ಟೆ, ತಿಂಡಿ–ತಿನಿಸುಗಳು, ಜಿಮ್ ಸಲಕರಣೆಗಳು, ಆಕರ್ಷಕ ಬೈಕ್, ಅಡುಗೆ ಸಾಮಗ್ರಿಗಳು ಸೇರಿದಂತೆ ಇತರೆ ವಸ್ತುಗಳು ಗ್ರಾಹಕರನ್ನು ಸೆಳೆಯಲಿದೆ. ಡಿ.16 ಶುಕ್ರವಾರದಿಂದ ಆರಂಭಗೊಂಡಿರುವ ಗೃಹಶೋಭೆಯು 25ರವರೆಗೆ ಬೆಳಗ್ಗೆ 11ರಿಂದ ರಾತ್ರಿ 9ರವರೆಗೆ ಇರಲಿದೆ. ಈ ವೇಳೆ ಗೃಹಶೋಭೆ ಮಾಲೀಕ ಎಂ.ಎಸ್.ನಾಗಚಂದ್ರ, ಕೃಷ್ಣ, ನವೀನ್ ಉಪಸ್ಥಿತರಿದ್ದರು.

ಶಾಸಕರಿಂದ ಕಾಮಗಾರಿ ಪರಿಶೀಲನೆ



ಮೈಸೂರಿನ ಚಂದ್ರಮೌಳೇಶ್ವರ ದೇವಸ್ಥಾನದ ರಸ್ತೆಯಿಂದ ವಾಲ್ಮೀಕಿ ರಸ್ತೆವರೆಗೆ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ 60 ಲಕ್ಷ ರೂ. ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ವಲಯ ಕಚೇರಿ–6 ಅಭಿವೃದ್ಧಿ ಅಧಿಕಾರಿ ಹೇಗಾನಂದ್, ಅಭಿಯಂತರ ರಾಮಣ್ಣ, ನಗರಪಾಲಿಕೆ ಸದಸ್ಯ ಚಿಕ್ಕವೆಂಕಟು, ಪ್ರಧಾನ ಕಾರ್ಯದರ್ಶಿಗಳಾದ ಪುನೀತ್, ರಮೇಶ್ ಪಡುವಾರಹಳ್ಳಿ ಇತರರಿದ್ದರು.

ಗಾಂಜಾ ಮಾರಾಟಗಾರನ ಬಂಧನ

ಮೈಸೂರು,ಡಿ.17–ಗಾಂಜಾ ಮಾರಾಟಗಾರನೊಬ್ಬನನ್ನು ಬಂಧಿಸಿರುವ ಸಿಸಿಬಿ ಪೊಲೀಸರು 1.160 ಕೆಜಿ ಗಾಂಜಾ ಹಾಗೂ ಕೆಲ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಮೈಸೂರಿನ ಮಂಡಿ ಮೊಹಲ್ಲಾ ಸುನ್ನಿ ಚೌಕ ನಿವಾಸಿ ಸೈಯ್ಯದ್ ಫೈಜಲ್ ಅಲಿಯಾಸ್ ಫೈಜಲ್(22) ಎಂಬಾತ ಡಿ.15ರಂದು ಸಂಜೆ 4.25ರ ಸುಮಾರಿನಲ್ಲಿ ರಾಜೀವ್‌ನಗರದ ಶಬನಮ್ ಫಂಕ್ಷನ್ ಹಾಲ್ ಬಳಿ ನಂಬರ್ ಪ್ಲೇಟ್ ಇಲ್ಲದ ಆಕ್ಸಿಸ್ ಸ್ಕೂಟರ್‌ನಲ್ಲಿ ನಿಂತಿದ್ದ. ಆ ವೇಳೆ ಸಿಸಿಬಿ ಇನ್ಸ್‌ಪೆಕ್ಟರ್ ಜಿ. ಶೇಖರ್ ಹಾಗೂ ಸಿಬ್ಬಂದಿ ಅತ್ತ ತೆರಳಿದಾಗ ಅವರನ್ನು ನೋಡಿ ಸ್ಕೂಟರ್ ಬಿಟ್ಟು ಓಡಿದ್ದಾನೆ. ಬೆನ್ನತ್ತಿ ಆತನನ್ನು ಹಿಡಿದ ಪೊಲೀಸರು, ಪರಿಶೀಲನೆ ನಡೆಸಿದಾಗ ಆತನ ಬಳಿ 1.160 ಗ್ರಾಂ ಗಾಂಜಾ, ಒಂದು ಡಿಜಿಟಲ್ ತೂಕದ ಯಂತ್ರ, ಮೊಬೈಲ್, ಗಾಂಜಾ ಪ್ಯಾಕ್ ಮಾಡಲು ಬಳಸುವ ಪೌಚ್‌ಗಳು ದೊರೆತಿವೆ. ಆತನನ್ನು ಬಂಧಿಸಿದ ಸಿಸಿಬಿ ಪೊಲೀಸರು ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.



ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್‌ನ 2023ನೇ ಸಾಲಿನ ಕ್ಯಾಲೆಂಡರ್ ಅನ್ನು ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ಇತ್ತೀಚೆಗೆ ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಬಿಡುಗಡೆ ಮಾಡಿದರು. ಟ್ರಸ್ಟ್‌ನ ಬೆಂಗಳೂರು ಶಾಖೆಯ ಅಧ್ಯಕ್ಷ ಗಿರಿಯಪ್ಪ, ಪ್ರಧಾನ ಕಾರ್ಯದರ್ಶಿ ಡಾ.ನಾಗರಾಜು, ಉಪಾಧ್ಯಕ್ಷರಾದ ಬಾಲಕೃಷ್ಣ, ಡಾ.ಪುಣ್ಯವತಿ ನಾಗರಾಜು, ಡಾ.ನರಸಿಂಹಯ್ಯ ಶ್ರೀನಿವಾಸ್, ಟ್ರಸ್ಟ್‌ನ ಮೈಸೂರು ಅಧ್ಯಕ್ಷ ಡಿ.ರವಿಕುಮಾರ್, ಮಂಜೇಗೌಡ, ಚಂದ್ರು, ಕೌಶಿಕ್ ಉಪಸ್ಥಿತರಿದ್ದರು.

ಮೈಸೂರಲ್ಲಿ ನಾಳೆ ಚಿಗುರು ಕಾರ್ಯಕ್ರಮ

ಮೈಸೂರು,ಡಿ.17–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿ.19ರಂದು ಸಂಜೆ 5 ಗಂಟೆಗೆ ಲಿಂಗಾಂಬುದಿಪಾಳ್ಯದ ಅರಿವು ವಿದ್ಯಾಸಂಸ್ಥೆಯಲ್ಲಿ ಚಿಗುರು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್‌ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್, ವಿಧಾನಸಭೆ ಹಾಗೂ ವಿಧಾನಪರಿಷತ್‌ನ ಶಾಸಕರು ಹಾಗೂ ನಿಗಮ ಮಂಡಳಿ ಅಧ್ಯಕ್ಷರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಬೀರಿಹುಂಡಿ ಮಾರ್ಗ ಬಸ್ ಸಂಚಾರಕ್ಕೆ ಮನವಿ



ಮೈಸೂರು, ಡಿ.17– ಬೋಗಾದಿ ಬೀರಿಹುಂಡಿ ಮಾರ್ಗದಲ್ಲಿ ಹೆಚ್ಚುವರಿ ಬಸ್ ನಿಯೋಜಿಸುವಂತೆ ಮಾಜಿ ಗ್ರಾ.ಪಂ. ಸದಸ್ಯ ಹುಯಿಲಾಳು ರಾಮಸ್ವಾಮಿ ಆಗ್ರಹಿಸಿದ್ದಾರೆ. ಬೋಗಾದಿ, ಬೀರಿಹುಂಡಿ, ಮರಟಿಕ್ಯಾತನಹಳ್ಳಿ, ಗಣಗರಹುಂಡಿ ಹಾಗೂ ದಾಸನಕೊಪ್ಪಲಿನಲ್ಲಿ ನಿತ್ಯವೂ ಶಾಲಾ ಮಕ್ಕಳು ಮತ್ತು ಕೂಲಿ ಕಾರ್ಮಿಕರು ಬಸ್‌ಗಾಗಿ ಕಾಯುವ ಸ್ಥಿತಿ ನಿರ್ಮಾಣವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಈ ಮಾರ್ಗದಲ್ಲಿ ಹೆಚ್ಚುವರಿ ಬಸ್ ಓಡಿಸುವಂತೆ ಮನವಿ ಮಾಡಿದ್ದಾರೆ.

ನಾಳೆ ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು,ಡಿ.17–ಮೈಸೂರು ನಗರಪಾಲಿಕೆ ವತಿಯಿಂದ ಡಿ.19ರಂದು ಬೆಳಗ್ಗೆ 11 ಗಂಟೆಗೆ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ಪಾಲಿಕೆಯ 2022–23ನೇ ಸಾಲಿನ ಪರಿಷ್ಕೃತ ಹಾಗೂ 2023–24ನೇ ಸಾಲಿನ ಅಂದಾಜು ಆಯವ್ಯಯವನ್ನು ತಯಾರಿಸಲು ಸಾರ್ವಜನಿಕ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಕನಕದಾಸರ ತತ್ವ ಸಿದ್ಧಾಂತಗಳನ್ನು ಎಲ್ಲರೂ ಅಳವಡಿಸಿಕೊಳ್ಳಿ: ಮರೀಗೌಡ

ಮೈಸೂರು, ಡಿ.17– ದಾಸಶ್ರೇಷ್ಠ ಕನಕದಾಸರ ತತ್ವ–ಸಿದ್ಧಾಂತಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ ಕರೆ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಲಿಂಗದೇವರುಕೊಪ್ಪಲು ಗ್ರಾಮದಲ್ಲಿ ನಡೆದ ಶ್ರೀ ಕನಕದಾಸರ 535ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನಕದಾಸರು 15ನೇ ಶತಮಾನದಲ್ಲಿಯೇ ಸಮಾಜದಲ್ಲಿನ ಅಸ್ಪೃಶ್ಯತೆ, ಜಾತಿ ವ್ಯವಸ್ಥೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ವಚನಗಳು, ಮುಂಡಿಕೆಗಳು, ರಾಮಧಾನ್ಯ ಚರಿತ್ರೆ, ನಳಚರಿತ್ರೆ, ಹರಿಭಕ್ತಿ ಸಾರ, ಮೋಹನ ತರಂಗಿಣಿಯಂತಹ ಕೃತಿಗಳನ್ನು ರಚಿಸಿ ಸಮಾಜದಲ್ಲಿ ಬದಲಾವಣೆ ತರಲು ಪ್ರಯತ್ನಿಸಿದ ಮಹಾಪುರುಷರು. ಇಂದಿಗೂ ಸಮಾಜದಲ್ಲಿ ಅಸ್ಪೃಶ್ಯತೆ, ಅಸಮಾನತೆ, ಜಾತಿಯತೆ ತಾಂಡವವಾಡುತ್ತಿದ್ದು, ಈ ಸಂದರ್ಭದಲ್ಲಿ ನಾವು ಅಂಬೇಡ್ಕರ್ ಅವರನ್ನು ನೆನೆದುಕೊಳ್ಳಬೇಕು. ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ, ಹೋರಾಟಗಳ ಮೂಲಕ ತಮ್ಮ ಹಕ್ಕುಗಳನ್ನು ಪಡೆಯಿರಿ ಎಂದು ಹೇಳಿದರು.



ಬುದ್ಧ, ಬಸವಣ್ಣನವರು ಸಹ ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದರು. ಅದೇ ರೀತಿ ಸಿದ್ದರಾಮಯ್ಯನವರು ಸಹ ಕನಕದಾಸರು, ಬಸವಣ್ಣ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಂವಿಧಾನದ ಆಶಯಗಳನ್ನು ಈಡೇರಿಸಲು ಪ್ರಯತ್ನಿಸುತ್ತಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ ಮಾತನಾಡಿ, ಕನಕದಾಸರ ಕಾವ್ಯಗಳನ್ನು ಪ್ರತಿಯೊಬ್ಬರು ಓದಬೇಕು. ಕನಕದಾಸರು ಇಡೀ ಮನುಕುಲದ ಆಸ್ತಿ ಆಗಿದ್ದು, ಅವರ ನಾಟಕಗಳನ್ನು ಪ್ರತಿಯೊಂದು ಊರಿನಲ್ಲಿ ಆಡುವುದರಿಂದ ಅವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿ, ಸಿದ್ದರಾಮಯ್ಯನವರು 500ನೇ ಕನಕ ಜಯಂತಿಯನ್ನು ರಾಜ್ಯಾದ್ಯಂತ ಮಾಡಿದ್ದರಿಂದ ಜನರು ಜಾಗೃತರಾಗಿ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿಯೂ ಕನಕ ಜಯಂತಿಯನ್ನು ಆಚರಿಸುವಂತಾಗಿದೆ ಎಂದರು. ಸಮಾರಂಭದಲ್ಲಿ ಜಿ.ಪಂ. ಮಾಜಿ ಸದಸ್ಯರಾದ ಎಸ್.ಅರುಣ್‌ಕುಮಾರ್, ಮಾದೇಗೌಡ, ಕಾಮನಕೊಪ್ಪಲು ಕರೀಗೌಡ, ಹಿನಕಲ್ ಹೊನ್ನಪ್ಪ ಶಿವೇಗೌಡ, ಮಹೇಶ್ ಕೆರೆಹುಂಡಿ, ಬೋರೇಗೌಡ, ಸುರೇಶ್, ಚಿಕ್ಕಣ್ಣ, ಯೋಗೀಶ್, ಸ್ವಾಮಿ, ಜೆ.ಮಂಜು, ಜಯರಾಂ, ರಾಮೇಗೌಡ, ಮಹೇಶ್ ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಡಯಾಬಿಟಿಸ್ ಮತ್ತು ಸಂಧಿವಾತ ಕಾಯಿಲೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಶ್ರೀ ಕೈವಾರ ಯೋಗಿನಾರಾಯಣೇ ಯತೀಂದ್ರರ ಬಲಿಜ ಸಂಘ:** ಶ್ರೀ ಸತ್ಯನಾರಾಯಣ ಪೂಜಾ ಮಹೋತ್ಸವ, ದಿನದರ್ಶಿಕೆ ಬಿಡುಗಡೆ, ಸ್ಥಳ: ಶ್ರೀ ದುರ್ಗಾದೇವಿ ದೇವಸ್ಥಾನ, ಇಟ್ಟಿಗೆಗೂಡು, ಬೆಳಗ್ಗೆ 9.30ಕ್ಕೆ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಬಲಮುರಿ ಗಣಪತಿ ದೇವಸ್ಥಾನ:** 33ನೇ ವಾರ್ಷಿಕೋತ್ಸವದ ಪ್ರಯುಕ್ತ ಬೆಳಗ್ಗೆ 9ಕ್ಕೆ ಶ್ರೀ ಸ್ವಾಮಿರವರಿಗೆ ಅವಭೃತಸ್ನಾನ, ಶ್ರೀ ಶುಭಕೃತು ನಾಮ ಸಂವತ್ಸರ ದಕ್ಷಿಣಾಯನ, ಹಿಮದೃತು, ಮಾರ್ಗಶಿರ ಕೃಷ್ಣ ಪಕ್ಷ ನವಮಿ, ಶ್ರೀ ಲಕ್ಷ್ಮೀಗಣಪತಿ ಹೋಮ, ದಶಮಿ, ಶ್ರೀ ಮಹಾಲಕ್ಷ್ಮಿ ಹೋಮ, ಬೆಳಗ್ಗೆ 11ಕ್ಕೆ ಮಹಾಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ, ಸ್ಥಳ: ದೇವಸ್ಥಾನ, ರೈಲ್ವೆ ನಿಲ್ದಾಣ.

■ **ಶಬರಿಮಲೆ ಶ್ರೀ ಅಯ್ಯಪ್ಪಸ್ವಾಮಿ ಪೂಜಾ ಸಮಿತಿ:** ಬೆಳಗ್ಗೆ ಮಹಾಗಣಪತಿ ಹೋಮ, ಉಷಾಪೂಜೆ, ಪಂಚಗವ್ಯಂ, ಪಂಚಕಂ, ಕಲಶ ಪೂಜೆ, ಶಿವೇಲಿ, ವಾದ್ಯಂ, ಕಲಶಾಭಿಷೇಕ, ಉದಯಾಸ್ತಮಾನ ಪೂಜೆ, ದೀಪಾರಾಧನೆ, ಅತ್ತಾಳಪೂಜೆ, ಶ್ರೀಭೂತ ಬಲಿ ವಿಳಕ್ಕು ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸಾನ್ನಿಧ್ಯ: ಗುರುವಾಯೂರು ತಂತ್ರಿಗಳಾದ ಡಾ.ಚೆನ್ನಾಸ್ ದಿನೇಶನ್ ನಂಬೂದಿರಿ ಪಾಡ್, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ.

■ **ಮೈಸೂರು ಹಿಮೋಫೀಲಿಯಾ ಸೊಸೈಟಿ:** ಹಿಮೋಫೀಲಿಯಾ ಪುನರ್ವಸತಿ ಶಿಬಿರ, ಉದ್ಘಾಟನೆ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ, ಅತಿಥಿಗಳು: ಡಿಹೆಚ್‌ಓ ಡಾ.ಪ್ರಸಾದ್, ಜಿಲ್ಲಾ ಅಂಗವಿಕಲ ಅಭಿವೃದ್ಧಿ ಅಧಿಕಾರಿ ಆರ್.ಮಾಲಿನಿ, ಡಾ.ನೀಲನಗೌಡ ಪಾಟೀಲ್, ನಾರಾಯಣಸ್ವಾಮಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ರವಿಕುಮಾರ್, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ, ಬೆಳಗ್ಗೆ 10ಕ್ಕೆ.

■ **ಶ್ರೀ ಶಾರದಾ ಮಹಿಳಾ ಸೇವಾ ಸಮಾಜ :** 50ನೇ ವರ್ಷದ ಸುವರ್ಣ ಮಹೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಡಾ.ವಿಜಯಲಕ್ಷ್ಮಿ ಐ.ಬಾಳೇಕುಂದ್ರಿ, ಅತಿಥಿಗಳು: ಸಂಸ್ಕೃತಿ ಚಿಂತಕ ಡಾ.ಜ್ಯೋತಿಶಂಕರ್, ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಸ್.ರಮಾನಂದ, ಅಧ್ಯಕ್ಷತೆ: ಶ್ರೀ ಶಾರದಾ ಮಹಿಳಾ ಸೇವಾ ಸಮಾಜದ ಅಧ್ಯಕ್ಷೆ ಶ್ರೀಮತಿ ಶೋಭಾ ಜೈಪ್ರಕಾಶ್, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್, ಬೆಳಗ್ಗೆ 10ರಿಂದ.

■ **ಅನಾಥಾಲಯ, ಸಾಹಿತ್ಯ ಸಂಘ:** ವಿ.ನಾರಾಯಣರಾವ್ ಸ್ಮಾರಕ ಅಂತರ ಕಾಲೇಜು ಕನ್ನಡ ಪ್ರಬಂಧ ಸ್ಪರ್ಧೆ, ಬೆಳಗ್ಗೆ 9ಕ್ಕೆ; ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆ, ಸ್ಥಳ: ಸದ್ವಿದ್ಯಾ ಶಿಕ್ಷಣ ಸಂಸ್ಥೆ, ಬೆಳಗ್ಗೆ 10.30ಕ್ಕೆ.

■ **ಮಂಥನ ಮೈಸೂರು ವೈಚಾರಿಕ ವೇದಿಕೆ:** ರಾಮ್ ಮಾಧವ್ ಅವರ Partitioned Freedom ಪುಸ್ತಕ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮ, ಪುಸ್ತಕ ಬಿಡುಗಡೆ: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಸ್ಥಳ: ವಿಜ್ಞಾನ ಭವನ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು:** ಲೇಖಕಿ ವಸಂತ ಕಲ್‌ಬಾಗಲ್ ಅವರ ಅನುಭವ ಕಥನಗಳು 'ಸಮ್‌ದರ್ಶನ' ವ್ಯಕ್ತಿ ಚಿತ್ರಗಳ ಸಂಕಲನ ಮತ್ತು ಅಡ್ಡಿತುಷ ಬಕ್ಕಜಬಿನ್ನಿ ಲಲಿತ ಪ್ರಬಂಧಗಳು ಕೃತಿಗಳ ಲೋಕಾರ್ಪಣಾ ಸಮಾರಂಭ, ಅಧ್ಯಕ್ಷತೆ: ಹಿರಿಯ ಗಾಯಕಿ ಲೀಲಾವತಿ, ಕೃತಿಗಳ ಪರಿಚಯ: ವಿಮರ್ಶಕ ಪ್ರೊ.ಮೈಸೂರು ಕೃಷ್ಣಮೂರ್ತಿ, ಅತಿಥಿಗಳು: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಐಡಿಯಲ್ ಜಾವಾ ರೊಟರಿ ಸಂಸ್ಥೆ, ಬೆಳಗ್ಗೆ 10.30ಕ್ಕೆ.



ಇಂದಿನ ಪಂಚಾಂಗ

18.12.2022 ಭಾನುವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ : ಚಿತ್ತ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಮಹಿಳಾ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು:** ಮೊದಲನೇ ವರ್ಷದ ಬಿಇ ಮತ್ತು ಬಿ.ಆರ್ಕಿಟೆಕ್ಟ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಡಿಎಫ್‌ಆರ್‌ಎಲ್ ನಿರ್ದೇಶಕ ಡಾ. ಅನಿಲ್ ದತ್ತ ಸೆಮ್ವಾಲ್, ಕೆ.ಜಯಪ್ರಕಾಶ್‌ರಾವ್, ಜೆಎಸ್‌ಎಸ್‌ಎಸ್ ಕಾರ್ಯದರ್ಶಿ ಶ್ರೀಮತಿ ವನಜ ಬಿ.ಪಂಡಿತ್, ಅಧ್ಯಕ್ಷತೆ : ಜೆಎಸ್‌ಎಸ್‌ಎಸ್ ಅಧ್ಯಕ್ಷ ಎಂ.ಜಗನ್ನಾಥ್ ಶೆಣೈ, ಸ್ಥಳ: ರಂಗಮಂಟಪ, ಪ್ರೊ.ಬಿ.ಎಸ್. ಪಂಡಿತ್ ಮೆಮೋರಿಯಲ್ ಬ್ಲಾಕ್, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಗಮಕ ಕಲಾ ಪರಿಷತ್ತು :** ಕಾವ್ಯ ವ್ಯಾಸಂಗ ಗೋಷ್ಠಿ–33, ಕಾವ್ಯ : ಪು.ತಿ.ನ. ಅವರ ಶ್ರೀ ಹರಿಚರಿತ್ರೆ, ಉಲ್ಲಾಸ–31, ಗೋಕುಲ ಪ್ರಸ್ಥಾನಂ, ಕಾವ್ಯವಾಚನ: ವಿದುಷಿ ಧರಿತ್ರಿ ಆನಂದರಾವ್, ವ್ಯಾಖ್ಯಾನ: ಫಣಿ ಶ್ರೀನಿವಾಸ್, ಸ್ಥಳ: 1315/2, ಹರಿಪ್ರಿಯ, 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ರಾಷ್ಟ್ರೀಯ ಮಾನವ ಹಕ್ಕುಗಳ ಸಂರಕ್ಷಣಾ ಪರಿಷತ್ ಟ್ರಸ್ಟ್ :** ರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಸಹಾಯಕ ಪೊಲೀಸ್ ಆಯುಕ್ತ ಎಸ್.ಇ. ಗಂಗಾಧರಸ್ವಾಮಿ, ಸ್ಥಳ: ಟ್ರಸ್ಟ್ ಆವರಣ, ಜಯನಗರ, ಬೆಳಗ್ಗೆ 11ಕ್ಕೆ.

■ **ಗೃಹಶೋಭೆ :** ಗೃಹಬಳಕೆ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ರಿಂದ.

■ **ಶರಣು ವಿಶ್ವವಚನ ಫೌಂಡೇಷನ್:** 2023ರ ಶರಣು ದಿನಚರಿ, ಬಸವ ಭಾನು ಸಂಚಿಕೆ ಮತ್ತು ವಿವಿಧ ಕೃತಿಗಳ ಬಿಡುಗಡೆ, ರಾಜ್ಯ ಮಟ್ಟದ ಚಿನ್ಮಯ ಜ್ಞಾನಿ ಶಿಕ್ಷಕ ಪ್ರಶಸ್ತಿ, ಆದರ್ಶ ಶರಣ ದಂಪತಿ ಪ್ರಶಸ್ತಿ, ವಚನ ಸೇವಾರತ್ನ ಮತ್ತು ಶಿಕ್ಷಕರ ಕಣ್ಮಣಿ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ವಿಶ್ರಾಂತ ನ್ಯಾಯಾಧೀಶ ಅರಳಿ ನಾಗರಾಜ ಗಂಗಾವತಿ, ದಿನಚರಿ, ಸಂಚಿಕೆ ಮತ್ತು ಕೃತಿ ಬಿಡುಗಡೆ: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಉಪನಿರ್ದೇಶಕ ಸಿ.ಆರ್. ನಾಗರಾಜಯ್ಯ, ಅಧ್ಯಕ್ಷತೆ: ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ಡಾ.ವಚನ ಕುಮಾರಸ್ವಾಮಿ ಸ್ಥಳ: ಶ್ರೀ ನಟರಾಜ ಸಭಾಭವನ, ಶಂಕರಮಠ ರಸ್ತೆ, ಬೆಳಗ್ಗೆ 11ಕ್ಕೆ

■ **ಮೈಸೂರು ಬುಕ್ ಕ್ಲಬ್ಸ್–2015, ಹಾರ್ಪರ್ ಕಾಲಿನ್ಸ್, ಇಂಡಿಯಾ:** ಡಾ. ದೀಪ್ತಿ ನವರತ್ನ ಅವರು ಸಂಪಾದಿಸಿರುವ 'ದಿ ಮಾವರಿಕ್ ಮಹಾರಾಜ' ಕೃತಿ ಕುರಿತು ಸಂವಾದ, ಉಪಸ್ಥಿತರು: ಡಾ.ಸಿ.ನಾಗಣ್ಣ, ಪಂಡಿತ್ ರಾಜೀವ್ ತಾರಾನಾಥ್, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಗಾರ್ಡೇನಿಯಾ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಣಾ ಸಮಾರಂಭ, ಸಾನ್ನಿಧ್ಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ: ವಿದ್ವಾಂಸ ಡಾ.ಅನಂತರಾಮು, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.

■ **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ಹೆಬ್ಬಾರ್ ಶ್ರೀ ವೈಷ್ಣವ ಗ್ರಾಮಾಂತರ ಉಪಸಭೆ :** ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ಶ್ರೀ ಆಂಡಾಳ್ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಮಂದಿರದ ಆವರಣ, ವಿ.ವಿ. ಮೊಹಲ್ಲಾ, ಸಂಜೆ 6ರಿಂದ.

■ **ಡಾ.ಪುಟ್ಟರಾಜ ಗವಾಯಿಗಳ ಯೋಗ ಮತ್ತು ಧ್ಯಾನ ಪ್ರತಿಷ್ಠಾನ:** ವಾರ್ಷಿಕೋತ್ಸವ ಮತ್ತು ನೂತನ ದಿನದರ್ಶಿಕೆ ಬಿಡುಗಡೆ ಸಮಾರಂಭ, ಉದ್ಘಾಟನೆ: ನಗರ ಪಾಲಿಕೆ ಸದಸ್ಯೆ ಶಾರದಮ್ಮ ಈಶ್ವರ, ದಿನದರ್ಶಿಕೆ ಬಿಡುಗಡೆ: ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಸ್ಥಳ: ಈಜುಕೊಳದ ಪ್ರಾಂಗಣ, ಜೆ.ಪಿ.ನಗರ 2ನೇ ಹಂತ, ಸಂಜೆ 6ರಿಂದ.

■ **ಶ್ರೀ ಮಹಾಜನ ಸಭಾ:** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ಹೆಬ್ಬಾರ್ ಶ್ರೀವೈಷ್ಣವ ಉಪಸಭಾ, ಕೆ.ಆರ್. ವನಂ:** ಡಾ.ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ.ಕಮಲರಾಮನ್‌ರವರ ಮಂದಿರ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ.

■ **ನಾದರಂಗ:** ನಾಟಕೋತ್ಸವ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಆಶಯ ನುಡಿ: ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ನಾದರಂಗದಿಂದ ಎಚ್ಚಮ ನಾಯಕ ಐತಿಹಾಸಿಕ ನಾಟಕ ಪ್ರದರ್ಶನ, ನಿರ್ದೇಶನ: ರಂಗಸ್ವಾಮಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.45ಕ್ಕೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ.

■ **ಮುದ್ದುರಾಮ ಪ್ರತಿಷ್ಠಾನ, ಮೈಸೂರು:** ಮುದ್ದುರಾಮ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು: ಅಂಕಣಕಾರ ಡಾ.ಗುರುರಾಜ ಕರಜಗಿ, ಮುಖ್ಯ ಅತಿಥಿಗಳು: ಸಂಸ್ಕೃತಿ ಪೋಷಕ ಐ.ಎಂ. ವಿಠ್ಠಲಮೂರ್ತಿ, ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್, ಸಾಹಿತಿ ಪ್ರೊ. ಮಲೆಯೂರು ಗುರುಸ್ವಾಮಿ, ಉಪಸ್ಥಿತರು: ಮುದ್ದುರಾಮ ಪ್ರತಿಷ್ಠಾನ ಅಧ್ಯಕ್ಷ ಕೆ.ಸಿ.ಶಿವಪ್ಪ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸಂಜೆ 5.30ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಸಂಜೆ 6ರಿಂದ ವಿದುಷಿ ಮಹತಿ ರಘುರಾವ್ ಅವರಿಂದ ಗಾಯನ, ಸಂಜೆ 7.15ರಿಂದ ವಿದುಷಿ ಮಂಜುನಾಥ್ ಅವರಿಂದ ಗಾಯನ, ವಿದ್ವಾನ್ ಅವೋಘ್ ನಡದೂರ್–ಪಿಟೀಲು, ವಿದ್ವಾನ್ ಕುಮಾರಸ್ವಾಮಿ–ಮೃದಂಗ, ಸ್ಥಳ: ಶ್ರೀರಾಮ ಮಂದಿರ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣ ಆರಾತ್ರಿಕ ಸ್ತೋತ್ರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಗೋಪಾಲಪುರದಲ್ಲಿಂದು, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಗ್ರಾಪಂ ಸದಸ್ಯ ಶ್ರೀಮತಿ ರಾಜಮ್ಮ ಅವರಿಂದ ಧ್ವಜಾರೋಹಣ, ಸಂಜೆ 4.30ಕ್ಕೆ ಡಾ. ಜಿ. ಮಂಜುನಾಥ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಮಾಜಿ ಸೆನೆಟ್ ಸದಸ್ಯ ಕೆ.ಟಿ. ಕೃಷ್ಣಪ್ಪ, ಮುಖ್ಯ ಅತಿಥಿಗಳು : ಸಹಾಯಕ ಪ್ರಾಧ್ಯಾಪಕರಾದ ಡಾ. ಸಂಜೀವೇಗೌಡ, ಜಿ. ಮಹೇಶ್.

ಶ್ರೀ ಸುತ್ತೂರು ಕ್ಷೇತ್ರ, ನಂಜನಗೂಡು ತಾಲೂಕು

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ.

ತಿ. ನರಸೀಪುರದಲ್ಲಿಂದು

■ **ಜಾಗತಿಕ ಲಿಂಗಾಯತ ಮಹಾಸಭಾ :** ಲಿಂಗಾಯತ ಧರ್ಮ–ಜಾಗೃತಿ ಸಮಾವೇಶ, ಸಾನ್ನಿಧ್ಯ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ಗುರುಬಸವ ಸ್ವಾಮೀಜಿ, ಶ್ರೀ ಕೋರಣೇಶ್ವರ ಸ್ವಾಮೀಜಿ, ಶ್ರೀ ಬಸವಯೋಗಿ ಪ್ರಭುಗಳು, ಉದ್ಘಾಟನೆ: ಡಾ. ಜಾಮದಾರ, ಸ್ಥಳ: ಕೃಷಿ ಉತ್ಪನ್ನ ಮಾರುಕಟ್ಟೆ ಆವರಣ, ತಿ. ನರಸೀಪುರ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ–ಎಂ.ರಾಘವೇಂದ್ರ, ಜಿ.ಪುಷ್ಪಲತಾ, ವ್ಯಾಖ್ಯಾನ– ಕೆ.ಎಲ್.ಪದ್ಮಿನಿ ಹೆಗಡೆ, 9.40 ನಮ್ಮ ಆರೋಗ್ಯ–ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಕಂಡು ಬರುವ ಕಣ್ಣಿನ ತೊಂದರೆಗಳು ಮತು ಪರಿಹಾರ ಕುರಿತು ಡಾ. ಶೇಖರ್ ರಾಜು ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಶ್ರೀ ಗುರು ಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ, ನಂದಗೋಕುಲ, ಪ್ರಸ್ತುತಿ–ಕೆ.ಬಿ.ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರನಾಮ–ರಾಜಗೋಪಾಲ್ ಭಾಗವತ್, ಎಸ್.ಶಂಕರ್, 12.45 ಜನಪದ ಸಂಗೀತ–ನಾಗಬಸಮ್ಮ ಮತ್ತು ತಂಡ, 1.20 ಭಾವಗೀತೆ–ಎನ್.ಹೇಮಾ, 3.00 ಸ್ವರಾಜ್–ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳಮದ್ದಲೆ –ಪ್ರಸಂಗ–ಗುರುದಕ್ಷಿಣೆ, ಪ್ರಸ್ತುತಿ–ಧರ್ಮಸ್ಥಳದ ಬಿ.ಭುಜಬಲಿ ಮತ್ತು ತಂಡದವರು, 6.50 ಕೃಷಿರಂಗ–ಕೃಷಿಲೋಕ, ಕೃಷಿ ಮಾಹಿತಿ, ಜನಪದ ಗೀತೆಗಳು, 8.00 ಯುವವಾಣಿ, ಯುವ ಪ್ರತಿಭೆ–ಮೈಸೂರು ತಾಲೂಕು ಗಣಗರಹುಂಡಿಯ ಕಲಾವಿದ ಮಹದೇವಸ್ವಾಮಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುವವರು ಜಾಂಪಣ್ಣ ಟಿ. ಆಶೀಹಾಳ್, 9.15 ರಂಗಗೀತೆಗಳು–ಶಾಕುಂತಲ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ರೀಟಾ ದಾಸ್–ಸರೋಡ್ ವಾದನ

ಮೈಸೂರು ಮಿತ್ರ
ಭಾನುವಾರ 18 ಡಿಸೆಂಬರ್ 2022

ಮೊದಲ ಟೆಸ್ಟ್: ಗೆಲುವಿನ ಸನಿಹದಲ್ಲಿ ಭಾರತ

ಚಟ್ಟೋಗ್ರಾಮ್, ಡಿ.17– ಬಾಂಗ್ಲಾದೇಶ ವಿರುದ್ಧ ನಡೆಯುತ್ತಿರುವ ಪ್ರಥಮ ಟೆಸ್ಟ್ ಪಂದ್ಯದಲ್ಲಿ ಭಾರತ ಗೆಲುವಿನ ಸನಿಹದಲ್ಲಿದೆ. ದ್ವಿತೀಯ ಇನ್ನಿಂಗ್ಸ್‌ನಲ್ಲಿ 513 ರನ್‌ಗಳ ಬೃಹತ್ ಮೊತ್ತ ಬೆನ್ನಟ್ಟಿರುವ ಬಾಂಗ್ಲಾ, 4ನೇ ದಿನದ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 272 ರನ್ ಗಳಿಸಿದ್ದು, ಪಂದ್ಯದ ಗೆಲುವಿಗೆ ಅಂತಿಮ ದಿನದಾಟದಲ್ಲಿ 4 ವಿಕೆಟ್ ನಷ್ಟಕ್ಕೆ 241 ರನ್ ಗಳಿಸಬೇಕಿದೆ. 4ನೇ ದಿನದಾಟದಲ್ಲಿ ಅಮೋಘ ಶತಕ ಗಳಿಸಿದ ಝಾಕೀರ್ ಹಸನ್ ಮತ್ತು ಆಕರ್ಷಕ ಅರ್ಧಶತಕ ಗಳಿಸಿದ ನಜ್ಮುಲ್ ಹಸನ್ ಶಾಂತೊ ಭಾರತಕ್ಕೆ ಪ್ರತಿರೋಧ ಒಡ್ಡಿದರು. ಇವರಿಬ್ಬರು ಮೊದಲ ವಿಕೆಟ್‌ಗೆ 124 ರನ್ ಗಳಿಸಿದರು. ಈ ಜೋಡಿಯನ್ನು ಉಮೇಶ್ ಯಾದವ್ ಬೇರ್ಪಡಿಸಿತು. ಶಾಂತೊ 67 ರನ್ ಗಳಿಸಿದರೇ, ಝಾಕೀರ್ 100 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಯಾಸಿರ್ ಅಲಿ 5, ಲಿಟನ್ ದಾಸ್ 19, ಮುಶ್ಫಿಕರ್ ರಹೀಂ 23 ಮತ್ತು ನುರುಲ್ ಹಸನ್‌ರನ್ನು 3 ರನ್ ಗಳಿಸಿದರು. ನಾಯಕ ಶಕಿಲ್ ಅಲ್ ಹಸನ್ 40 ರನ್ ಗಳಿಸಿ ಅಂತಿಮ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಅವರಿಗೆ ಮೆಹದಿ ಹಸನ್ ಮಿರಾಜ್ 9 ರನ್ ಗಳಿಸಿ ಸಾಥ್ ನೀಡುತ್ತಿದ್ದಾರೆ. ಭಾರತದ ಪರ ಅಕ್ಷರ್ ಪಟೇಲ್ 3 ಮತ್ತು ಉಮೇಶ್ ಯಾದವ್, ಕುಲದೀಪ್ ಯಾದವ್ ಮತ್ತು ಆರ್. ಅಶ್ವಿನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ವಿಶ್ವಕಪ್ ಫುಟ್‌ಬಾಲ್: ಕ್ರೊವೇಷಿಯಾಗೆ 3ನೇ ಸ್ಥಾನ

ದೋಹಾ,ಡಿ.17–ಇಲ್ಲಿನ ಖಲೀಫಾ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪ್ಲೇ ಆಫ್ ಹಣಾಹಣಿಯಲ್ಲಿ ಮೊರಾಕೊ ವಿರುದ್ಧ ಕ್ರೊವೇಷಿಯಾ 2–1 ಗೋಲುಗಳ ಅಂತರದಲ್ಲಿ ಗೆಲುವು ಸಾಧಿಸಿದೆ. ಆ ಮೂಲಕ ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ 3ನೇ ಸ್ಥಾನದ ಗೌರವ ಪಡೆಯಿತು. ಪಂದ್ಯ ಆರಂಭದ 7 ನಿಮಿಷದಲ್ಲಿ ಕ್ರೊವೇಷಿಯಾ ಪರ ಜಾಸ್ಕೊ ಗ್ವಾರ್ಡಿಯೋಲ್ ಗೋಲು ಗಳಿಸುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ವೇಳೆ ತಿರುಗಿ ಬಿದ್ದ ಮೊರಕೊ ಪರ 9ನೇ ನಿಮಿಷದಲ್ಲಿ ಅರಾಫ್ ದರಿ ಗೋಲು ಗಳಿಸಿದರು. ಇದರಿಂದ ಪಂದ್ಯದಲ್ಲಿ ರೋಚಕತೆ ಹೆಚ್ಚಾಯಿತು. ಪಂದ್ಯದ 42ನೇ ನಿಮಿಷದಲ್ಲಿ ಕ್ರೊವೆಷಿಯಾ ಪರ ಮಿಸ್ಲಾವ್ ಒರ್ಸಿಕ್ ಗೋಲುಗಳಿಸುವ ಮೂಲಕ ತಂಡಕ್ಕೆ ಮುನ್ನಡೆ ತಂದು ಕೊಟ್ಟರು. ಪಂದ್ಯದ ಅಂತಿಮ ಕ್ಷಣದವರೆಗೂ ಮತ್ತೊಂದು ಗೋಲು ಗಳಿಸಲು ಹೋರಾಡಿದ ಮೊರಾಕೊ ಪ್ರಯತ್ನ ಫಲಗೂಡಲಿಲ್ಲ. ಅಂತಿಮವಾಗಿ ಕ್ರೊವೇಷಿಯಾ 2–1 ಗೋಲುಗಳ ಅಂತರದಲ್ಲಿ ಭರ್ಜರಿ ಗೆಲ್ಲುವು ಸಾಧಿಸಿ ಟೂರ್ನಿಯು 3ನೇ ಸ್ಥಾನಕ್ಕೇರಿ ನಿರ್ಗಮಿಸಿತು.

ವಾಟರ್‌ಮನ್‌ಗೆ ಬೆದರಿಕೆ: ಗ್ರಾಪಂ ಅಧ್ಯಕ್ಷೆ ವಿರುದ್ಧ ಪ್ರಕರಣ ದಾಖಲು

ಮೈಸೂರು, ಡಿ.17–ವಾಟರ್‌ಮನ್‌ಗೆ ಬೆದರಿಕೆ ಹಾಕಿದ ಆರೋಪದಡಿ ಗ್ರಾಮ ಪಂಚಾಯಿತ್ತಿ ಅಧ್ಯಕ್ಷೆಯೊಬ್ಬರ ವಿರುದ್ಧ ನ್ಯಾಯಾಲಯದ ಅನುಮತಿ ಮೇರೆಗೆ ವಿಜಯನಗರ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮೈಸೂರು ತಾಲೂಕು ಸಿಂಧುವಳ್ಳಿ ಗ್ರಾಮ ಪಂಚಾಯಿತ್ತಿ ಅಧ್ಯಕ್ಷ ಶ್ರೀಮತಿ ಅನ್ನಪೂರ್ಣ ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ಸೆ.28ರಂದು ಸಂಜೆ ದಡದಹಳ್ಳಿ ಗ್ರಾಮದ ವಾಟರ್‌ಮನ್ ರವಿಚಂದ್ರ ಅವರಿಗೆ ಕರೆ ಮಾಡಿ ಬೆದರಿಕೆ ಹಾಕಿದರು ಎಂದು ಆರೋಪಿಸಲಾಗಿದೆ. ಈ ಸಂಬಂಧ ರವಿಚಂದ್ರ ಕಾಲ್ ರೆಕಾರ್ಡ್ ಜೊತೆಗೆ ನಗರ ಪೊಲೀಸ್ ಆಯುಕ್ತರ ಕಚೇರಿಗೆ ದೂರು ಸಲ್ಲಿಸಿದ್ದು, ನ್ಯಾಯಾಲಯದ ಅನುಮತಿ ಪಡೆದ ನಂತರ ವಿಜಯನಗರ ಠಾಣೆ ಪೊಲೀಸರು ಡಿ.13ರಂದು ಗ್ರಾಮ ಪಂಚಾಯಿತ್ತಿ ಅಧ್ಯಕ್ಷೆ ವಿರುದ್ಧ ಭಾರತೀಯ ದಂಡ ಸಂಹಿತೆ 506ರಡಿ ಪ್ರಕರಣ ದಾಖಲಿಸಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ವಿಶ್ರಾಂತ ಉದ್ಯೋಗಿಗಳ ಸಂಘದ ದಾವೆ ವಜಾ

ಮೈಸೂರು, ಡಿ.17– ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಮೈಸೂರು ಶಾಖೆ ತಮ್ಮ ಸಂಘಕ್ಕೆ ಸೇರಿದ್ದು ಎಂದು ಕರ್ನಾಟಕ ರಾಜ್ಯ ವಿಶ್ರಾಂತ ಉದ್ಯೋಗಿಗಳ ಸಂಘ ಹೂಡಿದ್ದ ದಾವೆಯನ್ನು ಮೈಸೂರಿನ ಜೆಎಂಎಫ್‌ಸಿ ನ್ಯಾಯಾಲಯ ವಜಾಗೊಳಿಸಿದೆ ಎಂದು ನಿವೃತ್ತ ನೌಕರರ ಸಂಘದ ಜಿಲ್ಲಾಧ್ಯಕ್ಷ ಹೆಚ್.ವಿ.ಗಣೇಶ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕರ್ನಾಟಕ ರಾಜ್ಯ ಸರ್ಕಾರಿ ವಿಶ್ರಾಂತ ಉದ್ಯೋಗಿಗಳ ಸಂಘದವರು, ಅಕ್ರಮವಾಗಿ ಹೊಂದಿರುವ ನಿವೃತ್ತ ನೌಕರರ ಸಂಘದ ದಾಖಲೆಗಳು ಹಾಗೂ ಹಣವನ್ನು ಹಿಂದಿರುಗಿಸುವಂತೆ ನ್ಯಾಯಾಲಯದ ತೀರ್ಪಿನ ಅನ್ವಯ ಪತ್ರ ಬರೆಯಲಾಗಿದೆ ಎಂದಿರುವ ಅವರು, ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸದಸ್ಯರು ತಮ್ಮ ಸ್ವಂತ ಸಂಘದಲ್ಲಿ ಎಂದಿನಂತೆ ವ್ಯವಹರಿಸಿ ಕುಂದು–ಕೊರತೆಗಳನ್ನು ನಿವಾರಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ಮುಸುಕಿನ ಜೋಳ ಖರೀದಿಸಿ ತಮಿಳ್ನಾಡು ವರ್ತಕನಿಂದ 14 ಲಕ್ಷ ವಂಚನೆ

ಹೆಚ್.ಡಿ.ಕೋಟೆ ವರ್ತಕನಿಂದ ಪೊಲೀಸರಿಗೆ ದೂರು

ಸರಗೂರು, ಡಿ.17– ತಮಿಳುನಾಡು ವರ್ತಕನೋರ್ವ ಹೆಚ್.ಡಿ.ಕೋಟೆಯ ವರ್ತಕನಿಂದ ಜೋಳ ಖರೀದಿಸಿ 14 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಹೆಚ್.ಡಿ.ಕೋಟೆ ಹ್ಯಾಂಡ್‌ಪೋಸ್ಟ್‌ನಲ್ಲಿ ಅಶ್ವಿನಿ ಟ್ರೇಡರ್ಸ್ ಎಂಬ ಹೆಸರಿನಲ್ಲಿ ಭತ್ತ, ಹತ್ತಿ ಮತ್ತು ಜೋಳ ಸಗಟು ವ್ಯಾಪಾರ ಮಾಡುತ್ತಿರುವ ಸರಗೂರು ತಾಲೂಕು ಹುನಗನಹಳ್ಳಿ ನಿವಾಸಿ ಯೋಗೇಶ್(49) ಎಂಬುವರಿಂದ ತಮಿಳುನಾಡಿನ ನಾಮಕಲ್ ಜಿಲ್ಲೆ ಮೋಹನೂರ್ ಗ್ರಾಮದ ಮಿರಿಥಿನಿ ಟ್ರೇಡರ್ಸ್ ಮಾಲೀಕ ಶಕ್ತಿವೇಲ್ ಎಂಬಾತ ಕಳೆದ ಸೆಪ್ಟೆಂಬರ್ 23ರಿಂದ ಅಕ್ಟೋಬರ್ 9ರವರೆಗೆ ವಿವಿಧ ಹಂತಗಳಲ್ಲಿ 14 ಲಕ್ಷ ರೂ. ಮೌಲ್ಯದ ಮುಸುಕಿನ ಜೋಳ ಖರೀದಿಸಿ ಹಣ ನೀಡದೇ ವಂಚಿಸಿದ್ದಾನೆ. ಡಿಸೆಂಬರ್ 11ರಂದು ತಾನು ಶಕ್ತಿವೇಲ್‌ಗೆ ಕರೆ ಮಾಡಿ ಹಣ ಕೇಳಿದಾಗ ಕೊಲೆ ಬೆದರಿಕೆ ಹಾಕಿದ್ದಾನೆ ಎಂದು ಯೋಗೇಶ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಸರಗೂರು ಠಾಣೆ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಹಿರಿಯ ಪತ್ರಕರ್ತ ರಹಮತ್ ಉಲ್ಲಾಖಾನ್ ಇನ್ನಿಲ್ಲ



ಮೈಸೂರು,ಡಿ.17(ಆರ್‌ಕೆ)–ಮೈನೋ ನ್ಯೂಸ್ ಮತ್ತು ಡೆಲ್ಲಿ ಸಹರಾ ಪತ್ರಿಕೆ ವರದಿಗಾರರಾದ ಮೈಸೂರಿನ ಹಿರಿಯ ಪತ್ರಕರ್ತ ರಹಮತ್ ಉಲ್ಲಾಖಾನ್ (68) ತೀವ್ರ ಹೃದಯಾಘಾತದಿಂದ ಇಂದು ನಿಧನರಾದರು.

ಮೈಸೂರಿನ ಸುಭಾಷ್‌ನಗರದಲ್ಲಿ ವಾಸವಾಗಿದ್ದ ಅವರು, ಪತ್ನಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಇಂದು ಮಧ್ಯಾಹ್ನ 1 ಗಂಟೆ ವೇಳೆಯಲ್ಲಿ ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ರಹಮತ್ ಉಲ್ಲಾಖಾನ್ ಅವರನ್ನು ಬನ್ನಿಮಂಟಪದ ಪ್ರಜ್ವಲ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತಾದರೂ, ಇಸಿಜಿ ಪರೀಕ್ಷಿಸು ತ್ತಿರುವಾಗಲೇ ಕೊನೆಯುಸಿರೆಳೆದರು. ಇಂದು ರಾತ್ರಿ 8.30 ಗಂಟೆಗೆ ಟಿಪ್ಪು ಸರ್ಕಲ್ ಬಳಿ ಇರುವ ಖಬರಸ್ತಾನ್‌ನಲ್ಲಿ ರಹಮತ್ ಉಲ್ಲಾಖಾನ್ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರ ನಿಧನಕ್ಕೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಸಂತಾಪ ಸೂಚಿಸಿದೆ.




ಮಹದೇವಸ್ವಾಮಿ

ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ಮತ್ತು ನೇತ್ರಾ ಫೈನಾನ್ಸ್ ಮಾಲೀಕರಾದ ಮಹದೇವಸ್ವಾಮಿ (ಮಧು) (62) ಶನಿವಾರ ಹೃದಯಾಘಾತದಿಂದ ನಿಧನರಾದರು. ದಿವಂಗತರು ಪತ್ನಿ ಲತಾ, ಪುತ್ರರಾದ ಶಶಿಕಿರಣ್, ಅರುಣ್‌ಕುಮಾರ್ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ನಾಳೆ (ಭಾನುವಾರ) ಬೆಳಗ್ಗೆ 10.30ಕ್ಕೆ ಎನ್.ಆರ್.ಮೊಹಲ್ಲಾದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಸಾದ್ ಬಗ್ಗೆ ಈಗಲೂ ಅಪಾರ ಗೌರವವಿದೆ; ಅವರ ಮಾತಿಗೆ ಮನ್ನಣೆ ನೀಡೇ ಬಿಜೆಪಿ ಸೇರಿದೆ

- ನೀವು ದಲಿತರ ದುಃಖ–ದುಮ್ಮಾನಗಳಿಗೆ ಸ್ಪಂದಿಸಿಲ್ಲ
- ಎಂಎಲ್‌ಸಿ ವಿಶ್ವನಾಥ್ ಪುನರ್ ಸ್ಪಷ್ಟನೆ
- ಅಂದು ರಾಜಕೀಯ ನಿರ್ಧಾರದಂತೆ ನಡೆ; ಅರಸು ಬೆನ್ನಿಗೆ ಚೂರಿ ಹಾಕಿದೆ ಎನ್ನುವುದು ತಪ್ಪು

ಮೈಸೂರು, ಡಿ.17(ಎಂಟಿವೈ)– ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಮೇಲೆ ಈಗಲೂ ಅಪಾರವಾದ ಗೌರವವಿದೆ. ಆದರೆ, ಎತ್ತರ ವ್ಯಕ್ತಿತ್ವದ ವ್ಯಕ್ತಿ ನನ್ನ ಬಗ್ಗೆ ಹಗುರವಾಗಿ ಮಾತನಾಡಿದ್ದು ವಿಷಾದದ ಸಂಗತಿ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಮ್ಮಿಬ್ಬರದ್ದು 50 ವರ್ಷಗಳ ಸುದೀರ್ಘ ಸ್ನೇಹಯಾನ. ಈಗಲೂ ಅವರ ಮೇಲೆ ಅಪಾರವಾದ ಗೌರವ ಹಾಗೂ ಅಭಿಮಾನವಿದೆ. ನನ್ನನ್ನು ಅಲೆಮಾರಿ ಎಂದು ಅವರೇ ಮೊದಲು ಮಾತನಾಡಿದ್ದು. ಅವರ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡಿದ್ದೇನೆ. ಆದರೆ, ಮತ್ತೊಮ್ಮೆ ನನ್ನ ವಿರುದ್ಧ ಮಾತನಾಡಿದ್ದಾರೆ. ನಾನು ಕೇಳಿದ ಪ್ರಶ್ನೆಗೆ ವಿಷಯಾಂತರ ಮಾಡಿ ಹಗುರವಾಗಿ ಮಾತನಾಡಿದ್ದಾರೆ. ಅವರು ಬಳಸಿದ ಪದ ಜನರು ಒಪ್ಪುವಂತದ್ದಲ್ಲ. ನಿಮಗೆ ಮಾತ್ರ ಸ್ವಾಭಿಮಾನ ಇದ್ದು, ಉಳಿದವರಿಗೆ ಸ್ವಾಭಿಮಾನ ಇಲ್ಲವೇ? ನೀವೇ ಬಿರುದುಕೊಟ್ಟು ಕೊಂಡಿರುವಂತೆ ಸ್ವಾಭಿಮಾನದ ಸಾಮ್ರಾಟ ನೀವಾದರೆ, ಉಳಿದವರು ಏನು ಎಂದು ಪ್ರಶ್ನಿಸಿದರು.

ನಾನು 40 ವರ್ಷ ಕಾಂಗ್ರೆಸ್‌ನಲ್ಲಿದ್ದೆ. ಅಲ್ಲಿಂದ ಜೆಡಿಎಸ್‌ಗೆ ಬಂದೆ. ಜೆಡಿಎಸ್‌ನಲ್ಲಿ ಇರಿಸು–ಮುರಿಸಾದಾಗ ಕಾಂಗ್ರೆಸ್‌ಗೆ ವಾಪಸ್ ಹೋಗಲು ನಿರ್ಧರಿಸಿದ್ದೆ. ಇದನ್ನು ನಿಮ್ಮ ಬಳಿ ಹೇಳಿಕೊಂಡಾಗ ನೀವೇ ತಾನೆ ಯಡಿಯೂರಪ್ಪ ಅವರನ್ನು ಸಿಎಂ ಮಾಡಬೇಕು. ನೀವು ಬಿಜೆಪಿಗೆ ಬರಬೇಕು ಎಂದು ಹೇಳಿದ್ದು. ನಾವು ಮೊದಲಿಂದಲೂ ಬಿಜೆಪಿಯನ್ನು ಒಪ್ಪಿದವರಲ್ಲ. ನಿಮ್ಮ ಮೇಲಿನ ಗೌರವದಿಂದಾಗಿ, ನಿಮ್ಮ ಮಾತಿಗೆ ಮನ್ನಣೆ ನೀಡಿ ಬಿಜೆಪಿಗೆ ಸೇರಿದ್ದೇನೆ ಎಂದು ಹೇಳಿದರು.

ಬೆನ್ನಿಗೆ ಚೂರಿ ಮಾತು ಸಲ್ಲ: ರಾಜಕೀಯ ತೀರ್ಮಾನದಿಂದಾಗಿ ಅರಸು ಕಾಂಗ್ರೆಸ್‌ನಿಂದ 70 ಜನ ಕಾಂಗ್ರೆಸ್‌ಗೆ ಹೋಗಿದ್ದೆವು. ರಾಜಕಾರಣದಲ್ಲಿ ಕೆಲವು ಸಂದರ್ಭದಲ್ಲಿ ಬೇರೆ ಬೇರೆ ರೀತಿ ನಿರ್ಧಾರಗಳು ಆಗುತ್ತವೆ. ಅದನ್ನು ಮುಂದಿಟ್ಟುಕೊಂಡು ಅರಸು ಬೆನ್ನಿಗೆ ಚೂರಿ ಹಾಕಿದ್ರು ಅನ್ನೋದು ಸರಿಯಲ್ಲ. ಹಾಗಿದ್ರೆ ನೀವು ಹಲವು ಪಕ್ಷಗಳಿಗೆ ಎರಡು ಬಾರಿ ಹೋಗಿದ್ದೀರಾ. ಆ ಪಕ್ಷಗಳ ಮುಖಂಡರ ಬೆನ್ನಿಗೆ ಚೂರಿ ಹಾಕಿದ್ರಾ ಎಂದು ವಿಶ್ವನಾಥ್ ಪ್ರಶ್ನಿಸಿದರು.

ದಲಿತರ ದುಃಖ, ದುಮ್ಮಾನಗಳಿಗೆ ಸ್ಪಂದಿಸಿಲ್ಲ: ದಲಿತರ ನಾಯಕ, ಡಾ.ಅಂಬೇಡ್ಕರ್ ಅನುಯಾಯಿ ಎಂದು ಹೇಳಿಕೊಳ್ಳುತ್ತೀರಿ. ಹಾಗಿದ್ದರೆ ದಲಿತರಿಗೆ ಏನು ಮಾಡಿದ್ದೀರಾ, ಅಶೋಕಪುರಂ ಜನರಿಗೆ ಏನು ಮಾಡಿದ್ದೀರಾ, ಎಲ್ಲೆಡೆ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಎಂದಾದರೂ ದಲಿತರ ದೌರ್ಜನ್ಯ ಖಂಡಿಸಿ ಹೇಳಿಕೆ ನೀಡಿದ್ದೀರಾ, ಇತ್ತೀಚೆಗಷ್ಟೇ ದಲಿತ ಹೆಣ್ಣು ಮಗಳ ಹತ್ಯೆಯಾಯಿತು. ಡಾ.ಅಂಬೇಡ್ಕರ್ ಅವರ ಮೊಮ್ಮಗಳ ಪತಿ ಆನಂದ ತೇಲ್ತುಂಬೆ ಅವರನ್ನು ಬಂಧಿಸಿ ಜೈಲಿನಲ್ಲಿಡಲಾಗಿತ್ತು. ಇತ್ತೀಚೆಗಷ್ಟೇ ಅವರನ್ನು ಬಿಡುಗಡೆ ಮಾಡಲಾಗಿದೆ. ಅದರ ಬಗ್ಗೆ ಎಂದೂ ಮಾತಾಡಿಲ್ಲ. ಹೋರಾಟಗಾರ ಸ್ಟ್ಯಾನ್ಲಿ ಫಾದರ್ ನಿಧನರಾದರು. ಮುರುಘಾಮಠದ ಸ್ವಾಮಿ ದಲಿತರ ಮಕ್ಕಳ ಮೇಲೆ ದೌರ್ಜನ್ಯ ನಡೆಸಿದರು. ಅದರ ಬಗ್ಗೆ ಖಂಡಿಸಲಿಲ್ಲ. ನೀವು ದಲಿತರ ದುಃಖ–ದುಮ್ಮಾನಗಳಿಗೆ, ಕಷ್ಟ–ಕಾರ್ಪಣ್ಯಕ್ಕೆ, ನೋವು–ನಲಿವಿಗೆ, ಅಪಮಾನ–ಅವಮಾನಗಳಿಗೆ ಸ್ಪಂದಿಸಿಲ್ಲ. ಇವರು ಕೇಂದ್ರ ಸಚಿವರಾಗಿದ್ದಾಗ ಸಂವಿಧಾನ ಪರಿಷ್ಕರಣೆ ಆಗಬೇಕು ಎಂದು ಹೇಳಿಕೆ ನೀಡಿದ್ದರು ಎಂದು ಆರೋಪಿಸಿದರು.

ದೊಡ್ಡವರಿಂದ ಸಣ್ಣ ಮಾತು ಬರಬಾರದು: ನನಗೆ ರಾಜಕೀಯ ಪುನರ್ಜನ್ಮ ಕೊಟ್ಟಿಲ್ಲ ಎಂದು ಹೇಳುವುದಿಲ್ಲ. ರಾಜಕೀಯದಲ್ಲಿ ಗಾಡ್ ಫಾದರ್‌ಗಳು ಇರುತ್ತಾರೆ. ಕೆಲವರು ಸಹಾಯವನ್ನೂ ಮಾಡುತ್ತಾರೆ. ಆದರೆ, ನಾನೇ ಪುನರ್ಜನ್ಮ ನೀಡಿದೆ, ಸಹಾಯ ಮಾಡಿದೆ ಎಂದು ಹೇಳಿಕೊಳ್ಳುವುದು ಪ್ರಸಾದ್ ಅವರಂತಹ ಎತ್ತರದ ನಾಯಕರ ಗುಣವಲ್ಲ ಎಂದರು.

ಯಾವನ್ರೀ ಪ್ರತಾಪ ಸಿಂಹ: ನನ್ನನ್ನ ಬಿಜೆಪಿ ಬಿಟ್ಟು ಹೋಗಬೇಕು ಎಂದು ಹೇಳಿಕೆ ನೀಡಲು ಪ್ರತಾಪಸಿಂಹ ಯಾರು. ಅವನೇನು ಪಕ್ಷದ ರಾಜ್ಯಾಧ್ಯಕ್ಷನಾ, ಪುಟಗೋಸಿಯಂತೆ ಬಂದವನು ಅವನು. ನನ್ನನ್ನು ಪ್ರಶ್ನಿಸಬೇಕಾದವರು ಪಕ್ಷದ ಅಧ್ಯಕ್ಷರು. ಆದರೆ, ಇವನ್ಯಾರು ನನ್ನನ್ನು ಕೇಳೋಕೆ. ಯಾರೋ ಮಾಡಿದ್ದನ್ನು ನಾನು ಮಾಡಿದೆ ಎಂದು ಹೇಳಿಕೊಂಡು ತಿರುಗಾಡುವ ಧೀರ. ಆಸ್ಕರ್ ಫರ್ನಾಂಡಿಸ್ ಕಾಲದಲ್ಲಿ ಆಗಿದ್ದ ಕೆಲಸವನ್ನು ನಾನು ಮಾಡಿದೆ ಎಂದು ಗಿರಕಿ ಹೊಡೆಯುತ್ತಿದ್ದಾನೆ ಎಂದು ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

ಈಶ್ವರಪ್ಪಗೆ ಮರ್ಯಾದೆ ಇಲ್ಲ: ಕಾಂಗ್ರೆಸ್ ಪಕ್ಷವನ್ನು ನಿಷೇಧಿಸಬೇಕಾಗುತ್ತದೆ ಎಂದು ಹೇಳಿಕೆ ನೀಡಿರುವ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪಗೆ ಮರ್ಯಾದೆ ಇಲ್ಲ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಪಾರ್ಟಿ ಕಾಂಗ್ರೆಸ್. ಇಂದಿರಾಗಾಂಧಿ ಮನೆಗೆ ಹೋಗಿ ನೋಡಿ ಅವರ ದೇವರ ಮನೆಯಲ್ಲಿ ಭಾರತದ ಭೂಪಟವನ್ನಿಟ್ಟು ಪೂಜೆ ಮಾಡಲಾಗುತ್ತದೆ. ಇಂದಿರಾ ಗಾಂಧಿ ನಿಜಕ್ಕೂ ದೇಶಭಕ್ತಿಯುಳ್ಳ ನಾಯಕಿ. ಅಂತಹ ಪಕ್ಷವನ್ನು ನಿಷೇಧಿಸುವುದಾಗಿ ನೀಡಿರುವ ಹೇಳಿಕೆ ಖಂಡನೀಯ ಎಂದರು.

ನೀವು ಚುನಾವಣೆಗೆ ಹಣ ಪಡೆದಿಲ್ಲವೇ?

ಉಪಚುನಾವಣೆಯಲ್ಲಿ 15 ಕೋಟಿ ರೂ. ಪಡೆದರು ಎಂದು ಹೇಳಿಕೆ ನೀಡಿದ್ದಾರೆ. ಅದರ ಲೆಕ್ಕ ನಿಮ್ಮ ಬಳಿ ಇದೆಯೇ. ಬಿಜೆಪಿಯ ಹಿರಿಯರಾಗಿರುವ ನೀವು ಚುನಾವಣೆಯಲ್ಲಿ ನನಗೆ ಎಷ್ಟು ಕೊಟ್ಟಿದ್ದಾರೆ ಎಂದು ಲೆಕ್ಕ ಇಟ್ಟಿದ್ದರೆ ತೆಗೆಸಿ ಎಂದು ಸವಾಲು ಹಾಕಿದ ಅವರು, ಯಡಿಯೂರಪ್ಪ ಅವರು 'ಸೈನಿಕ'ನಲ್ಲಿ ದುಡ್ಡು ಕೊಟ್ಟು ಕಳಿಸಿದ್ದರು. ಆದರೆ, 'ಸೈನಿಕ' ಹುಣಸೂರಿಗೆ ಬರಲೇ ಇಲ್ಲ. ಇದ್ಯಾವುದು ನಿಮ್ಮ ಗಮನಕ್ಕೆ ಬರಲಿಲ್ಲವೇ. ಸೈನಿಕನ ಮೋಸದ ಬಗ್ಗೆ ನಾನು ಈ ಹಿಂದೆಯೇ ಹೇಳಿದ್ದೇನೆ. ಚುನಾವಣೆ ಅಂದ್ರೆ ಹಣಬೇಕು. ನೀವು ಚುನಾವಣೆಯಲ್ಲಿ ನಿಂತಿದ್ದಾಗ ಪಕ್ಷದಿಂದ ಹಣಕೊಟ್ಟಿಲ್ವಾ. ಪಕ್ಷದಿಂದ ಹಣ ಪಡೆಯದೇ ಚುನಾವಣೆ ಎದುರಿಸಿದ್ದೀರಾ. ಪ್ರಸ್ತುತ ಹಣ ಖರ್ಚು ಮಾಡದೇ ಯಾರು ಕೂಡ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಿಲ್ಲ. ಮಹಾತ್ಮಗಾಂಧಿ ಇದ್ದಿದ್ದರೂ ಚುನಾವಣೆಗೆ ಹಣ ಖರ್ಚು ಮಾಡಲೇಬೇಕಾಗಿತ್ತು ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ಇಷ್ಟವಾಗದಿದ್ದರೆ ಪಕ್ಷ ಬಿಟ್ಟು ಹೋಗಲಿ

ವಿಶ್ವನಾಥ್‌ಗೆ ಪ್ರತಾಪ್ ಸಿಂಹ ಚಾಟಿ



ಮೈಸೂರು, ಡಿ.17(ಆರ್‌ಕೆ)–ಬಿಜೆಪಿ ತತ್ವ, ಸಿದ್ಧಾಂತ, ಆದರ್ಶ ಇಷ್ಟವಾಗದಿದ್ದರೆ ಪಕ್ಷ ಬಿಟ್ಟು ಹೋಗಲಿ ಎಂದು ಸಂಸದ ಪ್ರತಾಪ್ ಸಿಂಹ, ಎಂಎಲ್‌ಸಿ ಎ.ಹೆಚ್. ವಿಶ್ವನಾಥ ಅವರಿಗೆ ಚಾಟಿ ಬೀಸಿದ್ದಾರೆ.

ಮೈಸೂರಿನ ಅಶೋಕಪುರಂ ರೈಲು ನಿಲ್ದಾಣದಲ್ಲಿ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಮ್ಮ ಪಕ್ಷದಲ್ಲಿನ ತತ್ವ ಸಿದ್ಧಾಂತಗಳು ಇಷ್ಟವಾಗದಿದ್ದರೆ ವಿಶ್ವನಾಥ್ ಅವರು ಪಕ್ಷ ಬಿಟ್ಟು ಹೋಗಲಿ. ಅದನ್ನು ಬಿಟ್ಟು ಪ್ರತೀ ದಿನ ಒಂದಿಲ್ಲೊಂದು ಕಾರಣಕ್ಕೆ ನಮ್ಮಲ್ಲಿರುವವರನ್ನೇ ಚುಚ್ಚಿ, ತಿವಿದು ಏಕೆ ಮಾತನಾಡುತ್ತಾರೆ ಎಂದರು.

ಚುನಾವಣೆ ಬಂದಾಗ ರಾಜಕೀಯದಲ್ಲಿ ಹೀಗೆ ಒಬ್ಬರನ್ನೊಬ್ಬರು ಟೀಕಿಸುವುದು, ವಿವಾದ ಸೃಷ್ಟಿಸುವುದನ್ನು ನೋಡಿ ಜನರು ಬೇಸತ್ತಿದ್ದಾರೆ. ಪಕ್ಷದಲ್ಲಿದ್ದುಕೊಂಡು ಅವರನ್ನೇ ನಿತ್ಯ ನಿಂದಿಸುತ್ತಾ ಕಾಲ ಕಳೆಯುವ ಬದಲು ಪಕ್ಷ ಬಿಟ್ಟು ಹೋಗಲಿ ಎಂದು ಪ್ರತಾಪ್ ಸಿಂಹ, ಎ.ಹೆಚ್. ವಿಶ್ವನಾಥ್ ಅವರಿಗೆ ತಿರುಗೇಟು ನೀಡಿದರು.

ಪ್ರಸಾದ್ ಅವರು ಹಿರಿಯ ರಾಜಕೀಯ ಮುತ್ಸದ್ದಿ. ಅವರ ಬಗ್ಗೆ ಎಲ್ಲರಿಗೂ ಅಪಾರ ಗೌರವವಿದೆ. ಹಿರಿಯರಾದ ವಿಶ್ವನಾಥ್ ವರ್ತನೆಯಿಂದ ಜನರಿಗೂ ಬೇಸರವಾಗುತ್ತದೆ ಎಂದು ನುಡಿದರು.

ಯಾವುದೇ ಪಕ್ಷದಲ್ಲಿದ್ದರೂ ತಪ್ಪು ಹೇಳುವ ಏಕೈಕ ನಾಯಕ: ನಾನು ಯಾವುದೇ ಪಾರ್ಟಿಯಲ್ಲಿದ್ದರೂ, ಆ ಪಾರ್ಟಿಯ ತಪ್ಪುಗಳ ಬಗ್ಗೆ ಮಾತನಾಡುವ ಏಕೈಕ ನಾಯಕ ಎಂದು ತಿಳಿಸಿದರು.

ನಾಚಿಕೆ ಆಗಬೇಕು: ಮತದಾರರ ಪಟ್ಟಿಯನ್ನು ಬದಲಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಮತದಾರರ ಹಕ್ಕನ್ನು ಕಸಿಯುವುದು ಸರಿಯಲ್ಲ. ಎಲ್ಲರೂ ಸುಳ್ಳು ಹೇಳುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಮತದಾರರ ಹಕ್ಕು ಕಸಿಯುವುದನ್ನು ಆಕ್ಷೇಪಿಸಿದ್ದಕ್ಕೆ ಅವರ ಮೇಲೆ ವಾಗ್ದಾಳಿ ನಡೆಸುತ್ತಿದ್ದಾರೆ ಎಂದು ಬಿಜೆಪಿ ನಾಯಕರ ವಿರುದ್ಧವೇ ಅಸಮಾಧಾನ ವ್ಯಕ್ತಪಡಿಸಿದರು.

ಮೋದಿ ಮಾತನಾಡಿಲ್ಲ: ಪ್ರಧಾನಿ ಮೋದಿ ಅವರು ಇದುವರೆಗೆ ಅನ್ಯ ಧರ್ಮಗಳ ಬಗ್ಗೆ ಒಂದು ಬಾರಿಯೂ ಮಾತನಾಡಿಲ್ಲ. ಕೋಮು ಸೌಹಾರ್ದತೆ ಕದಡುವ ಕೆಲಸವನ್ನು ನರೇಂದ್ರ ಮೋದಿ ಎಂದಿಗೂ ಮಾಡಿಲ್ಲ. ಆದರೆ, ರಾಜ್ಯದಲ್ಲಿರುವ ಬಿಜೆಪಿ ನಾಯಕರು ಮೋದಿ ಅವರಿಗೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಜಾತಿ, ಧರ್ಮಗಳ ನಡುವೆ ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸೇರಿದಂತೆ ಯಾವುದೇ ಪಕ್ಷಗಳು ಕೂಡ ಭಯೋತ್ಪಾದಕರನ್ನು ಬೆನ್ನು ತಟ್ಟುವುದಿಲ್ಲ. ಆದರೆ, ರಾಜ್ಯದ ಕೆಲವು ಬಿಜೆಪಿ ನಾಯಕರು ಬೊಬ್ಬೆ ಹೊಡೆಯುತ್ತಿದ್ದಾರೆ ಎಂದು ವಿಶ್ವನಾಥ್ ಕಿಡಿಕಾರಿದರು.

ನನ್ನ ಹೆಸರಲ್ಲಿ ರೌಡಿಶೀಟ್ ತೆರೆದಿರುವುದನ್ನು ಸಾಬೀತುಪಡಿಸಲಿ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್‌ಗೆ ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ ಸವಾಲು



ಮೈಸೂರು,ಡಿ.17(ಪಿಎಂ)– ಬಿಜೆಪಿಗೆ 36 ಮಂದಿ ರೌಡಿಗಳು ಸೇರ್ಪಡೆಯಾಗಿದ್ದಾರೆಂಬ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ ಶುದ್ಧ ಸುಳ್ಳು ಎಂದು ತಳ್ಳಿ ಹಾಕಿದ ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಲಕ್ಷ್ಮಣ್ ನನ್ನನ್ನು ರೌಡಿ ಎಂದು ಉಲ್ಲೇಖಿಸಿದ್ದು, ನನ್ನ ಮೇಲೆ ರೌಡಿ ಶೀಟ್ ತೆರೆದಿರುವುದನ್ನು ಅವರು ಸಾಬೀತುಪಡಿಸಲಿ ಎಂದು ಸವಾಲು ಹಾಕಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ದಿನಗಳ ಒಳಗೆ ಯಾವ ಠಾಣೆಯಲ್ಲಿ ನನ್ನ ಹೆಸರಿನಲ್ಲಿ ರೌಡಿಶೀಟ್ ತೆರೆಯಲಾಗಿದೆ ಎಂಬುದನ್ನು ತಿಳಿಸಬೇಕು. ಇಲ್ಲವಾದರೆ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲಾಗುವುದು. ಜೊತೆಗೆ ಅವರ ನಿವಾಸದ ಎದುರು ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

1988ರಲ್ಲಿ ಮೈಸೂರಿಗೆ ಬಂದ ಲಕ್ಷ್ಮಣ್, ಅಂದಿನ ದಳವಾಯಿ ಆಂಗ್ಲೋ ಸಾಂಸ್ಕೃತಿಕ ಸ್ಕೂಲ್‌ನಲ್ಲಿ ಟ್ಯೂಷನ್ ಸೆಂಟರ್ ಮಾಡುತ್ತೇನೆಂದು ಕೊಠಡಿಯೊಂದನ್ನು ಬಾಡಿಗೆ ಪಡೆದರು. ಬಳಿಕ ಈ ಸ್ಕೂಲ್ ಕಮಿಟಿಗೆ ಸದಸ್ಯ ಎಂದು ನಕಲಿ ದಾಖಲೆ ಸೃಷ್ಟಿಸಿಕೊಂಡು, ನಂತರ ಶಾಲೆಯ ಇಡೀ ಕಟ್ಟಡವನ್ನು ತಮಗೆ 100 ವರ್ಷಕ್ಕೆ ಲೀಸ್‌ಗೆ ಕೊಟ್ಟಿದ್ದಾರೆ ಎಂದು ನಕಲಿ ದಾಖಲೆ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಇದರ ವಿರುದ್ಧ ಸ್ಕೂಲ್‌ನ ಕಮಿಟಿ ಅಧ್ಯಕ್ಷ ಚಂದ್ರಶೇಖರ್ ಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ. ಜೊತೆಗೆ ಇಲ್ಲಿಯೇ 'ಕರ್ನಾಟಕ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್' ಎಂಬ ಸಂಸ್ಥೆಯೊಂದನ್ನು ನಡೆಸುತ್ತಿರುವ ಇವರು, ಈ ಸಂಸ್ಥೆಯನ್ನು ಕಾಂಗ್ರೆಸ್ ಕಚೇರಿ ಮಾಡಿಕೊಂಡಿದ್ದಾರೆ ಎಂದು ದೂರಿದರು.

ಕಾಂಗ್ರೆಸ್ ಮಾಜಿ ಸಚಿವ ವಿನಯ್‌ಕುಲಕರ್ಣಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದರು. ಯೂತ್ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ನಲಪಾಡ್ ವಿರುದ್ಧ ಹಲ್ಲೆ ಪ್ರಕರಣ ದಾಖಲಾಗಿತ್ತು. ನಮ್ಮಲ್ಲಿ ಯಾರ ವಿರುದ್ಧವೂ ಇಂತಹ ಪ್ರಕರಣ ದಾಖಲಾಗಿಲ್ಲ. ಹಾಗಿದ್ದರೂ ರೌಡಿಗಳು ಎಂದು ಕರೆದರೆ, ಇವರನ್ನು ನಾವೇನೆಂದು ಕರೆಯಬೇಕು ಎಂದು ಕಿಡಿಕಾರಿದರು. ಯುವ ಮೋರ್ಚಾ ಮುಖಂಡರಾದ ಭರತ್, ಮನುಶೈವ, ಲೋಹಿತ್, ಕಾರ್ತಿಕ್, ಮರಿಯಪ್ಪ, ಬಿ.ಎಂ.ಸಂತೋಷ್‌ಕುಮಾರ್ ಗೋಷ್ಠಿಯಲ್ಲಿದ್ದರು.



ಮೈಸೂರಿನ ನರಸಿಂಹರಾಜ ಕ್ಷೇತ್ರದ ಪ್ರಮುಖ ರಸ್ತೆಗಳ ಮೂಲಕ ಹಾದು ಶ್ರೀ ಹನುಮಂತ ಮೂರ್ತಿಯ ಮೆರವಣಿಗೆ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣ ತಲುಪಿತು. ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಬಿಜೆಪಿ ಮೈಸೂರು ನಗರ ಪ್ರಭಾರಿ ಹಿರೇಂದ್ರ ಷಾ, ರಾಜ್ಯ ಅಲ್ಪಸಂಖ್ಯಾತರ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ.ಅನಿಲ್ ಥಾಮಸ್, ಮುಖಂಡರಾದ ಎಚ್.ಜಿ.ಗಿರಿಧರ್, ವಾಣೀಶ್, ಸ್ವಾಮಿಗೌಡ, ವಿನೋದ್, ಶರತ್, ಪುನೀತ್, ಕೃಷ್ಣಮೂರ್ತಿ ರಾವ್, ನಂಜುಂಡಸ್ವಾಮಿ, ರಂಗಸ್ವಾಮಿ, ಮಂಜು, ಲೋಹಿತ್, ನಾಣಿ, ನವೀನ್ ಶೆಟ್ಟಿ, ಧನರಾಜ್, ಅರುಣ್, ಜೀವನ್, ಕೃಷ್ಣ, ಮಂಜುನಾಥ್ ಹಾಗೂ ನೂರಾರು ಭಕ್ತರು ಇದ್ದರು.

ವರುಣಾ ಬಳಿ ಬೋನಿಗೆ ಬಿದ್ದ ಹೆಣ್ಣು ಚಿರತೆ

ಮೈಸೂರು,ಡಿ.17(ಎಸ್‌ಬಿಡಿ)–ತಾಲೂಕಿನ ವರುಣಾ ಸಮೀಪ ಸುಮಾರು 3 ವರ್ಷದ ಹೆಣ್ಣು ಚಿರತೆ ಬೋನ್‌ನಲ್ಲಿ ಸೆರೆಯಾಗಿದೆ. ವರುಣಾ ಹೋಬಳಿ ಹಲವೆಡೆ ಚಿರತೆ ಉಪಟಳ ಹೆಚ್ಚಾಗಿದ್ದರಿಂದ ಸಾರ್ವಜನಿಕರ ಒತ್ತಾಯದ ಮೇರೆಗೆ ಮಾರಶೆಟ್ಟಿಹಳ್ಳಿಯ ಜಮೀನಿನಲ್ಲಿ ಬೋನ್ ಇಡಲಾಗಿತ್ತು. ಶುಕ್ರವಾರ ಸಂಜೆ ಮೂರು ವರ್ಷದ ಹೆಣ್ಣು ಚಿರತೆ ಸೆರೆಯಾಗಿದ್ದು, ಆರೋಗ್ಯ ತಪಾಸಣೆ ಬಳಿಕ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ದೊಡ್ಡ ಭೈರನಕುಪ್ಪೇ ವನ್ಯಜೀವಿ ವಲಯದ ಅರಣ್ಯ ಪ್ರದೇಶದಲ್ಲಿ ಬಿಡಲಾಯಿತು ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ಜಾನುವಾರುಗಳ ಮೇಲೆ ದಾಳಿ ನಡೆಸಿ ಆತಂಕ ಸೃಷ್ಟಿಸಿದ್ದ ಚಿರತೆ ಸೆರೆಯಿಂದ ಮಾರಶೆಟ್ಟಿಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮದವರು ನಿಟ್ಟುಸಿರು ಬಿಟ್ಟಿದ್ದಾರೆ.



ಅಮಾಯಕರ ಸುಲಿಗೆ ಪ್ರಕರಣ: 7 ಮಂದಿ ಬಂಧನ

ಮೈಸೂರು, ಡಿ.17(ಎಂಕೆ)– ಪ್ರತ್ಯೇಕ ಸುಲಿಗೆ ಪ್ರಕರಣಗಳಲ್ಲಿ 7 ಮಂದಿ ಆರೋಪಿಗಳನ್ನು ಬಂಧಿಸಿರುವ ಲಷ್ಕರ್ ಠಾಣೆ ಪೊಲೀಸರು, ಬಂಧಿತರಿಂದ 23,500 ರೂ. ನಗದು ಕೃತ್ಯಕ್ಕೆ ಬಳಸಿದ್ದ ಆಟೋರಿಕ್ಷಾ ಮತ್ತು ಮೊಬೈಲ್ ಫೋನ್ ಅನ್ನು ವಶಕ್ಕೆ ಪಡೆದಿದ್ದಾರೆ.


ನ.30ರಂದು ಮುಂಜಾನೆ 5 ಗಂಟೆ ಸಮಯದಲ್ಲಿ ವ್ಯಕ್ತಿಯೊಬ್ಬರು ಮಡಿಕೇರಿಗೆ ಹೋಗಲು ಬಿ.ಎನ್. ರಸ್ತೆಯಲ್ಲಿನ ಮೈಸೂರು ಕಾಂಪ್ಲೆಕ್ಸ್ ಬಳಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಆಟೋದಲ್ಲಿ ಬಂದ ಇಬ್ಬರು ಹೆಂಗಸರು ಹಾಗೂ ಇಬ್ಬರು ಗಂಡಸರು ಕೈಗಳಿಂದ ಹೊಡೆದು, ಕೆಳಗೆ ಬೀಳಿಸಿ ವ್ಯಕ್ತಿಯ ಜೇಬಿನಲ್ಲಿದ್ದ 25 ಸಾವಿರ ರೂ ಕಿತ್ತುಕೊಂಡು ಪರಾರಿಯಾಗಿದ್ದರು. ಹಾಗೆಯೇ ಡಿ.14 ರಂದು ರಾತ್ರಿ 7.30ರ ವೇಳೆ ಬಿ.ಎನ್ ರಸ್ತೆ ಸೆಂಟ್ರಲ್ ಮಾಲ್ ಹತ್ತಿರ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ಆಟೋದಲ್ಲಿ ಬಂದು ಅಡ್ಡಗಟ್ಟಿದ ಮೂರ್‍ನಾಲ್ಕು ಮಂದಿ ಆತನ ಜೇಬಿನಲ್ಲಿದ್ದ 6700 ರೂ, ನಗದು ಮತ್ತು ಒಂದು ರೆಡ್ ಮೀ ಮೊಬೈಲ್ ಫೋನನ್ನು ಕಿತ್ತುಕೊಂಡು ಪರಾರಿಯಾಗಿದ್ದರು.

ಈ 2 ಪ್ರಕರಣ ಸಂಬಂಧ ದೂರು ದಾಖಲಿಸಿ ಕೊಂಡು ತನಿಖೆ ನಡೆಸಿದ ಲಷ್ಕರ್ ಠಾಣೆ ಪೊಲೀಸರು ಒಟ್ಟು 7 ಮಂದಿ ಸುಲಿಗೆಕೋರರನ್ನು ಬಂಧಿಸಿ, 23,500 ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ಒಂದು ಆಟೋರಿಕ್ಷಾ ಮತ್ತು ಮೊಬೈಲ್ ಫೋನ್ ಅನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಜಿಎಸ್‌ಟಿ ಕೌನ್ಸಿಲ್ ಸಭೆ

ಯಾವುದೇ ವಸ್ತುವಿನ ಮೇಲೆ ತೆರಿಗೆ ಹೆಚ್ಚಳ ಇಲ್ಲ, ಅಪರಾಧ ನಿಯಮ ಸಡಿಲ

ನವದೆಹಲಿ: ಈ ಬಾರಿಯ ಸರಕು ಮತ್ತು ಸೇವಾ ತೆರಿಗೆ (GST) ಮಂಡಳಿ ಸಭೆಯಲ್ಲಿ ಯಾವುದೇ ವಸ್ತುವಿನ ಮೇಲೆ ತೆರಿಗೆ ಹೆಚ್ಚಳದ ನಿರ್ಧಾರ ಕೈಗೊಂಡಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದ್ದಾರೆ.



ಇಂದು ನಡೆದ 48ನೇ ಜಿಎಸ್‌ಟಿ ಕೌನ್ಸಿಲ್ ಸಭೆಯ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಸಮಯದ ಕೊರತೆಯಿಂದಾಗಿ 15 ಅಜೆಂಡಾಗಳಲ್ಲಿ 8 ಅಂಶಗಳ ಬಗ್ಗೆ ಮಾತ್ರ ಕೌನ್ಸಿಲ್ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಆದರೆ ಯಾವುದೇ ಹೊಸ ತೆರಿಗೆಗಳನ್ನು ವಿಧಿಸಿಲ್ಲ. ತಂಬಾಕು ಮತ್ತು ಗುಟ್ಕಾ ಮೇಲಿನ ತೆರಿಗೆ ಬಗ್ಗೆ ಚರ್ಚಿಸಲು ಸಮಯದ ಅಭಾವದ ಕಾರಣ ಈ ಸಭೆಯಲ್ಲಿ ಸಾಧ್ಯವಾಗಿಲ್ಲ. ಮುಂದಿನ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಿದ್ದೇವೆ ಎಂದರು. ಜಿಎಸ್‌ಟಿ ಕಾನೂನಿನ ಅಡಿಯಲ್ಲಿ ಅಪರಾಧವೆಂದು ಪರಿಗಣಿಸಲಾಗಿರುವ ಕೆಲವು ನಿಯಮಗಳಲ್ಲಿ ತುಸು ಸಡಿಲಿಕೆ ಮಾಡಲಾಗಿದೆ. ನಕಲಿ ಇನ್‌ವಾಯ್ಸ್ ಸಲ್ಲಿಸುವುದನ್ನು ಹೊರತುಪಡಿಸಿದಂತೆ ಇತರ ಅಪರಾಧಗಳ ಮೇಲಿನ ಕಾನೂನು ಕ್ರಮ ಕೈಗೊಳ್ಳುವ ಮಿತಿಯನ್ನು 1 ಕೋಟಿಯಿಂದ 2 ಕೋಟಿಗೆ ಹೆಚ್ಚಿಸಲಾಗಿದೆ ಎಂದರು.

ದೇವಸ್ಥಾನಗಳಲ್ಲಿ ಮೊಬೈಲ್ ನಿಷೇಧಿಸುವಂತೆ ಮನವಿ

ಬೆಂಗಳೂರು: ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳಲ್ಲಿ ಮೊಬೈಲ್‌ಬಳಕೆ ನಿಷೇಧಿಸುವಂತೆ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ–ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟವು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ಮನವಿ ಸಲ್ಲಿಸಿದೆ. ಒಕ್ಕೂಟದ ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್.ದೀಕ್ಷಿತ್, ಸಚಿವರನ್ನು ಭೇಟಿಮಾಡಿ ಮನವಿ ಸಲ್ಲಿಸಿದರು.

ದೇವಸ್ಥಾನಗಳ ಆವರಣದಲ್ಲಿ ಮೊಬೈಲ್ ಬಳಕೆಗೆ ಅವಕಾಶ ಇರುವುದರಿಂದ ಪೂಜಾ ಕಾರ್ಯ ಹಾಗೂ ಭಕ್ತಾದಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ದೇವಸ್ಥಾನಗಳಲ್ಲಿ ಮೊಬೈಲ್ ನಿಷೇಧಿಸಿ ಆದೇಶಿಸಬೇಕು ಎಂದು ಒತ್ತಾಯಿಸಿದ್ದಾರೆ. ಪೂಜೆ ನಡುವೆಯೇ ರಿಂಗ್‌ಟೋನ್‌ಗಳ ಶಬ್ದದಿಂದ ಕಿರಿಕಿರಿಯಾಗುತ್ತಿದೆ. ಫೋಟೊ ತೆಗೆಯುವುದು, ಗರ್ಭಗುಡಿಗೆ ಬೆನ್ನು ಹಾಕಿ ಸೆಲ್ಫಿ ತೆಗೆಯುತ್ತಾರೆ. ಇದರಿಂದ ಏಕಾಗ್ರತೆಗೆ ಭಂಗ ಉಂಟಾಗುತ್ತಿದೆ. ಈ ರೀತಿ ಅವಕಾಶ ಕಲ್ಪಿಸುವುದರಿಂದ ಭಕ್ತಿಯಿಂದ ದೇವಸ್ಥಾನಕ್ಕೆ ಬರುವವರಲ್ಲಿ ತಪ್ಪು ಕಲ್ಪನೆ ಮೂಡುವ ಸಾಧ್ಯತೆ ಇದೆ. ದೇವಸ್ಥಾನಗಳಲ್ಲಿ ಮೊಬೈಲ್ ನಿಷೇಧಿಸುವುದರ ಜತೆಗೆ, ಮೊಬೈಲ್ ಇರಿಸಿ ಒಳಕ್ಕೆ ಬರಲು ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಮಾನಸಗಂಗೋತ್ರಿ ಕುವೆಂಪು ಶಾಲೆ, ಮಹಿಳಾ ಹಾಸ್ಟೆಲ್‌ಗೆ ಶೌಚಾಲಯ

ಸಿಎಸ್‌ಆರ್ ಅನುದಾನದಲ್ಲಿ ಸೌಲಭ್ಯ ಕಲ್ಪಿಸಲು ಸಂಸದ ಪ್ರತಾಪ್ ಸಿಂಹ ಭರವಸೆ

ಮೈಸೂರು,ಡಿ.17(ಆರ್‌ಕೆ)–ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಸಂಶೋಧನಾ ಪಿಜಿ ವಿದ್ಯಾರ್ಥಿನಿಯರ ಹಾಸ್ಟೆಲ್ ಮತ್ತು ಕುವೆಂಪು ಪ್ರೌಢಶಾಲೆಗೆ ಸಿಎಸ್‌ಆರ್ ಅಡಿ ಜೆ.ಕೆ.ಟೈರ್ಸ್ ಕಂಪನಿಯಿಂದ ಶೌಚಾಲಯ ನಿರ್ಮಿಸಿಕೊಡುವುದಾಗಿ ಸಂಸದ ಪ್ರತಾಪ್ ಸಿಂಹ ಭರವಸೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ ಅವರ ಕೋರಿಕೆ ಮೇರೆಗೆ ಮಾನಸಗಂಗೋತ್ರಿ ಮಹಿಳಾ ಹಾಸ್ಟೆಲ್ ಮತ್ತು ಕುವೆಂಪು ಪ್ರೌಢಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂಸದರು, ಶೌಚಾಲಯ ಕೊರತೆ ಎದುರಿಸುತ್ತಿರುವುದು ಕಂಡು ಬಂದ ಹಿನ್ನೆಲೆಯಲ್ಲಿ



ಜೆ.ಕೆ. ಟೈರ್ಸ್ ವತಿಯಿಂದ ಸಿಎಸ್‌ಆರ್ ಅನುದಾನದಲ್ಲಿ ಸೌಲಭ್ಯ ಕಲ್ಪಿಸುವುದಾಗಿ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ. ರಾಜಶೇಖರ್, ಸಿಂಡಿಕೇಟ್ ಸದಸ್ಯೆ ಡಾ. ಚೈತ್ರಾ ನಾರಾಯಣ್, ಜೆ.ಕೆ.ಟೈರ್ಸ್‌ನ ಈಶ್ವರ್, ಸಂಶೋಧನಾ ವಿದ್ಯಾರ್ಥಿ ಹಾಸ್ಟೆಲ್‌ನ ಜಿ.ಶಿವಶಂಕರ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಪ್ರತಾಪ್ ಸಿಂಹ ಅಶೋಕಪುರಂ ರೈಲು ನಿಲ್ದಾಣಕ್ಕೆ ಭೇಟಿ ನೀಡಿ ಪ್ರಗತಿಯಲ್ಲಿರುವ ರೈಲು ನಿಲ್ದಾಣದ ಅಂಗಳ ಪುನಃ ರೂಪಿಸುವ ಕಾಮಗಾರಿಯನ್ನು ವೀಕ್ಷಿಸಿ, ನಿಗದಿತ ಸಮಯದೊಳಗೆ ಪೂರ್ಣಗೊಳಿಸುವಂತೆ ಸೂಚಿಸಿದರು.



ನಕ್ಕರೆ ಅದೇ ಸ್ವರ್ಗ

ಗಿರಾಕಿ : ನಿಮ್ಮ ಹೋಟೆಲ್‌ನಲ್ಲಿ ಅನುಕೂಲಕರವಾಗಿದೆಂಪೆ?
ಮಾಲೀಕ : ಖಂಡಿತವಾಗಿ ಸಾರ್, ನೀವು ಇಲ್ಲಿದ್ದರೆ ನಿಮ್ಮ ಮನೇಲಿ ಇದಿರೋ ಏನೋ ಅನ್ನೋ ಹಾಗಿರುತ್ತೆ."
ಗಿರಾಕಿ : ಛೆ! ಇಲ್ಲೂ ಅದೇ ಕಷ್ಟಗಳೇ. ಹಾಗಾದರೆ ನಾನು ಮನೆಗೇ ಹೋಗ್ತೀನಿ.

ಮೈಸೂರು ಮಿತ್ರ

ಭಾನುವಾರ, 18 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಚಿಂತನೆಯಿಂದ ಬುದ್ಧಿವಂತನಾಗಬಹುದು. ಆದರೆ ತಿಳಿವು ಓದಿನಿಂದಲೇ ಬರಬೇಕು. – ಎಡ್ವರ್ಡ್ ನ್ಯೂಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಡತನ ಬಂದರೂ ದೊಡ್ಡತನ ಹೋಗಬಾರದು

ನಿಮ್ಮ ಪತ್ರಗಳು

ಪಕ್ಷಾಂತರಗಳಿಗೆ ಪರಿಪಕ್ವತೆಯ ಕಾಲ..!!

ಮಾನ್ಯರೆ,

ಕರ್ನಾಟಕದಲ್ಲಿ ಚುನಾವಣೆ ಹತ್ತಿರವಾಗುತ್ತಿದ್ದಂತೆ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಹಾರಲು ರಾಜಕೀಯ ನಾಯಕರು ಮಾನಸಿಕವಾಗಿ ಸಿದ್ದರಾಗಿದ್ದಾರೆ. ಒಂದಷ್ಟು ನಾಯಕರು ಈಗಾಗಲೇ ಪಕ್ಷಾಂತರಗೊಂಡಿದ್ದಾರೆ. ಇನ್ನೊಂದಷ್ಟು ನಾಯಕರು ಕ್ಷೇತ್ರದ ಟಿಕೆಟ್ ಖಾತ್ರಿಗಾಗಿ ಕಾಯುತ್ತಿದ್ದಾರೆ. ಮತ್ತೊಂದಷ್ಟು ನಾಯಕರು ಮಾನಸಿಕ ಗೊಂದಲದ ತೊಳಲಾಟದಲ್ಲಿದ್ದಾರೆ. ಒಟ್ಟಾರೆಯಾಗಿ ಇವೆಲ್ಲ ನಾಟಕೀಯ ಬೆಳವಣಿಗೆಗಳಷ್ಟೇ. ತಮ್ಮ ಅಸ್ತಿತ್ವ, ರಾಜಕೀಯ ಭವಿಷ್ಯ, ಅಧಿಕಾರ, ಪ್ರತಿಷ್ಠೆ, ಸ್ವಹಿತಾಸಕ್ತಿಗಾಗಿ, ಸೂಕ್ತ ಸ್ಥಾನಮಾನ, ತಮ್ಮ ಮಕ್ಕಳ ರಾಜಕೀಯ ಭವಿಷ್ಯ ಉದ್ದೇಶವನಿಟ್ಟುಕೊಂಡು, ತಮ್ಮ ಸ್ವಾಭಿಮಾನ, ಹಗೆತನ, ಸ್ವಪಕ್ಷಗಳ ತತ್ವ, ಸಿದ್ಧಾಂತಗಳನ್ನು ಗಾಳಿಗೆ ತೂರಿ ಮತ್ತೊಂದು ಪಕ್ಷಕ್ಕೆ ಸೇರ್ಪಡೆಗೊಳ್ಳಲು ಮಾನಸಿಕವಾಗಿ ಸಿದ್ಧರಾಗುತ್ತಿದ್ದಾರೆ. ರಾಜಕೀಯದ ಚದುರಂಗದಾಟದಲ್ಲಿ ಏನಾದರೂ ಆಗಬಹುದು ಎಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಸ್ವಪಕ್ಷದವರೇ ಆದ ಜೆಡಿಎಸ್‌ನ ಹಾವು ಮುಂಗುಸಿಯಂತಿದ್ದ ಮಾಜಿ ಸಚಿವ ಜಿ.ಟಿ. ದೇವೇಗೌಡ ಮತ್ತು ಮಾಜಿ ಪ್ರಧಾನಿ ದೇವೇಗೌಡರ ಕುಟುಂಬ ಇದಕ್ಕೆ ಪ್ರಸ್ತುತ ಉದಾಹರಣೆಯಾಗಿದೆ. ಜಿ ಟಿ ದೇವೇಗೌಡರು ಜೆಡಿಎಸ್‌ನೊಂದಿಗೆ ಮುನಿಸಿಕೊಂಡು ಪಕ್ಷ ತೊರೆಯಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಆದರೆ ಈಗ ಚುನಾವಣೆ ಸಮೀಪಿಸುತ್ತಿದ್ದಂತೆ ಮತ್ತೆ ಜೆಡಿಎಸ್‌ನೊಂದಿಗೆ ಒಗ್ಗಟ್ಟಿನ ಮಂತ್ರವನ್ನು ಜಪಿಸುತ್ತಿದ್ದಾರೆ. ಮತ್ತೊಂದು ಕಡೆ ಹಳ್ಳಿ ಹಕ್ಕಿಯಾದ ಹೆಚ್.ವಿಶ್ವನಾಥ್ ಬಿಜೆಪಿಯಲ್ಲಿ ಸೂಕ್ತ ಸ್ಥಾನಮಾನ ಸಿಗಲಿಲ್ಲವೆಂದು ಮುನಿಸಿಕೊಂಡು, ಸ್ವಪಕ್ಷ ವಿರುದ್ಧವೇ ವಾಗ್ದಾಳಿ ಮಾಡುತ್ತಾ, ಈಗ ಪಕ್ಷ ತೊರೆದು ಕಾಂಗ್ರೆಸ್‌ಗೆ ಜಿಗಿಯಲು ತಯಾರಾಗಿದ್ದಾರೆ. ಹೀಗೆ ಎಲ್ಲಾ ಪಕ್ಷಗಳ ಅನೇಕ ರಾಜಕೀಯ ಮುಖಂಡರು ಸೂಕ್ತ ಸ್ಥಾನಮಾನ, ಕ್ಷೇತ್ರದ ಟಿಕೆಟ್ ಖಾತ್ರಿಯನ್ನು ಮಾಡಿಕೊಂಡು ಪಕ್ಷಾಂತರವನ್ನು ಮಾಡಲು ತುದಿಗಳಲ್ಲಿ ನಿಂತಿದ್ದಾರೆ. ಇದು ಒಂದು ರೀತಿಯಲ್ಲಿ ಕ್ಷೇತ್ರದ ಕಾರ್ಯಕರ್ತರಿಗೆ ಇರುಸು ಮುರುಸಾಗಿ ಅಲ್ಲಲ್ಲಿ ಗಲಾಟೆಗಳು ನಡೆಯುವುದು ಉಂಟು. ರಾಜಕೀಯದಲ್ಲಿ ಸ್ನೇಹಿತರು ಶತ್ರುಗಳಾಗುತ್ತಾರೆ, ಶತ್ರುಗಳು ಸ್ನೇಹಿತರಾಗುತ್ತಾರೆ. ರಕ್ತ ಸಂಬಂಧಕ್ಕಿಂತ ರಾಜಕೀಯದ ಭವಿಷ್ಯವೇ ಮುಖ್ಯವೆಂದು ಸಂಬಂಧದಿಂದ ದೂರವಾಗಿರುವ ಅನೇಕ ಘಟನೆಗಳಿವೆ. ಅದೇನಿದ್ದರೂ ಪಕ್ಷಾಂತರದ ಮುಖಂಡರಿಗೆ ಮತದಾರರು ಒಲಿಯುತ್ತಾರೆಯೇ ಎಂಬುದನ್ನು 2023 ರ ಚುನಾವಣೆಯಲ್ಲಿ ಕಾದು ನೋಡಬೇಕು.

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ತ್ರಿವೇಣಿ ಅವರ ಮನೆ ವಸ್ತುಸಂಗ್ರಹಾಲಯ ಮಾಡುವ ಕೆಲಸ ಶ್ಲಾಘನೀಯ

ಮಾನ್ಯರೆ,

ತ್ರಿವೇಣಿ ಶಂಕರ್ ಸಾಹಿತ್ಯ ಪ್ರತಿಷ್ಠಾನದ ಮೂಲಕ ತ್ರಿವೇಣಿ ಅವರ ಪುತ್ರಿ ಮೀರಾ ಕುಮಾರ್ ಅವರು ಕನ್ನಡ ಸಾರಸ್ವತ ಲೋಕದ ಬೆಳ್ಳಿಮೋಡ ತ್ರಿವೇಣಿ ಅವರು ಬಾಳಿ ಬದುಕಿದ್ದ ಮನೆಯನ್ನು ಜೀರ್ಣೋದ್ಧಾರ ಮಾಡಲು ನಿರ್ಧರಿಸಿ 'ಬೆಳ್ಳಿಮೋಡ' ಎಂದು ಹೆಸರಿಡಲು ತೀರ್ಮಾನಿಸಿರುವುದು ಶ್ಲಾಘನೀಯ. ಅಲ್ಪಾವಧಿ 34 ವರ್ಷ ಬದುಕಿದ್ದ ಅನುಸೂಯ ಶಂಕರ್ ಅವರು 'ತ್ರಿವೇಣಿ' ಎಂಬ ಕಾವ್ಯನಾಮದಿಂದ ಕನ್ನಡಿಗರ ಮನಸ್ಸಿನಲ್ಲಿ ಅಜರಾಮರವಾಗಿ ಉಳಿದಿದ್ದಾರೆ. ಅವರ ಕಾದಂಬರಿಗಳಾದ ಬೆಳ್ಳಿಮೋಡ, ಶರಪಂಜರ, ಬೆಕ್ಕಿನಕಣ್ಣು, ಹಣ್ಣೆಲೆ ಚಿಗುರಿದಾಗ, ದೂರದಬೆಟ್ಟ, ಸೋತು ಗೆದ್ದವಳು, ಹೂವು ಹಣ್ಣು, ಇನ್ನೂ ಮುಂತಾದವುಗಳು ಕನ್ನಡಿಗರ ಮನಸ್ಸಿನಲ್ಲಿ ನೆಲೆಯೂರಿವೆ. ಬರವಣಿಗೆಯ ಅವಧಿ 13 ವರ್ಷಗಳಲ್ಲಿ 21 ಕಾದಂಬರಿಗಳು 41 ಸಣ್ಣ ಕಥೆಗಳನ್ನು ಬರೆದ ತ್ರಿವೇಣಿ ಅವರು ಇಂದಿಗೂ ಜನಪ್ರಿಯರಾಗಿ ಕನ್ನಡಿಗರ ಮನಸ್ಸಿನಲ್ಲಿ ಶಾಶ್ವತ ಮಿನುಗುತಾರೆಯಾಗಿ ಸಾಹಿತ್ಯ ಲೋಕದಲ್ಲಿ ಅಲ್ಪಾಯುಷಿ ಯಾಗಿ ಬದುಕಿದರೂ ಧ್ರುವತಾರೆಯಾಗಿ ಪ್ರಜ್ವಲಿಸುತ್ತಿದ್ದಾರೆ.

– ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ.ನಗರ, ಮೈಸೂರು

ಒಂದು ರೋಚಕ ಅನುಭವ

ಮಾನ್ಯರೆ,

ಒಂದು ರೋಮಾಂಚನಕಾರಿ ಅನುಭವವನ್ನು ನಾ ನಿಮಗೆ ಹೇಳುತ್ತೀನಿ. ಡಿ. 15ರ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಮೈಸೂರು ಅರಮನೆ ನೋಡಲು ಹೋಗಿದ್ದೆ. ಟಿಕೆಟ್ ಪಡೆದು ಒಳಗೆ ಹೋಗುವ ದಾರಿಯಲ್ಲಿ ಮೂರ್‍ನಾಲ್ಕು ಕಾರುಗಳು ಒಂದರ ಹಿಂದೆ ಒಂದು ಬಂದು ಅರಮನೆ ಮಂಡಳಿ ಆಫೀಸಿನ ಮುಂದೆ ನಿಂತುಕೊಂಡವು. ನಾನು ಕುತೂಹಲದಿಂದ ಯಾರಿರಬಹುದೆಂದು ನೋಡುತ್ತಿದ್ದೆ. ಕಾರಿನಿಂದ ಒಬ್ಬರು ಸುಂದರ ಮಹಿಳೆ ಮತ್ತು ಅವರ ಕುಟುಂಬ ವರ್ಗದವರು ಇಳಿದು ಆಫೀಸಿಗೆ ಹೋಗಿ 5 ನಿಮಿಷದಲ್ಲಿ ವಾಪಸ್ಸಾದರು. ಅವರ ಜತೆ ಸೆಕ್ಯೂರಿಟಿಯವರು ಅವರನ್ನು ಅರಮನೆ ವೀಕ್ಷಿಸಲು ಒಳಗೆ ಕರೆದುಕೊಂಡು ಹೋದರು. ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರೊಬ್ಬರನ್ನು ನಾ ಕೇಳಿದೆ. ಅವರ್‍ಯಾರು ಎಂದು.

ಉತ್ತರಖಂಡ್ ರಾಜ್ಯದ ಸಿಎಂ ಪುಷ್ಕರ್ ಸಿಂಗ್ ಧಾಮಿಯವರ ಪತ್ನಿ ಎಂದು ತಿಳಿಯಿತು. ವಿಶ್ವವಿಖ್ಯಾತ ಅರಮನೆಯನ್ನು ನೋಡಲು ಅವರು ಬಂದಿದ್ದರು. ನಾನು ಅಲ್ಲಿಂದ ಅರಮನೆ ಒಳಗೆ ಪ್ರವೇಶಿಸಿ ವೀಕ್ಷಿಸುತ್ತಾ ಬರುತ್ತಿದ್ದೆ. ಸ್ವಲ್ಪ ಹೊತ್ತು ಕಳೆದಿತ್ತು. ಒಳಗಿರುವ ತೊಟ್ಟಿ ಅರಮನೆ ವೀಕ್ಷಿಸುತ್ತ ನಿಂತಿದ್ದೆ. "Take here one photo" ಎಂದು ಯಾರೋ ಹೇಳಿದಂತೆ ಆಯಿತು. ಹಿಂದೆ ತಿರುಗಿ ನೋಡಿದೆ. ನನ್ನ ಪಕ್ಕದಲ್ಲೇ ಆ ಮಹಿಳೆ ಇದ್ದಾರೆ. ನಾನು ಶಾಕ್ ಆದೆ. ಸೆಕ್ಯೂರಿಟಿಯವರು ಅವರ ಫೋಟೋ ತೆಗೆಯಲು ಪ್ರಾರಂಭಿಸಿದಾಗ ಅವರ ಜತೆ ನಿಲ್ಲುವುದು ಸಮಂಜಸವಲ್ಲ. ಹಾಗೂ ಅವರ್‍ಯಾರೆಂದು ಗೊತ್ತಿದ್ದರಿಂದ ನಾನು ಅವರಿಂದ ಸ್ವಲ್ಪ ಹಿಂದೆ ಸರಿದು ದೂರು ನಿಂತುಕೊಂಡೆ. ಫೋಟೋ ತೆಗೆಸಿಕೊಂಡು ಅವರು ಸೆಕ್ಯೂರಿಟಿ ಜತೆ ಹೊರಟು ಹೋದರು. ನಾನು ಸ್ತಬ್ಧವಾಗಿ ನಿಂತುಬಿಟ್ಟೆ, ಏನಪ್ಪ ಇದು ಸಂದರ್ಭ. ನಾನೊಬ್ಬ ಸಾಮಾನ್ಯ ನಾಗರಿಕರು. ಅವರೋ ಸಿಎಂ ಅವರ ಪತ್ನಿ ಎಂದು ನೆನೆಸಿ ರೋಚಕ ಸನ್ನಿವೇಶ ನನಗುಂಟಾಯಿತು. ನಾವು ಪ್ರವಾಸಿ ಸ್ಥಳಗಳನ್ನು ವೀಕ್ಷಿಸಲು ಬಂದಾಗ ನಮ್ಮ ಜತೆ ಇರುವವರು ಯಾರು, ಅವರ ಸ್ಥಾನಮಾನವೇನು, ಪದವಿ ಯಾವುದು ಎಂದು ಯಾರಿಗೂ, ಯಾವಾಗಲೂ ತಿಳಿಯದು. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬಂದು ಹೋಗುವ ದೊಡ್ಡ ವ್ಯಕ್ತಿಗಳ ನಡುವೆ ನನಗಾದ ವಿಶೇಷ ಅನುಭವವಿದು. ಇನ್ನು ಮೈಸೂರು ಅರಮನೆಯನ್ನು ವೀಕ್ಷಿಸುವುದು ಇದೊಂದು ರೋಚಕ ಅನುಭವ.

– ಆರ್. ರಂಗಸ್ವಾಮಿ ಶಾಂತ, ಅಶೋಕಪುರಂ, ಮೈಸೂರು.


ಮರಳಿ ಮನೆಗೆ...!

ಮಾನ್ಯರೆ,

ಸಿದ್ದರಾಮಯ್ಯ ಮನೆಗೆ ಹೋಗುವುದು ನಿಶ್ಚಿತ ಎಂದು ಮುಖ್ಯಮಂತ್ರಿ ಬೊಮ್ಮಾಯಿ (ಮಿತ್ರ ನ. 11). ಎಂದರೆ 'ಸಿದ್ದು' ಈಗ ಬೀದಿಯಲ್ಲಿ ನಿಂತಿದ್ದಾರೆಯೇ (ಬೀದಿಗೆ ಬಿದ್ದಿದ್ದಾರೆಯೇ?) ಅಥವಾ ಆಸ್ಪತ್ರೆಯಲ್ಲಿದ್ದಾರೆಯೇ? ಅಂದ ಹಾಗೆ, ಎಲ್ಲರೂ ಒಂದಲ್ಲ ಒಂದು ದಿನ ಮನೆಗೆ ಹೋಗಲೇಬೇಕು; ಕುವೆಂಪು ಹೇಳುವ 'ದಿಟದ ಮನೆ'ಗೆ ಕೂಡ!

ಮುಖ್ಯಮಂತ್ರಿಗಳಾಗಲಿ ಮತ್ತಾರೇ ಆಗಲಿ ಭವಿಷ್ಯ ನುಡಿಯಬೇಕಿಲ್ಲ. (ಕೆಲವೊಮ್ಮೆ ಅನೇಕರ 'ಭೂತ' ಗೊತ್ತಿರುವುದಿಲ್ಲ; ಆದರೆ ಎಲ್ಲರ ಭವಿಷ್ಯ ಗೊತ್ತು!).

– ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಬದುಕಿನ ಸಿದ್ಧ ಸೂತ್ರ–ಮೂರು ಮಲ, ಆರು ಜಲ

ನಿಮ್ಮ ಜೀವನ ಹೇಗಿದೆ, ನಿಮ್ಮ ಆರೋಗ್ಯ ಹೇಗಿದೆ ಎಂದು ನೀವು ವೈದ್ಯರನ್ನು ಸಂಪರ್ಕಿಸಿ ತಿಳಿದುಕೊಳ್ಳುವ ಅಗತ್ಯವಿಲ್ಲ. ಸಾಮಾನ್ಯವಾಗಿ ನಮಗೇ ನಮ್ಮ ಜೀವನ ಹಾಗೂ ಆರೋಗ್ಯ ಹೇಗಿದೆ ಎಂಬುದು ಗೊತ್ತಾಗುತ್ತದೆ. ನಿಜ, ಇದು ಎಲ್ಲ ಸಮಯದಲ್ಲೂ ಸತ್ಯವಲ್ಲ. ಆದರೆ ಶೇ.90ಕ್ಕಿಂತ ಹೆಚ್ಚು ನಮಗೇ ನಮ್ಮ ಬಗ್ಗೆ ತಿಳಿದಿರುತ್ತದೆ. ನಮ್ಮ ಆರೋಗ್ಯದ ಬಗ್ಗೆ ನಮಗೆ ಗೊತ್ತಿದ್ದರೂ ಅದು ಹೇಗೆ ನಾವು ಆರೋಗ್ಯ ತಪ್ಪುತ್ತೇವೆ, ಅದೇಕೆ ವೈದ್ಯರನ್ನು ಸಂಪರ್ಕಿಸುತ್ತೇವೆ ಎಂದು ನಮಗೆ ನಾವೇ ಪ್ರಶ್ನೆ ಹಾಕಿಕೊಳ್ಳಬೇಕು, ಉತ್ತರವೂ ನಮಗೇ ಗೊತ್ತಿರುತ್ತದೆ.

ಅಲ್ಲದೆ ನಮ್ಮ ದೇಹದ ಬಗ್ಗೆ ನಮಗಿಂತ ವೈದ್ಯರಿಗೆ ಹೇಗೆ ಹೆಚ್ಚು ತಿಳಿದಿರುತ್ತದೆ. ನಾವು, ಆರೋಗ್ಯ ಕೆಟ್ಟಿದೆ ಎಂದು ಅವರ ಬಳಿ ಹೋದಾಗ ಅವರು ಆ ಅನಾರೋಗ್ಯಕ್ಕೆ ಏನು ಕಾರಣ ಎಂದು ನಮ್ಮ ಬಾಯಿಂದಲೇ ಕೇಳಿ ತಿಳಿದುಕೊಳ್ಳುತ್ತಾರೆ. ನಾವು ಬಾಯೇ ಬಿಡದಿದ್ದರೆ ಅವರಿಗೆ ಕಾರಣವೇ ತಿಳಿಯುವುದಿಲ್ಲ. ಮೈ ಬಿಸಿಯಿದ್ದರೆ ಜ್ವರ ಎಂದೂ, ನಾವು ಕೆಮ್ಮುತ್ತಿದ್ದರೆ ನಮಗೆ ಕೆಮ್ಮಿದೆ ಎಂದು ಅವರಿಗೆ ತಿಳಿಯಬಹುದಷ್ಟೇ. ಉಳಿದದ್ದು ನಾವೇ ಹೇಳಿಕೊಳ್ಳಬೇಕು. ವೈದ್ಯರ ಮೊದಲ ಪ್ರಶ್ನೆ ನೀವು ನಿನ್ನೆ ಇಲ್ಲವೇ ಇತ್ತೀಚೆಗೆ ಏನು ತಿಂದಿರಿ ಎಂಬುದಾಗಿದ್ದರೆ, ಎರಡನೇ ಪ್ರಶ್ನೆ ನಿಮಗೆ ಮಲ–ಮೂತ್ರ ವಿಸರ್ಜನೆ ಸರಿಯಾಗಿ ಆಗಿದೆಯೇ ಎಂಬುದಾಗಿರುತ್ತದೆ. ನಮ್ಮೆಲ್ಲಾ ಆರೋಗ್ಯ, ಅನಾರೋಗ್ಯಕ್ಕೆ ಮುಖ್ಯವಾಗಿ ಈ ಎರಡೇ ಕಾರಣವಾಗಿರುತ್ತದೆ.

ನಮಗೆ ಏನು ತಿನ್ನಬೇಕು, ಏನು ತಿನ್ನಬಾರದು ಎಂಬುದು ತಿಳಿದಿರಬೇಕು. ನಾನು ತಿನ್ನುವ ಆಹಾರ ನನ್ನ ದೇಹಕ್ಕೆ ಒಗ್ಗುವುದೇ, ಇಲ್ಲವೇ. ನಾನು ತಿಂದ ಆಹಾರ ಸುಲಭವಾಗಿ ಪಚನವಾಗುತ್ತದೆಯೇ, ಇಲ್ಲವೇ. ನಾನು ನಿಯಮಿತವಾಗಿ ಮಲ–ಮೂತ್ರ ವಿಸರ್ಜನೆ ಮಾಡುತ್ತಿರುವೇನೇ ಎಂಬುದು ಮುಖ್ಯವಾಗಿ ನಮ್ಮ ಆರೋಗ್ಯವನ್ನು ನಿರ್ಧರಿಸುತ್ತದೆ. ನಾವು ಹುಟ್ಟಿದಂದಿನಿಂದ ಒಂದು ರೀತಿಯ ಆಹಾರ ಪದ್ಧತಿಗೆ ನಮ್ಮ ದೇಹವನ್ನು ಹೊಂದಿಸಿಕೊಂಡಿರುತ್ತೇವೆ. ಅದು ರಾಗಿಯ ಬಳಕೆ ಇರಬಹುದು, ಅಕ್ಕಿಯ ಬಳಕೆ ಇರಬಹುದು, ಗೋಧಿ, ಜೋಳದ ಬಳಕೆಯೂ ಆಗಿರಬಹುದು. ಅದು ಚಿಕ್ಕಂದಿನಿಂದಲೂ ನಮಗೆ ಅಭ್ಯಾಸವಾಗಿರುತ್ತದೆ. ಅದು ದೇಹದಲ್ಲಿ ಒಂದು ರೀತಿಯ ಪಥ್ಯದಂತೆ ಕೆಲಸ ಮಾಡುತ್ತಿರುತ್ತದೆ.

ಮನೆ ಊಟ ಮಾಡಿಕೊಂಡಿರುವವರಿಗೆ ರೋಗ ಕಡಿಮೆಯೇ!! ಬಾಯಿ ಚಪಲದಿಂದ ಸಿಕ್ಕಿದ್ದು ತಿಂದಾಗ, ಅದು ಅಷ್ಟು ಸುಲಭವಾಗಿ ಜೀರ್ಣವಾಗುವುದಿಲ್ಲ. ನಾವು ದಕ್ಷಿಣ ಭಾರತದ ಆಹಾರಕ್ಕೆ ಹೊಂದಿಕೊಂಡಿರುವಾಗ, ಉತ್ತರ ಭಾರತದ ಊಟ ಸವಿದರೆ, ಸವಿಯುವಾಗಷ್ಟೇ ಅದು ಹಿತ. ನಂತರ ಅದು ದೇಹದಲ್ಲಿ ಒಂದು ರೀತಿಯ ಆಲಸ್ಯ ತರುತ್ತದೆ. ಆಹಾರ ಜೀರ್ಣವಾಗದಿರುವಾಗ ಮಲಮೂತ್ರ ವಿಸರ್ಜನೆ ನಿಯಮಿತವಾಗುವುದಿಲ್ಲ. ಹಾಗಾದಾಗ ನಾವು ನಮ್ಮನ್ನು ಖಾಯಿಲೆಗಳಿಗೆ ತೆರೆದುಕೊಂಡಂತೆ ಆಗಿಬಿಡುತ್ತದೆ. ನಮಗೆ ನಿಯಮಿತವಾಗಿ ಮಲ–ಮೂತ್ರ ವಿಸರ್ಜನೆಯಾದಾಗ ಖಾಯಿಲೆಗಳು ಬರುವುದು ಕಡಿಮೆಯೇ. ನಮ್ಮ ಹೊಟ್ಟೆಯೇ ನಮ್ಮ ಆರೋಗ್ಯದ ಗುಟ್ಟು.

ಇತ್ತೀಚೆಗೆ ಭೇಟಿಯಾದ ಒಬ್ಬ ಹಿರಿಯರು ಹೇಳಿದ ಸೂತ್ರ ಕೇಳಲು ಸ್ವಲ್ಪ ಮುಜುಗುರ ಎನಿಸಿದರೂ ಅದರಲ್ಲಿ ತಥ್ಯವಿದೆ ಎನಿಸಿತು. ಅವರು ಹೇಳಿದ ಸೂತ್ರ ಎಂದರೆ: ಮೂರು ಮಲ, ಆರು ಜಲವಿದ್ದಾಗ ಖಾಯಿಲೆ ದೂರವೇ ಇರುತ್ತದೆ ಎಂದು. ಅದು ಹೇಗೆ ಎಂದರೆ, ಸಾಮಾನ್ಯವಾಗಿ ಆರೋಗ್ಯವಾಗಿರುವ ಮನುಷ್ಯ ದಿನಕ್ಕೆ ಮೂರು ಸಲ ಮಲ ವಿಸರ್ಜನೆ ಮಾಡುತ್ತಾನೆ ಹಾಗೂ ಆರು ಸಲ ಮೂತ್ರ ವಿಸರ್ಜನೆ ಮಾಡುತ್ತಾನೆ ಅಥವಾ ಮಾಡಬೇಕು. ಅದು ಆರೋಗ್ಯದ ಸೂತ್ರ ಎಂಬುದು ಅವರ ಅನುಭವಜನ್ಯವಾದ ಮಾತು.

ಈ ಬಗ್ಗೆ ನಮಗೆಷ್ಟು ಗೊತ್ತು ಹೇಳಿ. ಇನ್ನಾದರೂ ಗಮನ ಹರಿಸೋಣ. ಮಲ–ಮೂತ್ರ ವಿಸರ್ಜನೆ ನೈಸರ್ಗಿಕವಾದದ್ದು. ಅದನ್ನು ಬಲವಂತದಿಂದ ಮಾಡುವಂತಾಗಬಾರದು. ಹಾಗೆಯೇ ಅದನ್ನು ತಡೆದಿಟ್ಟುಕೊಳ್ಳಲೂ ಬಾರದು. ನಮ್ಮಲ್ಲಿ ಅನೇಕರಿಗೆ ಮಲ ವಿಸರ್ಜನೆ ತಮ್ಮಿಷ್ಟದಂತೆ ಎಂದುಕೊಂಡಿರುತ್ತಾರೆ. ಕೆಲವರು ಶೌಚಾಲಯದಲ್ಲಿ ಕುಳಿತರೆ ಹದಿನೈದಿಪ್ಪತ್ತು ನಿಮಿಷ ಅಲ್ಲಿಂದ ಏಳುವುದಿಲ್ಲ. ಕೆಲವರು



> ಆಹಾರ ಜೀರ್ಣವಾಗದಿರುವಾಗ ಮಲ ಮೂತ್ರ ವಿಸರ್ಜನೆ ನಿಯಮಿತವಾಗುವುದಿಲ್ಲ. ಹಾಗಾದಾಗ ನಾವು ನಮ್ಮನ್ನು ಖಾಯಿಲೆಗಳಿಗೆ ತೆರೆದುಕೊಂಡಂತೆ ಆಗಿಬಿಡುತ್ತದೆ. ನಮಗೆ ನಿಯಮಿತವಾಗಿ ಮಲ-ಮೂತ್ರ ವಿಸರ್ಜನೆಯಾದಾಗ ಖಾಯಿಲೆಗಳು ಬರುವುದು ಕಡಿಮೆಯೇ. ನಮ್ಮ ಹೊಟ್ಟೆಯೇ ನಮ್ಮ ಆರೋಗ್ಯದ ಗುಟ್ಟು.

ದಿನಪತ್ರಿಕೆ ತೆಗೆದುಕೊಂಡು ಹೋಗಿ ಕೂತು ಅದನ್ನು ಓದಿಯೇ ಹೊರಗೆ ಬರುವುದು. ಕೆಲವರು ಬೆಳಿಗ್ಗೆ ಹಲ್ಲುಜ್ಜುವುದು ಶೌಚಾಲಯದಲ್ಲಿಯೇ. ಹೀಗಾದರೆ ಇದನ್ನು ಅಭ್ಯಾಸ ಎನ್ನಬೇಕೋ, ದುರಭ್ಯಾಸ ಎನ್ನಬೇಕೋ. ಒಂದು ಆರೋಗ್ಯ ಸೂತ್ರದ ಪ್ರಕಾರ ಐದು, ಹತ್ತು ನಿಮಿಷಕ್ಕಿಂತ ಹೆಚ್ಚು ಕಾಲ ಶೌಚಾಲಯದಲ್ಲಿ ಕೂರಬಾರದು. ಅಲ್ಲದೇ ಬಲವಂತ ಮಲ ವಿಸರ್ಜನೆ ಪ್ರಯತ್ನ ಮಾಡಬಾರದು. ಒಂದಲ್ಲದಿದ್ದರೆ ಮತ್ತೊಮ್ಮೆ ಬೇಕಾದರೂ ಶೌಚಾಲಯಕ್ಕೆ ಹೋಗಿಬರಬಹುದು. ಆದರೆ ಬಲ ವಂತಕ್ಕೆ ಬೀಳುವುದು ಅನಾರೋಗ್ಯಕ್ಕೆ ದಾರಿ ಮಾಡಿಕೊಡುತ್ತದೆ. ಹಾಗೆಯೇ ಮೂತ್ರ ವಿಸರ್ಜನೆಯೂ. ದಿನಕ್ಕೆ ಕನಿಷ್ಠ ಆರು ಸಲ ಮಾಡುವುದು ಒಳಿತು ಎಂದು ಈ ಆರೋಗ್ಯ ಸೂತ್ರ ಹೇಳುತ್ತದೆ. ನಿಜ, ಆದರೆ ಇದು ನಾವು ಕುಡಿಯುವ ನೀರಿನ ಪ್ರಮಾಣಕ್ಕೆ ಅದು ಅನ್ವಯವಾಗಿರುತ್ತದೆ. ಹಾಗೆಂದು ನೀರನ್ನೇ ಕುಡಿಯದಿದ್ದರೆ, ಆರು ಸಲವಾದರೂ ಮೂತ್ರ ವಿಸರ್ಜನೆ ಮಾಡದಿದ್ದರೆ, ದೇಹದ ಆರೋಗ್ಯದ ಸ್ಥಿತಿ ಏರುಪೇರಾಗುತ್ತದೆ ಎಂಬುದು ನಮಗೆ ತಿಳಿದಿರಬೇಕು.

ಇತ್ತೀಚೆಗೆ ಕಂಡುಬಂದ ಒಂದು ಆರೋಗ್ಯದ ವರದಿಯಲ್ಲಿ ಒಬ್ಬ 36ರ ಹರಯದ ವ್ಯಕ್ತಿಯಲ್ಲಿ ಕ್ಯಾನ್ಸರ್ ಇರುವುದು ಕಂಡು ಬಂದಿತು, ಅದೂ ಕೊನೆಯ ಹಂತದ್ದು. ಆ ವ್ಯಕ್ತಿಯ ಹಿನ್ನೆಲೆ ಕೇಳಿದಾಗ ಆತನಿಗೆ ಗುಟ್ಕಾ, ಸಿಗರೇಟ್, ತಂಬಾಕು, ಮದ್ಯ ಇತ್ಯಾದಿ ಯಾವುದರ ಅಭ್ಯಾಸ ಇರಲಿಲ್ಲ. ಸರಿಯಾದ ಸಮಯದಲ್ಲಿ ಊಟ, ನಿದ್ರೆ ಮಾಡುತ್ತಿದ್ದರು. ಒಂದು ರೀತಿ ಸಂತೋಷದ ಜೀವನ ಅವರದ್ದು. ಆದರೆ ಅವರಿಗೆ ಕ್ಯಾನ್ಸರ್ ಹೇಗೆ ಬಂತು ಎಂಬುದು ವಿಸ್ಮಯದ ಪ್ರಶ್ನೆ. ಅವರಿಗೆ ಹೊಟ್ಟೆಯಲ್ಲಿ ಕ್ಯಾನ್ಸರ್ ಇದೆ ಎಂದು ಪರೀಕ್ಷಾ ವರದಿ ಹೇಳುತ್ತಿತ್ತು. ಚಿಕಿತ್ಸೆ ಪ್ರಾರಂಭವಾಯಿತು, ಸಾಕಷ್ಟು ಹಣವೂ ವ್ಯಯವಾಯಿತು. ಕೊನೆಗೆ ಚಿಕಿತ್ಸೆ ಫಲಕಾರಿಯಾಗದೇ ಮರಣವೂ ಸಂಭವಿಸಿತು. ಕಾರಣ ಅದು ಗೊತ್ತಾಗಿದ್ದು ಕೊನೆಯ ಹಂತದಲ್ಲಿ. ಅವರ ದೇಹವನ್ನು ವೈದ್ಯರ ಸಲಹೆಯ ಮೇರೆಗೆ ಆಸ್ಪತ್ರೆಗೆ ದಾನವಾಗಿ ನೀಡಲಾಯಿತು. ವೈದ್ಯರಿಗೂ ಇದು ಬಿಡಿಸಲಾಗದ ಸಮಸ್ಯೆಯಂತಾಗಿತ್ತು. ನಂತರ ಕಂಡುಬಂದ ವಿಷಯ ಎಂದರೆ ಆತ ಪ್ಲಾಸ್ಟಿಕ್ ಬಾಟಲಿಯ ನೀರು ಹೆಚ್ಚಾಗಿ ಕುಡಿಯುತ್ತಿದ್ದ ಎಂಬುದು. ಜೊತೆಗೆ ಆತ ದಿನಕ್ಕೆ ಐದಾರು ಬಾರಿ ಪ್ಲಾಸ್ಟಿಕ್ ಕಪ್ಪುಗಳಲ್ಲಿ ಬಿಸಿಬಿಸಿ ಚಹಾ ಸೇವಿಸುತ್ತಿದ್ದ ಎಂದು. ಇದು ಅವನ ಕ್ಯಾನ್ಸರಿಗೆ ಕಾರಣ ಎಂದು ಕಂಡುಬಂದಿತು.

ಮತ್ತೊಂದು ಕುತೂಹಲದ ಸಂಗತಿ ಎಂದರೆ ಅನೇಕ ಯುವ ವೈದ್ಯರೂ ಇಂತಹುದೇ ಅಭ್ಯಾಸ ಮಾಡಿಕೊಂಡಿದ್ದರು. ಅವರನ್ನೂ ಪರೀಕ್ಷೆಗೆ ಒಳಪಡಿಸಿದಾಗ ಇಂತಹುದೇ ಸಮಸ್ಯೆ ವಿವಿಧ ಮಟ್ಟದಲ್ಲಿ ಅವರಲ್ಲೂ ಕಂಡುಬಂದಿತು ಎನ್ನುವುದು. ಈ ಘಟನೆ ಎಷ್ಟರಮಟ್ಟಿಗೆ ನಿಜವೋ ಗೊತ್ತಿಲ್ಲ. ಆದರೆ ಸಮಸ್ಯೆಯ ಮೂಲವಂತೂ ನಮಗೆ ಅರಿವಾಗುತ್ತದೆ. 'ಪ್ಲಾಸ್ಟಿಕ್ ಕೇವಲ ಪ್ರಕೃತಿಗೆ ಮಾತ್ರ ಶತ್ರುವಲ್ಲ, ಅದು ಮನುಷ್ಯನ ಆರೋಗ್ಯಕ್ಕೂ ಶತ್ರು' ಎಂಬುದು ಅರಿವಾಗುತ್ತದೆ. ನಾವು ಕಾರುಗಳಲ್ಲಿ ಹೋಗುವಾಗ ಕ್ಷೇಮವೆಂದು ಪ್ಲಾಸ್ಟಿಕ್ ಬಾಟಲಿಗಳಲ್ಲಿ ನೀರು ತೆಗೆದುಕೊಂಡು ಹೋಗುತ್ತೇವೆ. ಅದು ಕೊಂಡುಕೊಂಡ ಬಾಟಲಿನ ನೀರಾಗಿರಬಹುದು, ಮನೆಯಿಂದ ತೆಗೆದುಕೊಂಡು ಹೋದ ಬಾಟಲಿನ ನೀರಾಗಿರಬಹುದು. ಅಲ್ಲದೇ ಸುರಕ್ಷಿತ ಎಂದು ಬಿಸಿ ನೀರನ್ನು ಈ ಬಾಟಲಿಗಳಲ್ಲಿ ಹಾಕಿಕೊಂಡು ಹೋಗುತ್ತೇವೆ. ಪ್ಲಾಸ್ಟಿಕ್‌ಗೂ ಬಿಸಿಗೂ ಆಗಿಬರುವುದಿಲ್ಲ. ಬಿಸಿ ನೀರು ಹಾಕಿದೊಡನೇ ಅಲ್ಲಿ ಪ್ರತಿಕ್ರಿಯೆ ಪ್ರಾರಂಭವಾಗುತ್ತದೆ. ಇನ್ನು ಕಾರಿನಲ್ಲಿರುವ ನೀರೂ ಕ್ರಮೇಣ ಬಿಸಿಯಾಗುತ್ತದೆ, ಅಲ್ಲೂ ಪ್ರತಿಕ್ರಿಯೆ ಪ್ರಾರಂಭವಾಗುತ್ತದೆ. ನೀರು ಖಾಲಿಯಾಗಿಲ್ಲ ಎಂದು ಮತ್ತೊಂದೆರಡು ದಿನ ಅದೇ ನೀರು ಉಪಯೋಗಿಸಿದರೆ ಮೊದಲು ನಮ್ಮ ಪಚನ ಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ, ಇದು ನಮಗೆ ಗೊತ್ತಿರಬೇಕು.

ನಾವು ಬದುಕಿರುವುದು ತಿನ್ನುವುದಕ್ಕಲ್ಲ, ಬದಲಿಗೆ ಬದುಕಿರಲು ತಿನ್ನುತ್ತೇವೆ ಎಂದು ಹಿಂದಿನವರು ಹೇಳುತ್ತಿದ್ದರು. ನಾವು ಹಣವಿದೆ ಎಂದು ತಿನ್ನಬಾರದ್ದನ್ನೆಲ್ಲಾ ತಿನ್ನುತ್ತಾ ನಮ್ಮ ಆರೋಗ್ಯ ಕೆಡಿಸಿಕೊಳ್ಳಬಾರದು. ಹಾಗೆ ನೋಡಿದರೆ ಹೊಟ್ಟೆಯ ಕಾಲು ಭಾಗದಷ್ಟು ಖಾಲಿ ಇರುವಂತೆ ತಿನ್ನಬೇಕು ಎಂದು ಹೇಳಲಾಗುತ್ತದೆ. ಹಾಗೆಯೇ ನೀರು ಕುಡಿಯುವುದು. ನೀರನ್ನು ಯಾವಾಗ ಕುಡಿಯಬೇಕು ಎಂಬುದೂ ಆರೋಗ್ಯದ ವಿಷಯದಲ್ಲಿ ತಿಳಿಸಲಾಗಿರುತ್ತದೆ. ಸ್ನಾನಕ್ಕೆ ಮುಂಚೆ ಒಂದು ಲೋಟದಷ್ಟು ತಣ್ಣೀರು (ಮಾಮೂಲು ನೀರು) ಕುಡಿಯುವುದು ಸೂಕ್ತ ಎಂಬ ಸಲಹೆಯಿದೆ. ಅನೇಕ ಹಿರಿಯರು ಸ್ನಾನದ ಮನೆಗಳಲ್ಲಿ ಸ್ನಾನ ಮಾಡುವಾಗ ಬಿದ್ದು ಪೆಟ್ಟು ಮಾಡಿಕೊಂಡರು ಎಂದು ಕೇಳುವಾಗ ಈ ಸೂತ್ರದ ಅರ್ಥವಾಗುತ್ತದೆ. ಒಮ್ಮೆಲೇ ಬಿಸಿ ನೀರನ್ನು ತಲೆಯ ಮೇಲೆ ಸುರಿದುಕೊಂಡಾಗ ಮೆದುಳಿನ ಶಾಖದಲ್ಲಿ ಏರುಪೇರಾಗುತ್ತದೆ. ಮೆದುಳಿನ ರಕ್ತ ಸಂಚಾರ ವ್ಯತ್ಯಯವಾದಾಗ ತಲೆ ಸುತ್ತು ಬರುತ್ತದೆ, ತಲೆ ಸುತ್ತು ಬಂದಾಗ ಕೆಳಗೆ ಬೀಳುವುದು, ಏಟು ಮಾಡಿಕೊಳ್ಳುವುದು ಸಹಜ. ಆದ್ದರಿಂದ ಸ್ನಾನಕ್ಕೆ ಪೂರ್ವದಲ್ಲಿ ಒಂದು ಲೋಟದಷ್ಟು ನೀರು ಕುಡಿಯುವುದು ಉತ್ತಮ ಎಂದು ವೈದ್ಯರು ಹೇಳುತ್ತಾರೆ. ಇದು ದೇಹದ ತಾಪಮಾನವನ್ನು ಸರಿ ದೂಗಿಸುತ್ತದೆ. ಅಲ್ಲದೆ ಒಂದೇ ಸಲಕ್ಕೆ ತಲೆಯ ಮೇಲೆ ಬಿಸಿನೀರು ಹಾಕಿಕೊಳ್ಳಬಾರದು. ನಾವು ಕೆರೆ, ನದಿಗಳಲ್ಲಿ ಸ್ನಾನ ಮಾಡುವಾಗ ಮೊದಲು ನಮ್ಮ ಪಾದಕ್ಕೆ ನೀರಿನ ಸಂಪರ್ಕವಾಗುತ್ತದೆ, ನಂತರ ಕಾಲು ಹೊಟ್ಟೆ, ನಂತರ ತಲೆ. ಇದು ಸೂತ್ರ. ಮೊದಲು ಕಾಲಿನಿಂದ ಪ್ರಾರಂಭಿಸಿ ಸ್ನಾನ ಮಾಡಬೇಕು, ಇದೂ ಸೂತ್ರವೇ.

ನಮ್ಮಲ್ಲಿ ಹಲ್ಲು ಉಜ್ಜುವುದೂ ಏಕೆಂದು ಬಹಳ ಜನಕ್ಕೆ ತಿಳಿದಿರುವುದಿಲ್ಲ. ಬ್ರಷ್‌ಗೆ ಎಷ್ಟು ಪೇಸ್ಟ್ ಹಾಕಿಕೊಳ್ಳಬೇಕು, ಎಷ್ಟು ಹೊತ್ತು ಉಜ್ಜಬೇಕು, ಕರಕರ ಶಬ್ದವಾಗುವಂತೆ ಉಜ್ಜುವುದೇ? ಎಂಬುದು ಅರ್ಥವಾಗಬೇಕು. ಬ್ರಷ್‌ನಿಂದ ಹಲ್ಲು ಉಜ್ಜಿದರೆ ಹಲ್ಲು ಬೆಳ್ಳಗಾಗುವುದಿಲ್ಲ, ಇದು ಗೊತ್ತಿರಬೇಕು. ಬ್ರಷ್ ಮಾಡುವುದರ ಉದ್ದೇಶ ಹಲ್ಲುಗಳ ನಡುವೆ ಉಳಿದಿರುವ ಕಸವನ್ನು ತೆಗೆಯುವುದೇ ಆಗಿರುತ್ತದೆ. ಇದಕ್ಕಾಗಿ ಕಾಲು ಗಂಟೆ ಸಮಯ ಬೇಕಾಗುವುದಿಲ್ಲ. ಎರಡರಿಂದ ಮೂರು ನಿಮಿಷ ಸಾಕಾಗುತ್ತದೆ. ಈಗಾಗಲೇ ಹೇಳಿದಂತೆ ಕೆಲವರು ಶೌಚಾಲಯದಲ್ಲಿ ಕುಳಿತು ಹತ್ತು ಹದಿನೈದು ನಿಮಿಷ ಹಲ್ಲು ಉಜ್ಜುತ್ತಾರೆ. ಇದು ಎರಡು ರೀತಿಯ ತಪ್ಪು. ಹಾಗೆಯೇ ಕೆಲವರು ರಸ್ತೆಗೆ ಬಂದು ರಸ್ತೆ ನೋಡುತ್ತಾ ಹಲವಾರು ನಿಮಿಷ ಹಲ್ಲುಜ್ಜುತ್ತಾ ನಿಲ್ಲುತ್ತಾರೆ. ಇದೂ ಅನಾರೋಗ್ಯವನ್ನು ಆಹ್ವಾನಿಸಿದಂತೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲೇ ಇದೆ. ನಮ್ಮ ದೇಹಸ್ಥಿತಿ ನಮಗೇ ಚೆನ್ನಾಗಿ ತಿಳಿದಿರುತ್ತದೆ. ದೇಹ ದೀರ್ಘಾಯುಷ್ಯ ಆರೋಗ್ಯವಾಗಿರಲು ನಾವು ಯಾವಾಗಲೂ ದೇಹದ ಬಗ್ಗೆ ಕಾಳಜಿ ವಹಿಸಬೇಕು. ದೇಹ ಹೇಳಿದಂತೆ ನಾವಲ್ಲಾ, ನಾವು ಹೇಳಿದಂತೆ ನಮ್ಮ ದೇಹ ಎಂಬ ಮನಸ್ಥಿತಿ ನಮ್ಮದಾಗಿರಬೇಕು.



ಪಾಕ್ ಸಚಿವನ ಹೇಳಿಕೆ ಖಂಡಿಸಿ ಪ್ರತಿಭಟನೆ

ಮೈಸೂರು,ಡಿ.17(ಎಸ್‌ಪಿಎನ್)–ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ನೀಡಿರುವ ಹೇಳಿಕೆಯನ್ನು ಖಂಡಿಸಿ ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರ ಘಟಕದ ಪದಾಧಿಕಾರಿಗಳು ಬುಧವಾರ ಜಿಲ್ಲಾ ನ್ಯಾಯಾಲಯ ಎದುರಿನ ಮಹಾತ್ಮಗಾಂಧಿ ಪ್ರತಿಮೆ ಬಳಿ ಶನಿವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವದ ವಹಿಸಿದ ನಗರಾಧ್ಯಕ್ಷ ಶ್ರೀವತ್ಸ ಹಾಗೂ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಅವರ ನೇತೃತ್ವದಲ್ಲಿ ಬಿಲಾವಲ್ ಭುಟ್ಟೋ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ, ತಮ್ಮ ಆಕ್ರೋಶ ಹೊರಹಾಕಿದರು. ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ, ಭಾರತದ ಪ್ರಧಾನಿ ವಿರುದ್ಧ ಅವಹೇಳನಾಕಾರಿಯಾಗಿ ಮಾತನಾಡಿರುವುದು ಆ ದೇಶದ ಮನಸ್ಥಿತಿ ಇಡೀ ಜಗತ್ತಿಗೆ ತಿಳಿಯಿತು. ಪಾಕಿಸ್ತಾನ ತನ್ನ ನರಿಬುದ್ದಿಯನ್ನು ಇನ್ನಾದರು ಬಿಟ್ಟು ವಿಶ್ವ ಸಮುದಾಯದ ಜೊತೆಗೆ ಉತ್ತಮ ಬಾಂಧವ್ಯ ಉಳಿಸಿಕೊಳ್ಳುವಂತೆ ವಿಶ್ವಸಂಸ್ಥೆ ಮಧ್ಯಪ್ರವೇಶಿಸಿ ಕಿವಿ ಹಿಂಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ಬಿಜೆಪಿ ಮುಖಂಡ ಮೈ.ವಿ.ರವಿಶಂಕರ್, ಪ್ರಧಾನ ಕಾರ್ಯದರ್ಶಿ ದೇವನೂರ ಪ್ರತಾಪ, ಸೋಮಸುಂದರ್, ಗಿರಿಧರ್ ವಾಣೀಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಸೇರಿದಂತೆ ಪದಾಧಿಕಾರಿಗಳಿದ್ದರು.

ಭಾರತದಲ್ಲಿ ಸಂಪ್ರದಾಯವಾದಿಗಳೇ ಸಾಂಸ್ಕೃತಿಕ ಬೀಜ ರಕ್ಷಕರು...

- ಸುಪ್ರೀಂಕೋರ್ಟ್ ವಕೀಲ–ಲೇಖಕ ಜೆ.ದೀಪಕ್ ಸಾಯಿ ಅಭಿಮತ
- ತಮ್ಮ ಪುಸ್ತಕ 'ಇಂಡಿಯಾ, ಭಾರತ್ ಮತ್ತು ಪಾಕಿಸ್ತಾನ್' ಕುರಿತ ಸಂವಾದದಲ್ಲಿ ಭಾಗಿ
- ರಾಜಕೀಯಕ್ಕಿಂತ ನೀತಿಯಿಂದ ಮುಂದಿನ ಪೀಳಿಗೆ ಮೇಲೆ ದೀರ್ಘಕಾಲೀಕ ಪರಿಣಾಮ
- ಪ್ರಸ್ತುತ ದೇವರನ್ನೇ ಉಸಿರಾಡಲು ಬಿಡದ ವಾತಾವರಣವಿದೆ





ಮೈಸೂರು, ಡಿ.17(ಜಿಎ)– ರಾಜಕೀಯಕ್ಕಿಂತ ಹೆಚ್ಚಾಗಿ ನೀತಿಗೆ ಒತ್ತು ನೀಡಬೇಕಾಗಿದೆ ಏಕೆಂದರೆ ನೀತಿಯು ಮುಂದಿನ ಪೀಳಿಗೆಯ ಮೇಲೆ ದೀರ್ಘಕಾಲಿಕ ಪರಿಣಾಮ ಬೀರುತ್ತದೆ. ಆದರೆ, ರಾಜಕೀಯವು ವಿಜಯಕ್ಕೆ ಮಾತ್ರ ಸೀಮಿತವಾಗಿದೆ ಎಂದು ಸುಪ್ರೀಂಕೋರ್ಟ್ ವಕೀಲ ಹಾಗೂ ಲೇಖಕ ಜೆ. ದೀಪಕ್ ಸಾಯಿ ತಿಳಿಸಿದರು.

ತಾವು ಬರೆದಿರುವ 'ಇಂಡಿಯಾ, ಭಾರತ್ ಮತ್ತು ಪಾಕಿಸ್ತಾನ್' ಪುಸ್ತಕ ಕುರಿತು ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಷನ್ ವತಿಯಿಂದ ಏರ್ಪಡಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಸಂಪ್ರದಾಯವಾದಿಗಳೇ ಸಂಸ್ಕೃತಿಯ ಬೀಜ ರಕ್ಷಕರು. ಇಂದು ಅವರ ಮೇಲೆ ಆಕ್ರಮಣವಾಗುತ್ತಿದೆ. ದೇವಸ್ಥಾನಗಳೇ ಹೆಚ್ಚಿನವರ ಗುರಿಯಾಗಿದ್ದು, ದೇವರನ್ನೇ ಉಸಿರಾಡಲು ಬಿಡದ ವಾತಾವರಣವಿದೆ. ಶಬರಿಮಲೆ ಪ್ರಕರಣ ಇದಕ್ಕೊಂದು ಉದಾಹರಣೆಯಾಗಿದ್ದು, ಲಾಭ ಮತ್ತು ಧಾರ್ಮಿಕ ದೃಷ್ಟಿಕೋನದಲ್ಲಿ ಹೊರಗಿನವರು ರಚಿಸಿರುವ ಭಾರತದ ಸುಳ್ಳು ಇತಿಹಾಸಕ್ಕೆ ಸಂಪ್ರದಾಯ ಮತ್ತು ಸಂಶೋಧನೆಯೊಂದಿಗೆ ರಚಿಸಿರುವ ನನ್ನ ಪುಸ್ತಕ ಪರ್ಯಾಯವಾಗಿದೆ. ನಾನು ನೀಡಿರುವ ಮಾಹಿತಿ ನೈಜವಾಗಿದ್ದು ಇದುವರೆಗೂ ಯಾರೂ ಪ್ರಶ್ನಿಸುವ ಧೈರ್ಯ ಮಾಡಿಲ್ಲ ಎಂದು ಹೇಳಿದರು.

ನೀವೆಲ್ಲರೂ ಶಬರಿ ಮಲೆ ದೇವಾಲಯದ ಕೇಸ್ ಕುರಿತು ತಿಳಿದಿದ್ದಿರಾ ಎಂದು ಭಾವಿಸುತ್ತೇನೆ. ಮಲಯಾಳಿ ಬ್ರಾಹ್ಮಣ ಸಮುದಾಯದ ಸದಸ್ಯರು ದೇವಾಲಯಕ್ಕೆ ಮಹಿಳೆಯರಿಗೂ ಪ್ರವೇಶ ಕಲ್ಪಿಸುವ ಅಧಿಸೂಚನೆಯನ್ನು ಕೇರಳ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಮಾನದಂಡಗಳ ಆಧಾರದ ಮೇಲೆ ಸಮಾನತೆಯ ವಿಷಯದಲ್ಲಿ ಸಂವಿಧಾನದ ವಿಧಿ 14 ಉಲ್ಲಂಘನೆಯಾಗಿದೆ ಎಂದು ಕೋರ್ಟ್ ತಿಳಿಸಿತ್ತು. ಆ ಕೇಸ್ ಸಂಬಂಧ ಕೇರಳ ಕೋರ್ಟ್‌ಗೆ ಒಂದು ಅರ್ಜಿ ಕೂಡ ಸಲ್ಲಿಕೆಯಾಗಿತ್ತು.

ನ್ಯಾಯಾಲಯಗಳು ಸಾಮಾನ್ಯವಾಗಿ ಶನಿವಾರದಂದು ಇಂತಹ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳುತ್ತವೆ. ಕೊರೊನಾ ಬಂದ ನಂತರ ಆನ್‌ಲೈನ್ ಮೂಲಕ ನಡೆಯುವಂತಹ ವಿಚಾರಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಾಗಿರುವುದರಿಂದ ನಾನು ಬೆಂಗಳೂರಿನಿಂದ ಮೈಸೂರಿಗೆ ಬರ ಬರುತ್ತಲ್ಲೇ ಆನ್‌ಲೈನ್‌ನಲ್ಲಿ ಕೋರ್ಟ್ ಕಲಾಪದಲ್ಲಿ ಭಾಗವಹಿಸಿದ್ದೆ. ಜನವರಿ 28ಕ್ಕೆ ದಾಖಲೆಗಳನ್ನು ಸಲ್ಲಿಸಲು ಅವಕಾಶ ನೀಡಿದೆ. ಈವರೆಗೂ ಮೂರು ಸುತ್ತಿನಲ್ಲಿ ವಾದ ಮಂಡನೆ ಆಗಿದೆ. ಈಗ ಮತ್ತೊಮ್ಮೆ ಕೇರಳ ಸರ್ಕಾರದ ನಿರ್ಧಾರ ಪ್ರಶ್ನಿಸಲಾಗಿದೆ. ಭಾರತದಲ್ಲಿ ಸಂಪ್ರದಾಯ ವಾದಿಗಳಿಂದಲೇ ಇತಿಹಾಸದ ಮೌಲ್ಯ ರಕ್ಷಣೆಯಾಗುತ್ತಿದೆ. ನಾನು ಅವರಲ್ಲೊಬ್ಬ ಎನ್ನುವುದಕ್ಕೆ ಹೆಮ್ಮೆಯಿದೆ ಎಂದು ತಿಳಿಸಿದರು.

ಹೇರಲ್ಪಟ್ಟ ಇತಿಹಾಸದಿಂದ ನಾವು ಹೊರಬರಲು ಕೇವಲ ರಾಜಕೀಯ ಅಧಿಕಾರ ಬದಲಾವಣೆ ಸಾಲದು. ಕಾಯ್ದೆಗಳಲ್ಲಿ ಬದಲಾವಣೆಯಾಗಬೇಕು. ಅಧಿಕಾರಕ್ಕೆ ಬಂದು 9 ವರ್ಷವಾದರೂ ಈಗಿನ ಕೇಂದ್ರ ಸರ್ಕಾರ ಪ್ರಮುಖವಾದದ್ದನ್ನು ಸಾಧಿಸುವಲ್ಲಿ ವಿಫಲವಾಗಿದೆ. ಕೇವಲ ಜನರ ಅಲ್ಪ ಆಶೋತ್ತರಗಳತ್ತ ಮಾತ್ರ ಗಮನಹರಿಸುತ್ತಿದೆ. ಗಟ್ಟಿಯಾದ ಕಾಯ್ದೆ ಮಾಡುವತ್ತ ಗಮನಹರಿಸುತ್ತಿಲ್ಲ. ಈ ರೀತಿಯೇ ಆಡಳಿತ ಮುಂದುವರಿಸಿದರೆ ಅದು ಕೇವಲ ನಾನೊಮ್ಮೆ ನೀನೊಮ್ಮೆ ಎಂಬ ಕಸರತ್ತಿನ ಪ್ರಜಾಪ್ರಭುತ್ವದ ಆಟವಾಗುತ್ತದೆ. ಜನರ ಮಹತ್ತರ ಆಶೋತ್ತರಕ್ಕೆ ನಿಮ್ಮ ಕೊಡುಗೆ ಇದಲ್ಲ ಎಂದು ಕೇಂದ್ರವನ್ನು ಟೀಕಿಸಿದರು. ಹಿಂದೂಗಳ ಉಳಿವು ಮತ್ತು ಜಾತಿ ವ್ಯವಸ್ಥೆ ಕುರಿತ ಸಭಿಕರ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಹಿಂದೂ ಎಂಬುದು ಗುರಿಯಾಗಿದ್ದರೆ, ಹಿಂದುತ್ವ ಅದನ್ನು ಸಾಧಿಸುವ ದಾರಿ. ಜಾತಿ ಎಂಬುದು ನಮ್ಮ ಸಂಪ್ರದಾಯ ವ್ಯವಸ್ಥೆಯಲ್ಲಿ ಅವಿಭಾಜ್ಯ ಅಂಗವಾಗಿದ್ದು, ಅದನ್ನು ನಿವಾರಿಸಬೇಕು ಎಂಬುದು ಮತ್ತದೇ ವಸಾಹತು ಇತಿಹಾಸದ ಕಲ್ಪನೆಯಾಗುತ್ತದೆ. ಜಾತಿ ಇರಲಿ ಆದರೆ ಜಾತೀಯತೆ ಬೇಡ ಎಂದು ವಿಚಾರ ಮಂಡಿಸಿದರು.

ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಪ್ರತಿಷ್ಠಾನದ ಪರವಾಗಿ ಸಾಯಿ ದೀಪಕ್ ಅವರನ್ನು ಸ್ವಾಗತಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ
18-12-2022



ಶರಣಂ ಅಯ್ಯಪ್ಪ

–ಈಗ ಸ್ವಾಮಿಯ ಪೂಜಾ ಪರ್ವ





ಭೂ ಖಂಡದ ಅತ್ಯುತ್ತಮ ಸಂದರ್ಶನ ಯೋಗ್ಯವಾದ ಐವತ್ತು ಭೂ ಪ್ರದೇಶಗಳಲ್ಲಿ ಕೇರಳವೂ ಒಂದು. ಇಂತಹ ಸ್ಥಳ ಬೇರೊಂದಿಲ್ಲ ಎಂದು ಅಮೆರಿಕದ ನ್ಯಾಷನಲ್ ಜಿಯಾಗ್ರಫಿಕ್ ಮಾಸಿಕ ಹೊಗಳಿದೆ. 'ದೇವರ ಸ್ವಂತ ನಾಡು' ಎಂದೇ ದೇಶದಲ್ಲಿ ಹೆಸರುವಾಸಿಯಾಗಿರುವ ಇಂಥ ಕೇರಳದಲ್ಲಿ ಹಲವಾರು ಸುಪ್ರಸಿದ್ಧ ದೇವಸ್ಥಾನಗಳಿವೆ. ಅವುಗಳಲ್ಲಿ **ಶಬರಿಮಲೆಯ ಶ್ರೀ ಅಯ್ಯಪ್ಪಸ್ವಾಮಿ ದೇಗುಲ**ವಂತೂ ಕೋಟ್ಯಾನುಕೋಟಿ ಭಕ್ತರನ್ನು ಕೈಬೀಸಿ ಕರೆವ ದೇಶದ ಮಹಾಯಾತ್ರಾ ಸ್ಥಳವಾಗಿದೆ. ಅಯ್ಯಪ್ಪನ ನೆಲೆಯ ಶಬರಿಗಿರಿಯ ವೈಭವ ವರ್ಣಿಸಲಸದಳ. ದಟ್ಟಾರಣ್ಯದ ನಡುವೆ ನೆಲೆ ನಿಂತಿರುವ ಈ ಶಬರಿಮಲೆ ಆಸ್ತಿಕರ ಪಾಲಿಗೆ ಪುಣ್ಯಕ್ಷೇತ್ರ, ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಹಸಿರಿನೈಸಿರಿಯನ್ನು ಹೊದ್ದು ಮಲಗಿರುವ ಶಬರಿಮಲೆ, ಸದಾ ಜುಳು ಜುಳು ಹರಿಯುವ ತೊರೆ ಮತ್ತು ಪವಿತ್ರ ಪಂಪಾ ನದಿಯ ಕಲರವ ಹಾಗೂ ಪ್ರಕೃತಿಯ ಹೊಂಬೆಳಕಿನಿಂದ ತನ್ನ ನೈಜ ಸೌಂದರ್ಯವನ್ನು ಚಿರವಾಗಿರಿಸಿಕೊಂಡಿದೆ. ಮಲಯಾಳಂ ಕ್ಯಾಲೆಂಡರ್ ಪ್ರಕಾರ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನ ಪವಿತ್ರ 'ಮಂಡಲಕಾಲ' ಸಮಯದಲ್ಲಿ ಲಕ್ಷಾಂತರ ಭಕ್ತರು ಸಾಗರೋಪಾದಿಯಲ್ಲಿ ಇಲ್ಲಿ ಸೇರುವುದನ್ನು ಕಾಣಬಹುದು. ಈ ಪುಣ್ಯ ಸಮಯದಲ್ಲಿ ಯಾವುದೇ ಜಾತಿ ಮತ್ತು ಧರ್ಮ, ವರ್ಗ ಮತ್ತು ಆರ್ಥಿಕ ಹಿನ್ನೆಲೆಯ ಭೇದ–ಭಾವವಿರದೆ ಭಾರತದ ವಿವಿಧ ಕಡೆಗಳಿಂದ ಮತ್ತು ವಿದೇಶಗಳಿಂದಲೂ ಭಕ್ತರ ದಂಡು ಶಬರಿಮಲೆಯತ್ತ ಧಾವಿಸಿ ಬರುತ್ತದೆ. ಯಾವುದೇ ಜಾತಿ, ಧರ್ಮಗಳ ಮಂದಿಯೂ ಶಬರಿಮಲೆ ಸ್ವಾಮಿ ಅಯ್ಯಪ್ಪನ ಭಕ್ತರಾಗಬಹುದಾದ ವೈಶಿಷ್ಟ್ಯತೆಯಿಂದಾಗಿ ಶಬರಿಮಲೆ ಹೆಚ್ಚು ಪ್ರಸಿದ್ಧ!

ಶ್ರೀರಾಮ ಭಕ್ತೆಯ ಗಿರಿಯಿದು: ಲಂಕೆಗೆ ಸೀತಾನ್ವೇಷಣೆಯಲ್ಲಿ ಹೊರಟಿದ್ದ ಶ್ರೀರಾಮಚಂದ್ರ ತನ್ನ ಭಕ್ತೆ ಶಬರಿಗೆ ದರ್ಶನ ನೀಡಿದ ಗಿರಿಯೇ 'ಶಬರಿಮಲೆ'. ಇದಕ್ಕೆ 'ಶಬರಿಮಲೆ' ಎಂಬ ಹೆಸರು ಬರಲು ರಾಮಾಯಣದಲ್ಲಿ ಬರುವ ಪೌರಾಣಿಕ ಪಾತ್ರವಾದ ಈ ಶಬರಿಯೇ ಮೂಲ ಕಾರಣ. ಪಟ್ಟನಂತಿಟ್ಟ ಜಿಲ್ಲೆಯ ಪೂರ್ವದಲ್ಲಿ ನೆಲೆ ನಿಂತಿರುವ ಶಬರಿಮಲೆ, ಕೇರಳದ ಸೌಂದರ್ಯವನ್ನು ಹೆಚ್ಚಿಸಿರುವ ಸಂರಕ್ಷಿತ ಪೆರಿಯಾರ್ ಹುಲಿಬೆಟ್ಟವನ್ನೂ ಒಳಗೊಂಡಿದೆ. ಶಬರಿಮಲೆಯಲ್ಲಿ ಪೂಜಿಸಲ್ಪಡುವ **ಅಧಿದೇವತೆ ಸ್ವಾಮಿ ಅಯ್ಯಪ್ಪ**. ಶಬರಿಮಲೆಗೆ ತೀರ್ಥ ಯಾತ್ರೆಗೆ ಬರಲು ಇಚ್ಛಿಸುವ ಭಕ್ತರು ಕಡ್ಡಾಯವಾಗಿ ಮಾಂಸಾಹಾರವನ್ನು ತ್ಯಜಿಸಬೇಕು ಮತ್ತು 41 ದಿನಗಳ ಕಠಿಣ ವ್ರತಾಚರಣೆ ಮಾಡಬೇಕು. ದಟ್ಟ ಮರಗಳು ಮತ್ತು ತೊರೆಗಳ ಮಧ್ಯೆ ಕಡಿದಾದ ಬೆಟ್ಟವನ್ನು ಹತ್ತುವ ಅನುಭವವನ್ನು ಇಲ್ಲಿ ಪ್ರತಿಯೊಬ್ಬರು ಅನುಭವಿಸಬಹುದು.

ದೇವರೆಡೆಗೆ ಸಾಗುವ ನಡಿಗೆ ಹಾದಿ: ನಡಿಗೆಯ ಮೂಲಕ ದೇವಸ್ಥಾನವನ್ನು ತಲುಪಲು ಇಚ್ಛಿಸುವವರಿಗೆ, ಶಬರಿಮಲೆ ದೇವಸ್ಥಾನದ ಹಾದಿ ಕಡಿದಾದ, ಅಷ್ಟೇ ಪ್ರಯಾಸಕರ ಹಾಗೂ ದೂರದ ಹಾದಿ. ಆದರೆ ಬಹಳ ದಣಿವಾದರೆ ತಣ್ಣನೆಯ ಗಾಳಿ ಹಾಗೂ ಗಿಡಮರಗಳ ನೆರಳು ನಿಮ್ಮನ್ನು ಪ್ರಯಾಣದುದ್ದಕ್ಕೂ ಸಂತೈಸುತ್ತದೆ. ಪ್ರತಿವರ್ಷ ಸರಿ ಸುಮಾರು 45–50 ದಶಲಕ್ಷಕ್ಕೂ ಅಧಿಕ ಭಕ್ತರು ಶಬರಿಮಲೆಗೆ ಭೇಟಿ ನೀಡುತ್ತಿದ್ದು, ಇದು ಪ್ರಪಂಚದಲ್ಲಿಯೇ ಅತಿ ಹೆಚ್ಚು ವಾರ್ಷಿಕ ಭಕ್ತರು ಭೇಟಿ ನೀಡುವ ತೀರ್ಥ ಕ್ಷೇತ್ರ ಎನಿಸಿಕೊಂಡಿದೆ. ಹಾಗೆಯೇ ನಿರ್ದಿಷ್ಟ ಋತುವಿನಲ್ಲಿ ಭೇಟಿ ನೀಡುವ ಅತೀ ಹೆಚ್ಚಿನ ಸಂಖ್ಯೆಯ ಯಾತ್ರಿಕರ ಪೈಕಿ ಪ್ರಪಂಚದಲ್ಲಿ ಶಬರಿಮಲೆ ಎರಡನೇ ಸ್ಥಾನವನ್ನು ಪಡೆದಿದೆ. ಮೆಕ್ಕಾದ ಹಜ್ ಯಾತ್ರೆ ಮೊದಲ ಸ್ಥಾನದಲ್ಲಿದೆ.

ಶಬರಿಮಲೆಯ ಪುರಾಣೈತಿಹ್ಯ: ಪುರಾಣ ಐತಿಹ್ಯಗಳ ಪ್ರಕಾರ, ಹಿಂದೂ ದೇವರಾದ ಅಯ್ಯಪ್ಪ, ಜಗದಲ್ಲಿ ಭಯ ಹುಟ್ಟಿಸಿದ್ದ ಭಯಂಕರ ರಕ್ಕಸಿ ಮಹಿಷಿಯನ್ನು ಸಂಹಾರ ಮಾಡಿದ ನಂತರ ಇದೇ ಸ್ಥಳದಲ್ಲಿ ಧ್ಯಾನಸ್ಥನಾಗುತ್ತಾನೆ. ವಾಸ್ತವವಾಗಿ ಶಬರಿಮಲೆ ದೇವಸ್ಥಾನವೆಂದರೆ ಏಕತೆ, ಸಮಾನತೆ, ಭಾವೈಕ್ಯತೆ ಮತ್ತು ಪ್ರಪಂಚದ ಎಲ್ಲಾ ಒಳ್ಳೆತನಗಳ ಸಂಕೇತ. ನಿಜಕ್ಕೂ ಇದು ಸೂಚಿಸುವುದೆಂದರೆ ದುಷ್ಟಶಕ್ತಿಗಳ ವಿರುದ್ಧ ಧರ್ಮಕ್ಕೆ ವಿಜಯ ಮತ್ತು ಪ್ರತಿಯೊಬ್ಬರಿಗೂ ನ್ಯಾಯ ದೊರೆಯುತ್ತದೆ ಎಂಬುದು. ಭಕ್ತರ ಜನಾಂಗ, ಸಂತತಿ, ವಂಶ ಮತ್ತು ಧರ್ಮಗಳನ್ನು ಲೆಕ್ಕಿಸದೆ ಎಲ್ಲಾ ಭಕ್ತರನ್ನೂ ಒಪ್ಪಿಕೊಳ್ಳುವ ಅಪರೂಪದ ದೇವಸ್ಥಾನಗಳಲ್ಲಿ ಶಬರಿಮಲೆಯೂ ಒಂದು. ಶಬರಿಮಲೆಯು ಸರ್ಕಾರಿ ಸ್ವಾಮ್ಯದ ತಿರುವನಂತಪುರ ದೇವಸ್ಥಾನ ಮಂಡಳಿಯ ಆಡಳಿತಕ್ಕೊಳಪಟ್ಟಿದೆ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಮಣಿಕಂಠನ ಮಹಿಮೆ: ಶಿವನು ಮೋಹಿನಿ ಅವತಾರದಲ್ಲಿದ್ದ ವಿಷ್ಣುವನ್ನು ಮೋಹಿಸಿದಾಗ ಜನಿಸಿದ ಮಗುವೇ ಅಯ್ಯಪ್ಪಸ್ವಾಮಿ. ಕಾಡಿನಲ್ಲಿ ಬಿಟ್ಟು ಹೋಗಿದ್ದ ಆ ಮಗು ಪಾಂಡ್ಯವಂಶದ ರಾಜನಿಗೆ ಸಿಗುತ್ತದೆ. ಕೊರಳಲ್ಲಿ ಮಣಿ ಇದ್ದುದರಿಂದ ಆ ಮಗುವಿಗೆ 'ಮಣಿಕಂಠ'ನೆಂದು ನಾಮಕರಣ ಮಾಡುತ್ತಾರೆ. ಚಾಮುಂಡೇಶ್ವರಿಯಿಂದ ಸಂಹಾರಕ್ಕೊಳಗಾದ ಮಹಿಷಾಸುರನ ತಂಗಿ 'ಮಹಿಷಿ' ಬ್ರಹ್ಮ ನೀಡಿದ ವರದಿಂದ 'ದೇವತೆಗಳನ್ನು ಕಾಡಲು' ಪ್ರಾರಂಭಿಸುತ್ತಾಳೆ. ದೇವತೆಗಳು ಬಂದು ಮಣಿಕಂಠನ ಮೊರೆ ಹೋದಾಗ ಮಣಿಕಂಠನು 'ಮಹಿಷಿ'ಯನ್ನು ಸಂಹರಿಸಿ ದೇವತೆಗಳನ್ನು ರಕ್ಷಿಸುತ್ತಾನೆ. ಮಹಿಷಿಯು ಸತ್ತನಂತರ ಅವಳ ದೇಹದಿಂದ ಶಾಪಗ್ರಸ್ಥವಾಗಿದ್ದ ಓರ್ವ ಗಂಧರ್ವ ಕನ್ಯೆಯು ಹೊರಬರುತ್ತಾಳೆ. ಆ ಗಂಧರ್ವ ಕನ್ಯೆ ಮಣಿಕಂಠನ ಶೌರ್ಯ ಮತ್ತು ರೂಪಕ್ಕೆ ಮರುಳಾಗಿ ತನ್ನನ್ನು ವರಿಸುವಂತೆ ಅವನಲ್ಲಿ ಬೇಡಿಕೊಳ್ಳುತ್ತಾಳೆ. ಆದರೆ ಮಣಿಕಂಠ ಒಪ್ಪದಿದ್ದಾಗ ಅಳೋಕೆ ಶುರು ಮಾಡುತ್ತಾಳೆ. ಅವಳ ಅಳುವಿನಿಂದ ಹುಟ್ಟಿದ ಆ ಕಣ್ಣೀರೆ ಮುಂದೆ 'ಅಳುದಾ' ನದಿಯಾಗಿ ಮಾರ್ಪಟ್ಟಿದೆ. ಇವಳ ಅಳುವಿಗೆ ಕರಗಿದ ಮಣಿಕಂಠ ಮುಂದೆ ತಾನು ಅಯ್ಯಪ್ಪಸ್ವಾಮಿಯಾದ ಮೇಲೆ ಯಾವ ವರ್ಷ ಕನ್ನಿಸ್ವಾಮಿ ಶಬರಿಮಲೆಗೆ ಬರುವುದಿಲ್ಲವೋ ಆ ವರ್ಷ ಅವಳನ್ನು ಮದುವೆಯಾಗುವುದಾಗಿ ವರಕೊಟ್ಟು ಅವಳನ್ನು ಸಮಾಧಾನಪಡಿಸುತ್ತಾನೆ

■ **ಪೂಜಾಸಮಯ:** ಉತ್ಸವ ಕಾಲದಲ್ಲಿ ಶಬರಿಮಲೆ ಅಯ್ಯಪ್ಪಸ್ವಾಮಿ ದೇವಾಲಯವು ಬೆಳಿಗ್ಗೆ 4.00 ಗಂಟೆಗೆ ತೆರೆದು ಮಧ್ಯಾಹ್ನ 1.00 ಗಂಟೆವರೆಗೆ, ಪುನಃ ಸಂಜೆ 4.00 ಗಂಟೆಗೆ ತೆರೆದು ರಾತ್ರಿ 11.00 ಗಂಟೆವರೆಗೆ ಪೂಜಾ ದರ್ಶನವಿರುತ್ತದೆ. ತಿಂಗಳ ಪೂಜೆಯ ವೇಳೆಯಲ್ಲಿ ಬೆಳಿಗ್ಗೆ 5.00 ಗಂಟೆಗೆ ಬಾಗಿಲು ತೆರೆದು ಮಧ್ಯಾಹ್ನ 1.00 ಗಂಟೆವರೆಗೆ ನೆರವೇರುತ್ತದೆ. ಪುನಃ ಸಂಜೆ 4.00 ಗಂಟೆಗೆ ತೆರೆದು ರಾತ್ರಿ 10.00 ಗಂಟೆಗೆ ಮುಚ್ಚುತ್ತಾರೆ.

■ **ನಿರ್ಮಾಲ್ಯಂ:** 4 ಗಂಟೆಗೆ ಉತ್ಸವ ಸಮಯದಲ್ಲಿ, 5 ಗಂಟೆಗೆ ಇತರ ಸಮಯಗಳಲ್ಲಿ. ತುಪ್ಪಾಭಿಷೇಕ: 4.15 ರಿಂದ 11.30 ಗಂಟೆಗೆ ಉತ್ಸವ ಸಮಯದಲ್ಲಿ, 5.15 ರಿಂದ 11 ಗಂಟೆಗೆ ಇತರ ಸಮಯಗಳಲ್ಲಿ. ಉಷಾಪೂಜೆ: ಬೆಳಿಗ್ಗೆ 7.30ಕ್ಕೆ. ಮಧ್ಯಾಹ್ನ ಪೂಜೆ: 1 ಗಂಟೆಗೆ. ದೀಪಾರಾಧನೆ: 5 ಗಂಟೆಗೆ. ರಾತ್ರಿ ಪೂಜೆ: 10.30 ಗಂಟೆಗೆ ಉತ್ಸವ ಸಮಯದಲ್ಲಿ, 9.30 ಗಂಟೆಗೆ ಇತರ ಸಮಯಗಳಲ್ಲಿ. ಹರಿವರಾಸನಂ: 10.50 ಗಂಟೆಗೆ ಉತ್ಸವ ಸಮಯದಲ್ಲಿ, 9.50 ಗಂಟೆಗೆ ಇತರ ಸಮಯಗಳಲ್ಲಿ.

■ **ಅರವಣಂ ಪ್ರಸಾದ:** ಇಲ್ಲಿ ಸಣ್ಣ ಕ್ಯಾನ್‌ನಲ್ಲಿ ಅರವಣಂ ಪ್ರಸಾದ ಹಾಗೂ ಅಭಿಷೇಕ ಮಾಡಿದ ತುಪ್ಪವನ್ನು ಭಕ್ತರಿಗೆ ಮಾರಾಟ ಮಾಡಲಾಗುತ್ತದೆ. ನವೆಂಬರ್‌ನಿಂದ ಜನವರಿವರೆಗಿನ ಸಮಯದಲ್ಲಿ ಅರವಣಂ, ತುಪ್ಪ ಪ್ರಸಾದಕ್ಕೆ ಬಹಳ ಬೇಡಿಕೆ ಇರುತ್ತದೆ. ಇದನ್ನು ಬೇಡಿಕೆಯ ಪ್ರಮಾಣದಲ್ಲಿ ಪೂರೈಸಲು ದೇವಸ್ಥಾನ ಮಂಡಳಿ ಬಹಳ ಶ್ರಮವಹಿಸುತ್ತದೆ. ಭಕ್ತಾದಿಗಳು ಸನ್ನಿಧಾನದ ದಕ್ಷಿಣ ಭಾಗದ ಕೆಳ ಅಂಗಳದ ಕೌಂಟರ್‌ಗಳಿಂದ ಉತ್ಸವ ಮತ್ತು ಪೂಜೆಗಾಗಿ ಇತರ ಸಮಯಗಳಲ್ಲಿ ಬಾಗಿಲು ತೆರೆದ ಸಂದರ್ಭಗಳಲ್ಲಿ ಯಾವುದೇ ಸಮಯದಲ್ಲಿ ತುಪ್ಪ ಮತ್ತು ಅರವಣಗಳನ್ನು ಪಡೆದುಕೊಳ್ಳಬಹುದು.



ಭಕ್ತರ ತೀರ್ಥಯಾತ್ರೆ


ನವೆಂಬರ್ ತಿಂಗಳ ಮಧ್ಯಭಾಗದಿಂದ ಶುರುವಾಗುವ ತೀರ್ಥಯಾತ್ರೆಯ ಸಮಯ ಜನವರಿ ತಿಂಗಳ ನಾಲ್ಕನೇ ವಾರಕ್ಕೆ ಅಂತ್ಯವಾಗುತ್ತದೆ. ಸ್ಥಳೀಯರ ವಾಸ ಕಡಿಮೆ ಇರುವ ಶಬರಿಮಲೆ ಸದಾ ತೀರ್ಥಯಾತ್ರಿಗಳಿಂದ ಗಿಜಿಗುಡುತ್ತದೆ. ಮಂಡಲಪೂಜೆ ಮತ್ತು ಮಕರವಿಳಕ್ಕು ಶಬರಿಮಲೆಯ ಪ್ರಮುಖ ಹಬ್ಬದ ಅವಧಿಗಳು. ಮುಸ್ಲಿಂ ಸಂತ ವಾವರ ಸ್ವಾಮಿಯ ಪುಣ್ಯ ಸ್ಥಳವೂ ಇಲ್ಲಿದ್ದು (ಅಲ್ಲಿಯೂ) ಪೂಜೆ ಸಲ್ಲಿಸಲಾಗುತ್ತಿದ್ದು ಈ ಕ್ಷೇತ್ರವು ಧಾರ್ಮಿಕ ಸಹಿಷ್ಣುತೆ ಮತ್ತು ಏಕತೆಗೆ ಸೂಕ್ತವಾದ ಇಂದ್ರಿಯ ಗೋಚರವಾದ ಪ್ರತ್ಯಕ್ಷ ನಿದರ್ಶನವಾಗಿದೆ. ಆಧ್ಯಾತ್ಮಿಕ ಮತ್ತು ಸೌಂದರ್ಯಯುತ ಮೌಲ್ಯವನ್ನು ಹೊಂದಿದ ಶಬರಿಮಲೆಯ ಭೇಟಿ ಅನುಭವದ ಕಣಜ. ಸಾವಿರಾರು ತೀರ್ಥ ಯಾತ್ರಿಕರು ವರ್ಷದಲ್ಲಿ ಒಮ್ಮೆಯಾದರೂ ತಮ್ಮ ಭಕ್ತಿಯನ್ನು ಸಂತೃಪ್ತಿಗೊಳಿಸಲು ಈ ಆಧ್ಯಾತ್ಮ ಕೇಂದ್ರಕ್ಕೆ ಭೇಟಿ ನೀಡುತ್ತಾರೆ. ಹುಲುಸಾಗಿ ಬೆಳೆದ ಕಾಡು ಮತ್ತು ಹರಿಯುವ ತೊರೆಯ ಬುಗ್ಗೆಗಳನ್ನು ದಾಟಿ ಬೆಟ್ಟವೇರುತ್ತ ಅಯ್ಯಪ್ಪಸ್ವಾಮಿಯ ದೇವಸ್ಥಾನಕ್ಕೆ ಸುತ್ತಾಡುವುದು ಒಂದು ಸಾಹಸವೇ ಸರಿ. ದೇವಸ್ಥಾನದ ತುದಿಯನ್ನೇರಲು ಸರಿಸುಮಾರು 3 ಕಿ.ಮೀ.ಗಳ ಚಾರಣದ ಅಗತ್ಯವಿದೆ. ಆದರೆ ಮಾಡಿದ ಚಾರಣ ಸಾರ್ಥಕವೆನಿಸುತ್ತದೆ. ಏರಿಳಿಯುವ ಪರ್ವತ ಶ್ರೇಣಿಗಳು ಮತ್ತು ಆಯಾ ಕಾಲದ ಹೂವು, ಮರಗಿಡ, ಪಶು ಪಕ್ಷಿಗಳನ್ನು ನೋಡುತ್ತ ಸಾಗುವ ಚಾರಣ ಪ್ರಕೃತಿ ಪ್ರಿಯರಿಗಂತೂ ತೃಪ್ತಿ ನೀಡುತ್ತವೆ. ಮುಖ್ಯ ನಗರಗಳಿಂದ ರಸ್ತೆ ಮತ್ತು ರೈಲು ಮಾರ್ಗವಾಗಿ ಪಂಪಾ ನಗರವನ್ನು ತಲುಪಿದರೆ, ಶಬರಿಮಲೆಯನ್ನು ನೋಡಬಹುದು. ಶಬರಿಮಲೆಗೆ ಭೇಟಿ ನೀಡುವವರಿಗೆ ಎಲ್ಲ ಕಾಲದಲ್ಲೂ ಪ್ರವಾಸಿ ಪ್ಯಾಕೇಜ್‌ಗಳು ಮತ್ತು ತಕ್ಕುದಾದ ಹೋಟೆಲುಗಳು ಇಲ್ಲಿ ಲಭ್ಯವಿದೆ.

ಶಬರಿಮಲೆ ಎಂಬುದು ಅತ್ಯಂತ ಮನೋಹರವಾದ, ಮನಮೋಹಕವಾದ ತಾಣ. ಅದು ಇತರ ಎಲ್ಲ ಯಾತ್ರಾಸ್ಥಳಗಳಿಗಿಂತ ಅತಿಶಯವಾಗಿ ಕಂಗೊಳಿಸುತ್ತಿದೆ. ಶಬರಿಮಲೆಯು ಭೌಗೋಳಿಕವಾಗಿಯೂ, ಪ್ರಾಕೃತಿಕವಾಗಿಯೂ, ಧರ್ಮಾಚರಣೆ ಪರವಾಗಿಯೂ ಯಾವುದೇ ದೃಷ್ಟಿಕೋನಗಳಿಂದ ನೋಡಿದರೂ ಇತರ ಯಾತ್ರಾ ಸ್ಥಳಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಶಬರಿಮಲೆ ಅಯ್ಯಪ್ಪಸ್ವಾಮಿ ದೇವಾಲಯವು ಪ್ರತಿವರ್ಷ ಸುದೀರ್ಘ ಎರಡೂವರೆ ತಿಂಗಳ ಕಾಲ ಭಕ್ತ ಸಮೂಹವು ತುಂಬಿ ನಿಂತಿರುವ ಯಾತ್ರಾಸ್ಥಳವಾಗಿದೆ. ಕೋಟಿಗಟ್ಟಲೆ ಅಯ್ಯಪ್ಪ ಭಕ್ತರು ನಲವತ್ತೊಂದು ದಿವಸದ ವ್ರತಾಚರಣೆಯ ತರುವಾಯ ಶಬರಿಮಲೆಗೆ ಹೋಗಿ ಪುಣ್ಯ ನದಿ ಪಂಪದಲ್ಲಿ ಮಿಂದು ಮಲೆಯ ನೆತ್ತಿಯಲ್ಲಿ ನೆಲೆಸಿರುವ ಅಯ್ಯಪ್ಪ ಮಂದಿರ ತಲುಪಿ ಸ್ವಾಮಿಯ ದರ್ಶನ ಪಡೆದು ತಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳುತ್ತಾರೆ.

ಮಕರ ಜ್ಯೋತಿ ದರ್ಶನ

ಶಬರಿಮಲೆಯ ಎರಡು ತಿಂಗಳ ಪವಿತ್ರ ವ್ರತಾಚರಣೆಯ ಕೊನೆಯ ದಿನವಾದ ಮಕರ ಸಂಕ್ರಮಣದಂದು '**ಮಕರ ಜ್ಯೋತಿ**'ಯ ದರ್ಶನವಾಗುತ್ತದೆ. ಈ ಪವಿತ್ರ ದರ್ಶನಕ್ಕಾಗಿ ದೇಶದ ನಾನಾ ಮೂಲೆಗಳಿಂದ ಲಕ್ಷಾಂತರ ಭಕ್ತರು ಶಬರಿಮಲೆಗೆ ಆಗಮಿಸುತ್ತಾರೆ. ಶಬರಿಮಲೆಗೆ ವಿರುದ್ಧ ದಿಕ್ಕಿನಲ್ಲಿರುವ ಪೊನ್ನಂಬಲಮೇಡು ಗಿರಿಯಲ್ಲಿ ಮಕರ ಜ್ಯೋತಿ ಕಾಣಿಸಿಕೊಳ್ಳುತ್ತದೆ. ಪ್ರತಿವರ್ಷ ಜನವರಿ 14ರ ಸಂಕ್ರಾಂತಿ ಹಬ್ಬದಂದು ಅಯ್ಯಪ್ಪ ಸ್ವಾಮಿಗೆ ಸಂಜೆ 7 ಗಂಟೆಗೆ ನಡೆಯುವ ಮಹಾಮಂಗಳಾರತಿ ಬಳಿಕ ಮಕರ ಜ್ಯೋತಿಯ ದರ್ಶನವಾಗುತ್ತದೆ. ಮಕರಜ್ಯೋತಿಯು ಮೂರು ಬಾರಿ ದೇದೀಪ್ಯಮಾನವಾಗಿ ಮಿಣುಗಿ ಅದೃಶ್ಯವಾಗುತ್ತದೆ. ಆ ದಿನ ದೇವತೆಗಳು ಅಯ್ಯಪ್ಪಸ್ವಾಮಿಗೆ ಆ ಗಿರಿಯಲ್ಲಿಯೇ ಪೂಜೆ ಮಾಡುವುದರಿಂದ ಆ ಬೆಳಕು ಕಾಣಿಸುತ್ತದೆ ಎಂದು ಹೇಳಲಾಗುತ್ತದೆ. ಸ್ವತಃ ಅಯ್ಯಪ್ಪನೇ ಅಲ್ಲಿಗೆ ಬಂದು ಬೆಳಕಿನ ರೂಪದಲ್ಲಿ ಭಕ್ತರಿಗೆ ದರ್ಶನ ನೀಡುತ್ತಾನೆಂದೂ ಭಕ್ತರ ನಂಬಿಕೆಯಾಗಿದೆ. ಇಂಥ ಮಹಾ ಮಕರಜ್ಯೋತಿ ದರ್ಶನವಾಗುತ್ತಿದ್ದಂತೆ ಲಕ್ಷಾಂತರ ಭಕ್ತರು ಅಯ್ಯಪ್ಪಸ್ವಾಮಿಯ ಮಂತ್ರಗಳನ್ನು ಪಠಿಸುತ್ತಾ ಜ್ಯೋತಿಯನ್ನು ದರ್ಶಿಸಿಕೊಂಡು ಪಾವನರಾಗುತ್ತಾರೆ.

ಪ್ರತಿವರ್ಷ ಕಾಣಿಸುವ ಮಕರಜ್ಯೋತಿ ಮಾನವನ ಸೃಷ್ಟಿಯೇ ಅಥವಾ ದೈವಕ್ರಿಯೆಯೇ ಎಂಬ ಜಿಜ್ಞಾಸೆ ಇದುವರೆಗೂ ಬಗೆಹರಿದಿಲ್ಲ. ಈ ಎಲ್ಲಾ ವಾದವಿವಾದಗಳಿಗೆ ಅಯ್ಯಪ್ಪಸ್ವಾಮಿ ಭಕ್ತರು ಮಾತ್ರ ಕಿವಿಗೊಡದೆ ತಮ್ಮ ಭಕ್ತಪಥದಲ್ಲಿ ನಡೆಯುತ್ತಿದ್ದಾರೆ. ಅಯ್ಯಪ್ಪಸ್ವಾಮಿಯ ಪವಿತ್ರ ಆಭರಣಗಳನ್ನು 'ಗರುಡ' ತೆಗೆದುಕೊಂಡು ಹೋಗುವುದೇ ಮಕರಜ್ಯೋತಿ ಎಂದು ನಂಬಿದ್ದಾರೆ. ಅವರ ಬಲವಾದ ನಂಬಿಕೆಗಳನ್ನು ಮುರಿಯುವ ಕೆಲಸಕ್ಕೆ ಯಾರು ಕೈ ಹಾಕಿದರೂ ಪ್ರಯೋಜನ ಮಾತ್ರ ಶೂನ್ಯ.



ವಾರಭವಿಷ್ಯ

18.12.2022 ರಿಂದ 24.12.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಧನುಸ್ಸು, ಚಂದ್ರ–ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಕುಜ–ವೃಷಭ, ಬುಧ–ಧನುಸ್ಸು, ಗುರು–ಮೀನ, ಶುಕ್ರ–ಧನುಸ್ಸು, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಈ ವಾರ ಹಣಕಾಸಿನ ಸ್ಥಿತಿ ಏರಿಳಿತಗಳಿಂದ ಕೂಡಿರುತ್ತದೆ. ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಹತ್ತಿರದ ಸಂಬಂಧಿಗಳ ಸಹಕಾರ ದೊರಕುವುದು. ಹೊಸ ಹೂಡಿಕೆಗಳನ್ನು ತುಂಬಾ ಯೋಚಿಸಿ ಮಾಡಿ. ಸಪ್ತಮದಲ್ಲಿ ಕೇತುವಿದ್ದು, ನಿಮ್ಮ ಸಹಧರ್ಮಿಣಿ ನಿಮಗೆ ಮಾನಸಿಕ ಒತ್ತಡವನ್ನು ಉಂಟು ಮಾಡಬಹುದು. ದಶಮ ಶನಿದೇವನಿಂದ ನಿಮ್ಮ ನೈತಿಕ ಸ್ಥೈರ್ಯ ಕಡಿಮೆ ಆಗುವುದು. ಯಾರನ್ನೂ ಕಣ್ಣು ಮುಚ್ಚಿ ನಂಬಬೇಡಿ. ಶ್ರೀ ಲಕ್ಷ್ಮೀನರಸಿಂಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದಾರಂಭಕ್ಕೆ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಅಪೂರ್ಣವಾಗಿದ್ದ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲು ಗುರುಬಲವಿದೆ. ಮನೆ ಸಂಬಂಧವಾಗಿ ದೊಡ್ಡ ದೊಡ್ಡ ಖರ್ಚುಗಳು ಎದುರಾಗಬಹುದು. ನೀವು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಂಬಂಧ ಹೊಂದಿದ್ದರೆ ಯಶಸ್ಸು ನಿಮ್ಮನ್ನು ಅರಸಿ ಬರುವುದು. ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಪ್ರಸಿದ್ಧಿ ಪಡಿಸಿ ಮಿಂಚುವರು. ಅಜೀರ್ಣ ಕಾಡಿಸೀತು. ಶ್ರೀದೇವೀಸ್ತುತಿ. ಶುಭ ಸಂಖ್ಯೆ–6

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ನಿಮ್ಮ ಸೃಜನಶೀಲತೆಯನ್ನು ಸರಿ ರೀತಿಯಲ್ಲಿ ಬಳಸಿದರೆ, ಅದು ಪ್ರಯೋಜನಕಾರಿ ಹಾಗೂ ನಿಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗುತ್ತದೆ. ಹಳೆಯ ಗೆಳೆಯರೊಡನೆ ಬೆರೆಯುವುದರಿಂದ ನಿಮ್ಮ ಉತ್ಸಾಹ ಹೆಚ್ಚುವುದು. ಪಾಲುದಾರಿಕೆ ವ್ಯವಹಾರಗಳಲ್ಲಿ ತಪ್ಪು ಗ್ರಹಿಕೆಯಿಂದ ನಷ್ಟವಾಗುವ ಸಾಧ್ಯತೆ ಇದೆ. ಸರ್ಕಾರಿ ನೌಕರರು ತಪ್ಪು ಕಾರ್ಯ ಮಾಡಿ ತೊಂದರೆಗೆ ಸಿಲುಕುವರು. ಸಣ್ಣಪುಟ್ಟ ಶಸ್ತ್ರಕ್ರಿಯೆಗೆ ಒಳಪಡಬೇಕಾದೀತು. ಶ್ರೀರಾಮ ಮಂತ್ರ ಜಪಿಸಿ. ಶುಭ ಸಂಖ್ಯೆ–3.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
'ಕಬ್ಬಿಣ ಕಾದಾಗ ತಟ್ಟಿಕೊ' ಎಂಬಂತೆ ಗ್ರಹಾನುಕೂಲವಿದ್ದಾಗ ಹಣ ಗಳಿಕೆ, ಕೀರ್ತಿ ಗಳಿಕೆ ಎರಡನ್ನೂ ಸಾಧಿಸಿಕೊಳ್ಳಬಹುದು. ಲಾಭದಾಯಕ ವ್ಯವಹಾರಗಳನ್ನು ಅಪರಿಚಿತರ ಮುಂದೆ ಬಹಿರಂಗ ಮಾಡಬಾರದು. ನಿಮ್ಮ ಆಲೋಚನೆಗಳನ್ನು ಕುಟುಂಬ ಸದಸ್ಯರೊಂದಿಗೆ ಸಂವಹನ ಮಾಡಿಕೊಳ್ಳುವುದು ಉತ್ತಮ. ಕಲಾವಿದರಿಗೆ ಸಾಮಾಜಿಕ ಗೌರವ, ಪ್ರಶಸ್ತಿಗಳು ದೊರೆಯುವ ಸಾಧ್ಯತೆ ಇದೆ. ವಧು–ವರಾನ್ವೇಷಣೆ ಮುಂದುವರೆಯಲಿ. ಶ್ರೀದುರ್ಗಾ ಪರಮೇಶ್ವರೀ ಸ್ತುತಿ. ಶುಭ ಸಂಖ್ಯೆ–4.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)
ವಾರದಾರಂಭಕ್ಕೆ ಶುಭ ಸಮಾಚಾರಗಳು ಬರುವುದು. ಆರ್ಥಿಕ ಬಿಕ್ಕಟ್ಟುಗಳು ಸ್ವಲ್ಪ ಮಟ್ಟಿಗೆ ತಿಳಿಯಾಗಲಿದೆ. ಈ ವಾರದಲ್ಲಿ ಅನೇಕ ಉತ್ತಮ ಬದಲಾವಣೆಗಳನ್ನು ಕಾಣುವಿರಿ. ನಿಮ್ಮ ಮಿತ್ರರ ಕಡೆಯಿಂದಲೂ ಸಮಯೋಚಿತ ಸಲಹೆ ಸಹಕಾರಗಳು ದೊರೆಯುವುದು. ಸುವರ್ಣ, ರಜತ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭವಾಗುವುದು. ದೂರ ಪ್ರಯಾಣಗಳೂ ಸಂಭವಿಸುವುದು, ಎಚ್ಚರಿಕೆಯ ಡ್ರೈವಿಂಗ್ ನಿಮ್ಮದಾಗಿರಲಿ. ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ–8

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಬರೀ ಆಸೆ ಪಟ್ಟರೆ ಸಾಕೇ, ಆಸೆಗೆ ತಕ್ಕ ಪರಿಶ್ರಮವೂ ಬೇಕು. ನಾಲ್ಕನೇ ಮನೆಯಲ್ಲಿ ರವಿ, ಬುಧ, ಶುಕ್ರರ ಉಪಸ್ಥಿತಿ ಮಿಶ್ರಫಲದಾಯಕವಾಗಿದೆ. ನಿಮ್ಮ ಕೆಲಸದ ಸ್ಥಳದಲ್ಲಿ ಉತ್ತಮ ಖ್ಯಾತಿಯನ್ನು ಗಳಿಸುವಿರಿ. ಹಣಕಾಸು ಪರಿಸ್ಥಿತಿ ಉತ್ತಮವಾಗಿರುತ್ತದೆ. ನಿಮ್ಮ ಕುಟುಂಬದ ಅಗತ್ಯಗಳನ್ನು ಪೂರೈಸಲು ನಿಮಗೆ ಸಮಯವಿರುವುದಿಲ್ಲ. ಇದರಿಂದ ಮನೆಯ ವಾತಾವರಣ ಒತ್ತಡದಿಂದ ಕೂಡಿರುತ್ತದೆ. ದಿಢೀರ್ ಹಣ ಗಳಿಕೆಯ ಆಸೆಗೆ ರಾಹು ದೊಡ್ಡ ಹೊಡೆತ ನೀಡಲಿದ್ದಾನೆ. ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–6

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಜಾರಿ ಬೀಳುವುದು ಸ್ವಾಭಾವಿಕ, ಮತ್ತೆ ಜಾರಿ ಬೀಳದಿರುವುದೇ ವಿವೇಕ. ವಾರದ ಪೂರ್ವಾರ್ಧದಲ್ಲಿ ಲವಲವಿಕೆಯಿಂದ ವೈಯಕ್ತಿಕ ಹಾಗೂ ಕೌಟುಂಬಿಕ ಕಾರ್ಯಗಳಲ್ಲಿ ಭಾಗಿಯಾಗುವಿರಿ. ವಸ್ತ್ರಾಲಂಕಾರಗಳಿಗೆ ಮಹಿಳೆಯರಿಂದ ಹೆಚ್ಚು ಖರ್ಚು ಬರುವುದು. ಬಾಕಿ ಹಣ ವಸೂಲಾಗಬಹುದು. ವಾರದ ಉತ್ತರಾರ್ಧಕ್ಕೆ ಅಹಿತಕರ ಪ್ರಸಂಗಗಳು ಘಟಿಸಿ, ಮನೋಕ್ಷೋಭೆ, ಅನಿರೀಕ್ಷಿತ ಮೂಲಗಳಿಂದ ಭಯ– ಜೂಜು ತಂಟೆ ಬೇಡ. ಶ್ರೀದೇವೀ ಆರಾಧನೆ. ಶುಭ ಸಂಖ್ಯೆ–9.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)
ಸಪ್ತಾಹದ ಆರಂಭ ಆಶಾದಾಯಕವಾಗಿದೆ. ಅಂದುಕೊಂಡದ್ದು ನೆರವೇರುವುದು. ಯಾರೊಡನೆಯೂ ಅಸಮಾಧಾನದ ಮಾತು ಬೇಡ. ವಾಸ್ತವಾಂಶವನ್ನು ಅರಿತು ಮುಂದುವರೆಯಿರಿ. ಚಂದ್ರ ಬಲ ಚೆನ್ನಾಗಿದೆ. ಮಾತೃಶ್ರೀಯವರಿಂದ ಶುಭ ಪರಿಣಾಮಗಳು ಉಂಟಾದೀತು. ಗುರು ಬಲವೂ ಚೆನ್ನಾಗಿದ್ದು 'ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು' ಎಂಬಂತಾಗಿದೆ. ಬಂದ ಅವಕಾಶ ಕೈ ಜಾರದಂತೆ ನೋಡಿಕೊಳ್ಳಿ. ನಿಮ್ಮ ಆರೋಗ್ಯದ ಕಡೆ ಗಮನವಿಡಿ. ಶ್ರೀ ಗಣಪತಿ ಅರ್ಚನೆ. ಶುಭ ಸಂಖ್ಯೆ–2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ರಾಜಗ್ರಹನಾದ ರವಿ ನಿಮ್ಮ ರಾಶಿಗೆ ಪ್ರವೇಶವಾಗಿದ್ದು, ಧನುರ್ಮಾಸ ಪ್ರಾರಂಭವಾಗಿದೆ. ಈ ವಾರ ನೀವು ದಾನ, ಧರ್ಮ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿರಿ. ಗುರು ಹಿರಿಯರ ಭೇಟಿ ಹಾಗೂ ಮಂತ್ರೋಪದೇಶ ಪಡೆಯುವ ಸಾಧ್ಯತೆ ಇದೆ. ವಾಣಿಜ್ಯ ವ್ಯವಹಾರಗಳು ಸಾಂಗವಾಗಿ ನೆರವೇರುವುದು. ಧನ–ಧಾನ್ಯ ಲಾಭವೂ ಇದೆ. ನಿಮ್ಮ ವೃತ್ತಿ ಸಂಬಂಧವಾದ ವಿದ್ಯಾ ವಿಷಯಗಳ ಅರಿವು ಉಂಟಾಗುವುದು. ವಾದ–ವಿವಾದಗಳಿಂದ ದೂರವಿರಿ. ಶ್ರೀ ಗುರುಪ್ರಾರ್ಥನೆ. ಶುಭ ಸಂಖ್ಯೆ–2.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ನಿಮಗೆ ಈ ವಾರದಲ್ಲಿ ಶುಭಾಶುಭ ಫಲ ಸಮ್ಮಿಶ್ರವಾಗಿದೆ. ಸಂಸಾರದಲ್ಲಿ ಸಣ್ಣಪುಟ್ಟ ಕಿರಿಕಿರಿಗಳು ಇದ್ದದ್ದೇ. ಆದರೂ ಕೌಟುಂಬಿಕ ವಿಷಯಗಳನ್ನು ಸಮಾಧಾನ ಚಿತ್ತದಿಂದ ಪರಿಹಾರ ಕಂಡುಕೊಳ್ಳಿ. ವಾರದ ಉತ್ತರಾರ್ಧದಲ್ಲಿ ಸಂತಸದ ವಾತಾವರಣವನ್ನು ಕಾಣುವಿರಿ. ಚಂದ್ರನ ಶುಭ ಸಂಚಾರದಿಂದ ಧನ ಪ್ರಾಪ್ತಿ, ಆಪ್ತೇಷ್ಟರ ಮಿಲನ, ಸಾಮಾಜಿಕ ಸೇವೆಯಿಂದ ನೆರೆಹೊರೆಯವರ ಆದರಕ್ಕೆ ಪಾತ್ರರಾಗುವಿರಿ. ಶ್ರೀ ಅಶ್ವತ್ಥ ಪೂಜೆ. ಶುಭ ಸಂಖ್ಯೆ–5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಸ್ವಸಾಮರ್ಥ್ಯದಲ್ಲಿ ವಿಶ್ವಾಸವಿರುವ ನಿಮಗೆ ಆಪ್ತ ಬಂಧು ಜನರ ಸಮಯೋಚಿತ ಸಹಕಾರ ದೊರಕುವುದು. ಪ್ರಮುಖ ಜವಾಬ್ದಾರಿಗಳನ್ನು ಸ್ವೀಕರಿಸಲು ತಯಾರಾಗಿರಿ. ವಾಣಿಜ್ಯ ವಿಷಯಗಳಲ್ಲಿ ಹೇರಳ ಧನ ಲಾಭವಾಗುವುದು. ಐಷಾರಾಮಿ ವಸ್ತುಗಳು ಮನೆಗೆ ಬರುವುದು. ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ವಾರಾಂತ್ಯದ ವೇಳೆಗೆ ಆರೋಗ್ಯದಲ್ಲಿ ವ್ಯತ್ಯಯ ಕಾಣಬರುವುದು. ಬೇಜವಾಬ್ದಾರಿಯ ವಾಹನ ಚಾಲನೆ ಮುಳುವಾಗಲಿದೆ. ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ–4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದ ಆದಿಗೆ ನಿಮ್ಮ ವೈಯಕ್ತಿಕ ಚಟುವಟಿಕೆಗಳು ಹೊಸ ಮಜಲನ್ನು ತಲುಪಲು ಚಂದ್ರ ಶುಭ ದೃಷ್ಟಿ ಇದೆ. ಸಾಗರೋತ್ಪನ್ನ ವಸ್ತು ಕ್ರಮ–ವಿಕ್ರಯಗಳಿಂದ ಉತ್ತಮ ಧನ ಲಾಭವಾಗಲಿದೆ. ಸ್ನೇಹಿತರ ಸಮಾಗಮ ಕಿರು ಪಾರ್ಟಿಗಳು ನಡೆಯುವುದು. ರಾಹು–ಕೇತುಗಳು ಅಶುಭರಿದ್ದು ನಿಮ್ಮ ಯೋಚನಾ ಶಕ್ತಿ ಕುಂಠಿತವಾಗುವುದರ ಜೊತೆಗೆ ಅಸಾಧುವಾದ ಕೆಲಸಗಳಿಗೆ ಪ್ರೇರಣೆಯಾಗಿ ಸಂಕಷ್ಟಕ್ಕೆ ಸಿಲುಕುವಿರಿ. ಶ್ರೀ ಶಿರಡಿ ಸಾಯಿ ದರ್ಶನ. ಶುಭ ಸಂಖ್ಯೆ–1.

ರಸ್ತೆ ಅಪಘಾತ: ಗಾಯಾಳುವಿಗೆ 53 ಲಕ್ಷ ರೂ. ಪರಿಹಾರ ನೀಡಲು ಇನ್ಸೂರೆನ್ಸ್ ಕಂಪೆನಿಗೆ ವಿರಾಜಪೇಟೆ ಸಿವಿಲ್ ಕೋರ್ಟ್ ಆದೇಶ

ವಿರಾಜಪೇಟೆ, ಡಿ.17– ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ವ್ಯಕ್ತಿಗೆ 53 ಲಕ್ಷ ರೂ. ಪರಿಹಾರ ನೀಡುವಂತೆ ವಿರಾಜಪೇಟೆ ಸಿವಿಲ್ ಕೋರ್ಟ್ ಇನ್ಸೂರೆನ್ಸ್ ಕಂಪೆನಿಗೆ ಆದೇಶಿಸಿದೆ.

ಪಟ್ಟಣದ ಮೀನುಪೇಟೆಯ ನಿವಾಸಿ ಆರ್.ಎಂ. ಫೈರೋಜ್ ಅವರು 2016ರ ಜೂ.22 ರಂದು ತಮ್ಮ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಆಲ್ಟೋ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ, ಫೈರೋಜ್ ಅವರು ತೀವ್ರವಾಗಿ ಗಾಯಗೊಂಡರು. ಈ ಸಂಬಂಧ ವಿರಾಜಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ವಿಚಾರಣೆ ನಡೆಸಿದ ಅಂದಿನ ಸಬ್‌ಇನ್ಸ್‌ಪೆಕ್ಟರ್ ಕೋರ್ಟಿಗೆ ದೋಷಾರೋಪಣ ಪಟ್ಟಿಸಲ್ಲಿಸಿದ್ದರು. ಈ ಮಧ್ಯೆ ಗಾಯಾಳು ಫೈರೋಜ್ ಅವರು ಅಪಘಾತದ ಪರಿಹಾರ ಕೋರಿ ಇನ್ಸೂರೆನ್ಸ್ ಕಂಪೆನಿ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು.

ಸಿವಿಲ್ ನ್ಯಾಯಾಧೀಶರಾದ ಎಂ.ಜೆ. ಲೋಕೇಶ್ ಅವರು, ವಿಚಾರಣೆ ನಡೆಸಿ ಗಾಯಾಳು ಫೈರೋಜ್ ಅವರಿಗೆ 53 ಲಕ್ಷ ರೂ.ಗಳನ್ನು ಶೇ.9 ರ ಬಡ್ಡಿ ದರದಂತೆ ಪಾವತಿಸುವಂತೆ ಇನ್ಸೂರೆನ್ಸ್ ಕಂಪೆನಿಗೆ ಸೂಚಿಸಿ ಆದೇಶ ಹೊರಡಿಸಿದ್ದಾರೆ. ಗಾಯಾಳು ಪರ ವಕೀಲರಾದ ಡಿ.ಸಿ. ಧ್ರುವ ಅವರು ವಾದ ಮಂಡಿಸಿದ್ದರು.

ಮ್ಯಾಕ್ಸಿಕ್ಯಾಬ್–ಕಾರು ಡಿಕ್ಕಿ: 8 ಮಂದಿಗೆ ಗಾಯ



ಕುಶಾಲನಗರ, ಡಿ.17– ಸಮೀಪದ ಗುಡ್ಡೆಹೊಸೂರು–ಬಸವನಹಳ್ಳಿ ನಡುವೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ಮಧ್ಯರಾತ್ರಿ ಮ್ಯಾಕ್ಸಿಕ್ಯಾಬ್ ಮತ್ತು ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಮ್ಯಾಕ್ಸಿಕ್ಯಾಬ್‌ನಲ್ಲಿದ್ದ 8 ಮಂದಿ ರೈತರು ಗಾಯಗೊಂಡಿದ್ದಾರೆ.

ಮಡಿಕೇರಿ ಕಡೆಯಿಂದ ಕುಶಾಲನಗರದತ್ತ ಆಗಮಿಸುತ್ತಿದ್ದ ಕ್ಯಾಬ್‌ಗೆ ಕುಶಾಲನಗರದಿಂದ ಸುಂಟಿಕೊಪ್ಪದ ಕಡೆಗೆ ಹೋಗುತ್ತಿದ್ದ ಬಲೆನೊ ಕಾರು ನಿಯಂತ್ರಣ ತಪ್ಪಿ ಕ್ಯಾಬ್‌ಗೆ ಡಿಕ್ಕಿ ಹೊಡೆಯಿತು. ಇದರ ಪರಿಣಾಮವಾಗಿ ಕ್ಯಾಬ್‌ನಲ್ಲಿದ್ದ ಒಟ್ಟು 12 ಮಂದಿ ಪೈಕಿ 8 ಮಂದಿಗೆ ಸಣ್ಣ ಪ್ರಮಾಣದಲ್ಲಿ ಗಾಯಗಳಾಗಿದ್ದು, ಕುಶಾಲನಗರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ. ರೈತರು ಕೇರಳ ರಾಜ್ಯದ ಕಾಸರಗೋಡಿಗೆ ಕೃಷಿ ಮೇಳದ ಸಮಾರಂಭಕ್ಕೆ ತೆರಳಿ ಹಿಂತಿರುಗುತ್ತಿದ್ದರು ಎನ್ನಲಾಗಿದೆ.

ಮ್ಯಾಕ್ಸಿಕ್ಯಾಬ್‌ನ ಚಾಲಕ ಸೋಮವಾರಪೇಟೆಯ ಆರ್. ರಾಮಚಂದ್ರ ವಿರುದ್ಧ ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋವಿ ಹಿಡಿದು ಕೊಡವರ ಮೆರವಣಿಗೆ

ಕೊಡವ ಮಹಿಳೆಯರಿಗೆ ಸರ್ಕಾರದಿಂದ ಬಂದೂಕು ತರಬೇತಿ ನೀಡಬೇಕು

ಕೊಡವ ನ್ಯಾಷನಲ್ ಕೌನ್ಸಿಲ್‌ನಿಂದ 13ನೇ ವರ್ಷದ ಕೋವಿ ನಮ್ಮೆ ಆಚರಣೆ



ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ 13ನೇ ವರ್ಷದ ತೋಕ್ ನಮ್ಮೆ ಅಂಗವಾಗಿ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಕೊಡವ ವಿಭೂಷಣ' ಪ್ರಶಸ್ತಿಯನ್ನು ನಂದಿನೆರವಂಡ ನಾಚಪ್ಪ ಪ್ರದಾನ ಮಾಡಿದರು. ಪ್ರೊ.ಮುಲ್ಲೇಂಗಡ ರೇವತಿ ಪೂವಯ್ಯ(ಸಂಶೋಧನೆ), ಅನಿಲ್ ಎಚ್.ಟಿ.(ಮಾಧ್ಯಮ ಮತ್ತು ಪ್ರವಾಸೋದ್ಯಮ), ಹಂಚೆಟ್ಟೀರ ಮನುಮುದ್ದಪ್ಪ ಅವರ ಮುಕ್ಕೋಡ್ಲು ವ್ಯಾಲಿಡ್ಯೂ ಕಲ್ಚರಲ್ ಅಸೋಸಿಯೇಷನ್ ಸಂಸ್ಥೆ(ಸಾಂಸ್ಕೃತಿಕ ಕ್ಷೇತ್ರ), ದಕ್ಷಿಣ ಗಂಗೆ ಸಾಂಸ್ಕೃತಿಕ ತಂಡ(ಸಾಂಸ್ಕೃತಿಕ), ಅಜ್ಜಮಾಡ ಚಂಗಪ್ಪ (ಸಮಾಜಸೇವೆ), ಅಜ್ಜಮಾಡ ಸಾವಿತ್ರಿ(ಕೊಡವ ಜಾನಪದ) ಅವರುಗಳಿಗೆ ಕೊಡವ ವಿಭೂಷಣ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಮಡಿಕೇರಿ,ಡಿ.17– ಕೊಡವ ಮಹಿಳೆಯರಿಗೆ ಭದ್ರತೆ ಹಿನ್ನೆಲೆಯಲ್ಲಿ ಬಂದೂಕು ತರಬೇತಿಯನ್ನು ಕಡ್ಡಾಯವಾಗಿ ಸರ್ಕಾರದ ವತಿಯಿಂದ ನೀಡಬೇಕು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ನಂದಿನೆರವಂಡ ನಾಚಪ್ಪ ಆಗ್ರಹಿಸಿದ್ದಾರೆ.

ಪೊನ್ನಂಪೇಟೆ ತಾಲೂಕಿನ ಕುರ್ಚಿ ಗ್ರಾಮದ ಅಜ್ಜಮಾಡ ಕುಟುಂಬದ ಐನ್‌ಮನೆಯಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಸಿಎನ್‌ಸಿ ಅಧ್ಯಕ್ಷ ನಂದಿನೆರವಂಡ ನಾಚಪ್ಪ ಅಧ್ಯಕ್ಷತೆಯಲ್ಲಿ 13ನೇ ವರ್ಷದ ಕೋವಿ ನಮ್ಮೆ ಆಯೋಜಿಸಲಾಗಿತ್ತು. ಕೋವಿಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ, ಗಾಳಿಯಲ್ಲಿ ಗುಂಡು ಹಾರಿಸಿ, ಅಜ್ಜಮಾಡ ಐನ್‌ಮನೆ ವ್ಯಾಪ್ತಿಯಲ್ಲಿ ಕೋವಿ ಹಿಡಿದು ಕೊಡವರು, ಕೊಡವತಿಯರು, ಮೆರವಣಿಗೆ ನಡೆಸಿ ಕೋವಿಯ ಮಹತ್ವ ಸಾರಿದರು.

ಸಭಾ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ನಂದಿನೆರವಂಡ ನಾಚಪ್ಪ, ಕೊಡಗಿನಲ್ಲಿ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚುತ್ತಿದ್ದು, ಕೊಡವರ ಭದ್ರತೆ ದೃಷ್ಟಿಯಿಂದ ಕೊಡವತಿಯರಿಗೂ ಬಂದೂಕು ಚಲಾಯಿಸುವ ನಿಟ್ಟಿನಲ್ಲಿ ಸೂಕ್ತ ತರಬೇತಿಯನ್ನು ಸರ್ಕಾರದ ವತಿಯಿಂದಲೇ ನೀಡಬೇಕು. ಈ ಮೂಲಕ ದೇಶದ್ರೋಹಿ ಕೃತ್ಯದಲ್ಲಿ ತೊಡಗಿರುವವರು, ವನ್ಯಜೀವಿಗಳಿಂದ ಪ್ರಾಣ ಸಂರಕ್ಷಣೆ ನಿಟ್ಟಿನಲ್ಲಿ ಕೊಡವ ಮಹಿಳೆಯರಿಗೂ ಸೂಕ್ತ ತರಬೇತಿ ನೀಡಿದಂತಾಗುತ್ತದೆ ಎಂದು ಸರಕಾರವನ್ನು ಒತ್ತಾಯಿಸಿದರು.

ಕೊಡವರು ಕೋವಿ ಹಕ್ಕು ಹೊಂದಿದ್ದರೂ ಈವರೆಗೂ ಅದನ್ನು ಅಶಾಂತಿ ಕಲ್ಪಿಸುವ ಅಥವಾ ಬೇರೆ ಯಾವುದೇ ರೀತಿಯಲ್ಲಿ ದುರುಪಯೋಗಪಡಿಸಿಕೊಂಡಿಲ್ಲ. ಕೋವಿ ದೈವಿ ಸಮಾನವಾಗಿದ್ದು ಹೀಗಾಗಿಯೇ ಸಿಎನ್‌ಸಿಯಿಂದ ಕೋವಿ ನಮ್ಮೆಯನ್ನು 13 ವರ್ಷಗಳ ಹಿಂದೆ ಪ್ರಾರಂಭಿಸಿ ಕೋವಿಯ ಮಹತ್ವವನ್ನು ಜಗತ್ತಿಗೆ ತಿಳಿಸಲಾಗುತ್ತಿದೆ ಎಂದೂ ನಾಚಪ್ಪ ಹೇಳಿದರು.

ಹಕ್ಕುಗಳನ್ನು ಮರಳಿ ಪಡೆಯೋಣ: ಮೊಬೈಲ್ ಗುಂಗಿನಲ್ಲಿ ಮುಳುಗಿರುವ ಯುವ ಜನಾಂಗಕ್ಕೆ ಕೊಡವರ ಕೋವಿ ಹಕ್ಕು ಸೇರಿದಂತೆ ಕೊಡವರ ಹಕ್ಕುಗಳನ್ನು ತಿಳಿಸಿ ಹೇಳುವ ಅಗತ್ಯವಿದೆ. ಭವಿಷ್ಯದ ಪೀಳಿಗೆಗಾಗಿ ಕಳೆದುಕೊಂಡಿರುವ ಹಕ್ಕುಗಳನ್ನು ಕೊಡವರು ಈಗಿನಿಂದಲೇ ಮರಳಿ ಪಡೆಯಬೇಕಾದ ಅನಿವಾರ್ಯತೆ ಇದೆ ಎಂದೂ ನಂದಿನೆರವಂಡ ನಾಚಪ್ಪ ಹೇಳಿದರು. ತಮ್ಮ ಜನ್ಮಸಿದ್ಧ ಹಕ್ಕುಗಳನ್ನು ಗಳಿಸಿಕೊಳ್ಳುವ ಮೂಲಕ ಕೊಡವರು ಸ್ವಾಭಿಮಾನಿ ಜೀವನವನ್ನು ಮತ್ತೆ ಕಟ್ಟಿಕೊಳ್ಳಬೇಕಾಗಿದೆ ಎಂದು ಹೇಳಿದ ನಾಚಪ್ಪ ಯುದ್ಧ ಮತ್ತು ಬೇಟೆ ಕೊಡವರ ಕುಲಕಸುಬಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ಹಕ್ಕುಗಳನ್ನು ಸರ್ಕಾರ ಕೊಡವರ ಬೇಡಿಕೆಗಳನ್ನು ಪರಿಗಣಿಸಿ ಮರಳಿಸಲೇಬೇಕು ಎಂದು ಒತ್ತಾಯಿಸಿದರು.

ಕಾನೂನು ಹೋರಾಟ: ಕೊಡವರಿಗೆ ಸಿಗಬೇಕಾದ ಹಕ್ಕುಗಳನ್ನು ಮರಳಿ ಪಡೆಯಲು ಸಿಎನ್‌ಸಿ ಕಾನೂನಿನ ಮೂಲಕ ಹೋರಾಟಕ್ಕೆ ಮುಂದಾಗಲಿದೆ ಎಂದು ಹೇಳಿದರು. ಕೊಡವ ನ್ಯಾಷನಲ್ ಕೌನ್ಸಿಲ್‌ನ ಹಲವಾರು ವರ್ಷಗಳ ನಿರಂತರವಾದ ಪ್ರಾಮಾಣಿಕ ಶಾಂತಿಯುತ ಹೋರಾಟದ ಫಲವಾಗಿಯೇ ಹೆಸರಾಂತ ವಕೀಲ ಡಾ.ಸುಬ್ರಮಣಿಯನ್ ಸ್ವಾಮಿ ಮುಂದಾಳತ್ವದಲ್ಲಿ ಕೊಡವ ಸ್ವಾಯತ್ತ ನಾಡಿನ ಬೇಡಿಕೆ ಸರ್ವೋಚ್ಚ ನ್ಯಾಯಾಲಯದ ಹೊಸ್ತಿಲನ್ನು ತಲುಪಿದೆ. ಸದ್ಯದಲ್ಲಿಯೇ ಈ ಬಗ್ಗೆ ನ್ಯಾಯಾಂಗ ಕೂಡ ಗಮನ ಹರಿಸಿ ಕೊಡವರ ಆದ್ಯತೆಯ ಬೇಡಿಕೆಗೆ ಸ್ಪಂದಿಸುವ ನಿರೀಕ್ಷೆಯಿದೆ ಎಂದೂ ನಾಚಪ್ಪ ಆಶಾಭಾವನೆ ವ್ಯಕ್ತಪಡಿಸಿದರು.

ಪ್ರಮುಖ ಹಕ್ಕೊತ್ತಾಯಗಳು: ಕೊಡವ ಯುವತಿಯರ ಮದುವೆ ಸಂದರ್ಭ ಕಾಣಿಕೆ ಪೆಟ್ಟಿಗೆಯಲ್ಲಿ ಕಡ್ಡಾಯವಾಗಿ ಕೋವಿ ಮತ್ತು ಕೊಡವರ ಹಕ್ಕಾದ ಕೋವಿ ಪರವಾನಗಿ ವಿನಾಯಿತಿ ಪತ್ರವನ್ನು ಇಡುವಂತಾಗಬೇಕು ಎಂದೂ ನಾಚಪ್ಪ 13ನೇ ವರ್ಷದ ಕೋವಿ ನಮ್ಮೆಯ ಹಕ್ಕೊತ್ತಾಯ ಮಂಡಿಸಿದರು. ಕೋವಿ ಪರವಾನಗಿ ವಿನಾಯಿತಿ ಪತ್ರವನ್ನು ಕೊಡಗಿನ ಪ್ರತೀ ಐನ್‌ಮನೆ ವತಿಯಿಂದ ಕುಟುಂಬಸ್ಥರಿಗೆ ದೊರಕುವಂತೆ ಮಾಡಬೇಕು. ಜಿಲ್ಲಾಧಿಕಾರಿ ಕಚೇರಿಯಲ್ಲಿ ಏಕಗವಾಕ್ಷಿ ವ್ಯವಸ್ಥೆಯಡಿ ಕೋವಿ ಪರವಾನಗಿ ವಿನಾಯಿತಿ ಪತ್ರವನ್ನು ಹಕ್ಕುದಾರರಿಗೆ ವಿಳಂಬ ರಹಿತವಾಗಿ ನೀಡುವಂತಾಗಬೇಕು ಎಂಬುದೂ ಸೇರಿದಂತೆ ಹಲವು ಪ್ರಮುಖ ಹಕ್ಕೊತ್ತಾಯಗಳನ್ನು ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಆಯೋಜಿತ 13ನೇ ವರ್ಷದ ಕೋವಿ ನಮ್ಮೆಯಲ್ಲಿ ಕೈಗೊಳ್ಳಲಾಯಿತು.

ವೇದಿಕೆಯಲ್ಲಿ ಅಜ್ಜಮಾಡ ಕಟ್ಟಿಮಂದಯ್ಯ, ಅಜ್ಜಮಾಡ ವೇಣುಸುಬ್ಬಯ್ಯ, ಜಮ್ಮಡ ಮೋಹನ್, ಪುಲ್ಲೇರ ಸ್ವಾತಿ, ಪಟ್ಟಮಾಡ ಕುಶ ಉಪಸ್ಥಿತರಿದ್ದರು.

ಇದೇ ಸಂದರ್ಭ ಕುರ್ಚಿ ಗ್ರಾಮದ ದಕ್ಷಿಣ ಗಂಗೆ ತಂಡದಿಂದ ಆಕರ್ಷಕ ನೃತ್ಯ ಪ್ರದರ್ಶನ ಜರುಗಿತು. ತೋಕ್ ನಮ್ಮೆಯ ಅಂಗವಾಗಿ ಆಯೋಜಿತ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯಲ್ಲಿ ಮಕ್ಕಳೂ, ಮಹಿಳೆಯರು ಸೇರಿದಂತೆ ನೂರಾರು ಕೊಡವ, ಕೊಡವತಿಯರು ಅತ್ಯುತ್ಸಾಹದಿಂದ ಪಾಲ್ಗೊಂಡು ತಮ್ಮ ಗುರಿ ಪ್ರದರ್ಶಿಸಿದರು.

ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ

ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಗೋಪಾಲಕೃಷ್ಣ ಸೂಚನೆ



ಕೆ.ಆರ್.ಪೇಟೆ, ಡಿ.17– ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಕಾರ್ಯ ನಿರ್ವಹಿಸಬೇಕು ಎಂದು ಡಿಸಿ ಡಾ. ಹೆಚ್.ಎಲ್. ಗೋಪಾಲಕೃಷ್ಣ ತಿಳಿಸಿದರು.

ತಾಲೂಕಿನ ಅಗ್ರಹಾರಬಾಚಹಳ್ಳಿಯಲ್ಲಿ ಆಯೋಜಿಸಿದ್ದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಕ್ರಮದ ಬಗ್ಗೆ 15 ದಿನಗಳ ಮುಂಚಿತವಾಗಿ ಅಗ್ರಹಾರ ಬಾಚಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರಿಗೆ ಮಾಹಿತಿ ನೀಡಿ ಕುಂದುಕೊರತೆ ಬಗ್ಗೆ ಅರ್ಜಿ ಸ್ವೀಕರಿಸಲಾಗಿತ್ತು ಎಂದರು.

ಅಗ್ರಹಾರ ಬಾಚಹಳ್ಳಿ ಸೇರಿದಂತೆ ಸುತ್ತಮುತ್ತಲ 400ಕ್ಕೂ ಹೆಚ್ಚು ವಯೋವೃದ್ಧರಿಗೆ ಪಿಂಚಣಿ ಆದೇಶ ಪತ್ರಗಳನ್ನು ತಹಸೀಲ್ದಾರ್ ರೂಪಾ ನೇತೃತ್ವದಲ್ಲಿ ನಮ್ಮ ಕಂದಾಯ ಅಧಿಕಾರಿಗಳು ಮನೆ ಬಾಗಿಲಿಗೆ ಹೋಗಿ ವಿತರಿಸಿದ್ದಾರೆ. ಆದರೂ ಸಹ ಇಂದು 50 ಪಿಂಚಣಿ ಅರ್ಜಿ, 5 ಪೌತಿ ಖಾತೆ ಅರ್ಜಿ, ಪಹಣಿ ತಿದ್ದುಪಡಿಗೆ 25ಕ್ಕೂ ಅರ್ಜಿ ಸ್ವೀಕೃತವಾಗಿವೆ. ಇಂದೇ ಪಿಂಚಣಿ ಆದೇಶ ವಿತರಣೆಗೆ ಕ್ರಮ ವಹಿಸಲಾಗುವುದು ಎಂದರು.

ಕೇಂದ್ರ ಸರ್ಕಾರ ಎಪಿಎಲ್, ಬಿಪಿಎಲ್ ಪಡಿತರ ಚೀಟಿದಾರರಿಗೆ ಆರೋಗ್ಯ ಸೇವೆ ಒದಗಿಸಲು ಆಯುಷ್ಮಾನ್ ಆರೋಗ್ಯ ಕಾರ್ಡ್ ನೀಡಲಾಗುತ್ತಿದೆ. ಅಗ್ರಹಾರಬಾಚಳ್ಳಿಯಲ್ಲಿ 3 ಸಾವಿರ ಜನಸಂಖ್ಯೆ ಇದ್ದು, 600 ಜನರು ಮಾತ್ರ ಕಾರ್ಡ್ ಪಡೆದುಕೊಂಡಿದ್ದಾರೆ. ಇದು ಉತ್ತಮ ಯೋಜನೆಯಾಗಿದ್ದು, ಕಾರ್ಡ್ ಉಚಿತವಾಗಿ ನೀಡಲಾಗುತ್ತಿದೆ. ಎಲ್ಲರೂ ಆಯುಷ್ಮಾನ್ ಕಾರ್ಡ್ ನಿಗದಿತ ದಾಖಲಾತಿ ನೀಡಿ ಪಡೆದುಕೊಳ್ಳಲು ಸಲಹೆ ನೀಡಿದರು.

ಅಗ್ರಹಾರಬಾಚಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ 13 ಗ್ರಾಮಗಳಿದ್ದು, ಸ್ಮಶಾನ ಮಂಜೂರು ಮಾಡಲಾಗಿದೆ. ಸ್ಥಳದ ಹದ್ದುಬಸ್ತು ಮಾಡಿ ಪಂಚಾಯಿತಿಗೆ ಹಸ್ತಾಂತರಿಸಲಾಗಿದೆ. ಆಶ್ರಯ ಯೋಜನೆಗೆ ಮಂಜೂರು ಮಾಡಲಾಗಿರುವ ಜಾಗದ ಹದ್ದುಬಸ್ತು ಸಹ ಮಾಡಲಾಗಿದೆ ಎಂದರು.

ಈ ವೇಳೆ ಕಂದಾಯ ಇಲಾಖೆ ವತಿಯಿಂದ ಫಲಾನುಭವಿಗಳಿಗೆ ಪಿಂಚಣಿ ಆದೇಶ ಪತ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಗರ್ಭಿಣಿ ಸ್ತ್ರೀಯರಿಗೆ ಸೀಮಂತ, ಹೆಣ್ಣು ಮಕ್ಕಳಿಗೆ ಎಸ್‌ಎಸ್‌ವೈ ಕಾರ್ಡ್, ಕಾರ್ಮಿಕ ಇಲಾಖೆ ವತಿಯಿಂದ ಈ ಶ್ರಮ್ ಕಾರ್ಡ್, ಸ್ವಸಹಾಯ ಮಹಿಳಾ ಸಂಘಗಳಿಗೆ ಚೆಕ್ ವಿತರಿಸಲಾಯಿತು.

> ಕೆಂಪು ಬಸ್ ಸಂಚಾರ ಕಾಣದ ಅಗ್ರಹಾರ ಬಾಚಹಳ್ಳಿ ಗ್ರಾಮಕ್ಕೆ ಬೆಳಗ್ಗೆ ಮತ್ತು ಸಂಜೆ ಬಸ್ ಸೌಕರ್ಯ ಒದಗಿಸಲಾಗುವುದು. ಡಿ.19ರ ಸೋಮವಾರದಿಂದಲೇ ಕೆ.ಆರ್.ಪೇಟೆಯಿಂದ ಅಗ್ರಹಾರಬಾಚಹಳ್ಳಿ, ಚಿಲ್ಲದಹಳ್ಳಿ, ನಗರೂರು, ಮಾರ್ಗೋನಹಳ್ಳಿ ಮಾರ್ಗವಾಗಿ ಬಸ್ ಸಂಚಾರ ಆರಂಭವಾಗಲಿದೆ. ವಿದ್ಯಾರ್ಥಿಗಳು ಹಾಗೂ ಗ್ರಾಮೀಣ ಜನರು ಸಾರಿಗೆ ಸೇವೆ ಸದ್ಬಳಕೆ ಮಾಡಿಕೊಳ್ಳಿ.
> –ಗೋಪಾಲಕೃಷ್ಣ, ಜಿಲ್ಲಾಧಿಕಾರಿ.

ತಹಸೀಲ್ದಾರ್ ಎಂ.ವಿ.ರೂಪ ಮಾತನಾಡಿದರು. ಅಗ್ರಹಾರಬಾಚಹಳ್ಳಿ ಗ್ರಾಪಂ ಅಧ್ಯಕ್ಷೆ ಸಾವಿತ್ರಮ್ಮ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ರಸ್ತೆ ಸಾರಿಗೆ ನಿಗಮದ ಜಿಲ್ಲಾಧಿಕಾರಿ ನಾಗರಾಜು, ಜಿಪಂ ಉಪಕಾರ್ಯದರ್ಶಿ ಸರಸ್ವತಿ, ಡಿಡಿಪಿಐ ಜವರೇಗೌಡ, ಪಾಂಡವಪುರ ಎಸಿ ಮಹಮದ್ ಅಕ್ರಂ ಪಾಷಾ, ಗ್ರೇಡ್–2 ತಹಸೀಲ್ದಾರ್ ವಿಖಾರ್ ಅಹಮದ್, ಉಪ ತಹಶೀಲ್ದಾರ್ ರವಿ, ಲಕ್ಷ್ಮಿಕಾಂತ್, ಬಿಇಓ ಸೀತಾರಾಂ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್.ಯತೀಶ್, ತಾಲೂಕು ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ್, ಸೆಸ್ಕ್ ಎಇಇ ರಾಜಶೇಖರಮೂರ್ತಿ, ತೋಟಗಾರಿಕೆ ಸಹಾಯಕ ನಿರ್ದೇಶಕ ಡಾ.ಲೋಕೇಶ್, ಗ್ರಾಪಂ ಉಪಾಧ್ಯಕ್ಷ ಕುಮಾರಗೌಡ, ಪಿಡಿಓ ದೇವೇಗೌಡ, ಆರ್‌ಐ ಚಂದ್ರಕಲಾ, ವಿಎ ಸ್ಫೂರ್ತಿ, ನಾಗಮಂಗಲ ಸಾರಿಗೆ ಕಚೇರಿ ಅಧಿಕಾರಿ ಹನುಮಂತರಾಯಪ್ಪ ಸಿಡಿಪಿಓ ಅರುಣಕುಮಾರ್ ಸೇರಿದಂತೆ ನೂರಾರು ಗ್ರಾಮಸ್ಥರಿದ್ದರು.

ಡಾ.ವೀರೇಂದ್ರ ಹೆಗ್ಗಡೆ ಅವರಿಗೆ ಭಾರತ ರತ್ನ ನೀಡಿ

ಶ್ರೀರಂಗಪಟ್ಟಣ, ಡಿ.17– ಧಾರ್ಮಿಕ, ಮಹಿಳಾ ಸಬಲೀಕರಣ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿರುವ ಡಾ. ವೀರೇಂದ್ರ ಹೆಗ್ಗಡೆ ಅವರಿಗೆ ಕೇಂದ್ರ ಸರ್ಕಾರ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಮನವಿ ಮಾಡಿದರು.

ಪಟ್ಟಣದ ಟಿಎಪಿಸಿಎಂಎಸ್ ಭವನದಲ್ಲಿ ಶ್ರೀಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ನಡೆದ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ಧಾರ್ಮಿಕತೆಯ ಜತೆಗೆ ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇಂತಹ ಮಹನೀಯರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆ ಪ್ರಾದೇಶಿಕ ನಿರ್ದೇಶಕ ಜಯರಾಮ ನೆಲ್ಲಿತ್ತಾಯ, ಯೋಜನಾಧಿಕಾರಿ ಗಣಪತಿ ಭಟ್, ಹಿರಿಯ ಮುಖಂಡ ಹಾಗೂ ವಕೀಲ ಎಂ.ಪುಟ್ಟೇಗೌಡ. ಪುಟ್ಟೇಗೌಡ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಟಿ.ಶ್ರೀಧರ್, ಪುರಸಭೆ ಅಧ್ಯಕ್ಷೆ ನಿರ್ಮಲಾ, ಉಪಾಧ್ಯಕ್ಷ ನರಸಿಂಹೇಗೌಡ, ಸ್ಥಾಯಿ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಸದಸ್ಯರಾದ ಎಸ್.ಪ್ರಕಾಶ್, ಎಸ್.ಟಿ.ರಾಜು, ಗಂಜಾಂ ಶಿವು, ಎಸ್.ನಂದೀಶ್, ನಿಮಿಷಾಂಬ ಕೃಷ್ಣಪ್ಪ ಇತರರು ಉಪಸ್ಥಿತರಿದ್ದರು.

2023ಕ್ಕೆ ಹೆಚ್.ಡಿ.ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿ

ಕೆ.ಆರ್.ಪೇಟೆ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಬಸ್ ಸಂತೋಷ್ ಭವಿಷ್ಯ



ಕೆ.ಆರ್.ಪೇಟೆ, ಡಿ.17– ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಬಸ್ ಸಂತೋಷ್ ಕುಮಾರ್ ನೇತೃತ್ವದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಗಣಪತಿ ಹಾಗೂ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಬಳಿಕ ಕಲ್ಲಂಗಡಿ ಹಣ್ಣು ಕತ್ತರಿಸುವ ಮೂಲಕ ಕುಮಾರಸ್ವಾಮಿ ಹುಟ್ಟುಹಬ್ಬ ಆಚರಿಸಲಾಯಿತು.

ಜೆಡಿಎಸ್ ಟಿಕೆಟ್ ಆಕಾಂಕ್ಷಿ ಸಂತೋಷ್ ಕುಮಾರ್ ಮಾತನಾಡಿ, ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿ ಅನೇಕ ಜನಪರ ಯೋಜನೆಗಳನ್ನು ನೀಡಿದ್ದಾರೆ. ಬಡವರು, ದಲಿತರು, ರೈತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಕರ್ನಾಟಕಕ್ಕೆ ಕುಮಾರಸ್ವಾಮಿ ಅವರೇ ಆಶಾಕಿರಣ, ಮುಂದಿನ 2023ರಲ್ಲೂ ಹೆಚ್‌ಡಿಕೆ ಮತ್ತೆ ರಾಜ್ಯದ ಸಿಎಂ ಆಗಲಿದ್ದಾರೆ ಎಂದು ಭವಿಷ್ಯ ನುಡಿದರು.

ಶ್ರಮಿಕರ ಅಭಿವೃದ್ಧಿಯೇ ರಾಜ್ಯದ ಅಭಿವೃದ್ಧಿ ಎಂದು ಭಾವಿಸಿರುವ ಕುಮಾರಸ್ವಾಮಿ ಕನಸಿನಂತೆ ಶ್ರಮಿಕರು ಬೆಳೆಯುವ ಕಲ್ಲಂಗಡಿ ಹಣ್ಣನ್ನೇ ಕೇಕ್ ರೀತಿ ಕತ್ತರಿಸಿ, ಇದರೊಂದಿಗೆ ಕಬ್ಬಿನ ಪಾನೀಯ ಹಂಚುತ್ತಿದ್ದೇವೆ. ಈ ಮೂಲಕ ಜೆಡಿಎಸ್ ಶ್ರಮಿಕರ ಪಕ್ಷ ಎಂಬುದನ್ನು ಸಾಬೀತು ಪಡಿಸುತ್ತಿದ್ದೇವೆ ಎಂದರು.

ಕುಮಾರಸ್ವಾಮಿ ತಮ್ಮ ಹುಟ್ಟುಹಬ್ಬದಂದು ಬಸವಣ್ಣನಿಗೆ ಪೂಜೆ ಸಲ್ಲಿಸುವಂತೆ ಹೇಳಿದ್ದರು. ಈ ನಿಟ್ಟಿನಲ್ಲಿ ಯಾವುದೇ ಜಾತಿ, ಧರ್ಮಕ್ಕೆ ಸೇರದ ವಿಶ್ವಮಾನವ ಬಸವಣ್ಣರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕುಮಾರಸ್ವಾಮಿ ಹಾಗೂ ರೇವಣ್ಣ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ ಎಂದರು.

ಇದೇ ವೇಳೆ ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಜೊತೆಗೆ ಸಂತೋಷ್ ನೇತೃತ್ವದಲ್ಲಿ ನಿತ್ಯ ನೂರಾರು ಮಂದಿಗೆ ಉಚಿತ ಅನ್ನದಾನ ನಡೆಯಲಿದ್ದು, ಹುಟ್ಟುಹಬ್ಬದ ಅಂಗವಾಗಿ ಸಾವಿರಾರು ಮಂದಿಗೆ ಅನ್ನದಾನ ಹಮ್ಮಿಕೊಳ್ಳಲಾಗಿತ್ತು. ಜೆಡಿಎಸ್ ಮುಖಂಡ ರಾದ ಬಿ.ಎಲ್.ದೇವರಾಜು, ಬಸ್ ಕೃಷ್ಣೇಗೌಡ, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ ಇತರರಿದ್ದರು.

ವಿದ್ಯಾರ್ಥಿನಿಗೆ ಶಾಸಕ ಪುಟ್ಟರಾಜು ಆರ್ಥಿಕ ನೆರವು



ಪಾಂಡವಪುರ, ಡಿ.17– ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಪ್ರತಿಭಾವಂತ ವೈದ್ಯಕೀಯ ಶಿಕ್ಷಣ ವಿದ್ಯಾರ್ಥಿನಿಗೆ ಶಾಸಕ ಸಿ.ಎಸ್.ಪುಟ್ಟರಾಜು ಆರ್ಥಿಕ ನೆರವು ನೀಡುವುದರ ಜತೆಗೆ, ಶಿಕ್ಷಣದ ಪೂರ್ಣ ಖರ್ಚು ಅನ್ನು ವೈಯಕ್ತಿಕವಾಗಿ ಭರಿಸುವುದಾಗಿ ಭರವಸೆ ನೀಡಿದ್ದಾರೆ.

ತಾಲೂಕಿನ ನಾರ್ಥ್ ಬ್ಯಾಂಕ್ ಗ್ರಾಮದ ಅನಂತಮೂರ್ತಿ ಎಂಬುವರ ಪುತ್ರಿ ಐಶ್ವರ್ಯಳಿಗೆ ಆರ್ಥಿಕ ನೆರವು ನೀಡಿ ಶಿಕ್ಷಣಕ್ಕೆ ಆಸರೆ ಆಗಿದ್ದಾರೆ. ಪಿಯುಸಿ ಮುಗಿಸಿ ಮೆಡಿಕಲ್ ಶಿಕ್ಷಣಕ್ಕೆ ನಡೆದ ನೀಟ್ ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕ್ ಪಡೆದು ಕಾರವಾರ ಮೆಡಿಕಲ್ ಕಾಲೇಜಿನಲ್ಲಿ ಸರ್ಕಾರಿ ಸೀಟ್ ಪಡೆದುಕೊಂಡಿದ್ದರು. ಆದರೆ, ಸರ್ಕಾರಿ ಪ್ರವೇಶ ಶುಲ್ಕ ಭರಿಸಲು ಸಾಧ್ಯವಾಗದೇ ಸಂಕಷ್ಟದಲ್ಲಿದ್ದ ವಿದ್ಯಾರ್ಥಿನಿಗೆ ಶಾಸಕ ಸಿ.ಎಸ್.ಪುಟ್ಟರಾಜು ಮೊದಲ ವರ್ಷದ ಶುಲ್ಕ ಭರಿಸಿದ್ದಾರೆ. ಅಲ್ಲದೆ ಆ ವಿದ್ಯಾರ್ಥಿನಿ ವೈದ್ಯಕೀಯ ಕೋರ್ಸ್ ಮುಗಿಸುವ ತನಕ ಎಲ್ಲಾ ಪ್ರವೇಶ ಶುಲ್ಕವನ್ನು ಭರಿಸುವುದಾಗಿ ಭರವಸೆ ನೀಡಿದ್ದಾರೆ. ಈ ಹಿಂದೆಯೂ ಸಹ ಮೆಡಿಕಲ್ ಓದಲು ಹಣವಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದ ಇಬ್ಬರು ವಿದ್ಯಾರ್ಥಿಗಳಿಗೆ ಶಾಸಕರು ಆರ್ಥಿಕ ನೆರವು ನೀಡುವ ಮೂಲಕ ನೆರವಾಗಿದ್ದರು. ಶಾಸಕರ ಕಾರ್ಯ ವೈಖರಿಗೆ ಕ್ಷೇತ್ರದಲ್ಲಿ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಚಾಮರಾಜನಗರ, ಡಿ.17– ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ ಕಡಿತಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗೆ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದಿಂದ ಪ್ರತಿಭಟನೆ ನಡೆಯಿತು.

ತರಗತಿಗಳನ್ನು ಬಹಿಷ್ಕರಿಸಿ ಹೊರ ಬಂದ ಕಾಲೇಜು ವಿದ್ಯಾರ್ಥಿಗಳು ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡು ಬೇಡಿಕೆಗಳನ್ನು ಈಡೇರಿಸಬೇಕೆಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳಿಗೆ ಆಗುತ್ತಿರುವ ಕುಂದು–ಕೊರತೆಗಳಿಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಪರೀಕ್ಷೆ ಮುಗಿದಿದ್ದರೂ ಫಲಿತಾಂಶ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. ಪರೀಕ್ಷಾ ಶುಲ್ಕ, ಪ್ರವೇಶ ಶುಲ್ಕ ಹೆಚ್ಚಿಸಲಾಗಿದೆ. ವಿದ್ಯಾರ್ಥಿ ವೇತನ ನೀಡುತ್ತಿಲ್ಲ. ಲ್ಯಾಪ್‌ಟಾಪ್ ವಿತರಿಸಿಲ್ಲ. ವಿದ್ಯಾರ್ಥಿ ನಿಲಯಗಳ ಕೊರತೆ, ಬಸ್ ಸೌಲಭ್ಯ ಕೊರತೆ, ಉಚಿತ ಬಸ್‌ಪಾಸ್ ನೀಡದೆ ಇರುವುದರಿಂದ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ತೊಂದರೆಯಾಗುತ್ತಿದೆ ಎಂದು ದೂರಿದರು.

ಸೌಲಭ್ಯಗಳಿಂದ ವಂಚಿತರಾಗಿ ಹಲವು ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ. ಸರ್ಕಾರ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿದೆ. ಇದನ್ನು ಮನಗಂಡು ಭಾರತ ರಾಷ್ಟ್ರೀಯ ಒಕ್ಕೂಟ ಸಂಘಟನೆಯಿಂದ ವಿದ್ಯಾರ್ಥಿಗಳನ್ನೆಲ್ಲಾ ಒಗ್ಗೂಡಿಸಿ ಹಲವು ಬೇಡಿಕೆಗಳನ್ನು ಮುಂದಿಡಲಾಗಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡಬೇಕು. ಸಮಯಕ್ಕೆ ಸರಿಯಾಗಿ ಸಾರಿಗೆ ವ್ಯವಸ್ಥೆ ಮಾಡಬೇಕು. ಶಾಲಾ–ಕಾಲೇಜುಗಳ ಮುಂಭಾಗ ಬಸ್ ನಿಲ್ದಾಣ ನಿರ್ಮಿಸಬೇಕು. ವಿದ್ಯಾರ್ಥಿ ವೇತನ ಬಿಡುಗಡೆ ಮಾಡಬೇಕು. ಪ್ರವೇಶ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ಕಡಿತಗೊಳಿಸಬೇಕು. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಬೇಕು. ಪರೀಕ್ಷಾ ಫಲಿತಾಂಶ ಬಿಡುಗಡೆ ಮಾಡಬೇಕು. ಉತ್ತಮ ಗುಣಮಟ್ಟದ ವಿದ್ಯಾರ್ಥಿ ನಿಲಯ ವ್ಯವಸ್ಥೆ, ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಶೇಷ ಉತ್ತೇಜನ ನೀಡುವುದು. ಶಾಲಾ–ಕಾಲೇಜುಗಳಲ್ಲಿ ಸುಸಜ್ಜಿತ ಶೌಚಾಲಯ ನಿರ್ಮಾಣ ಮಾಡಬೇಕು ಸೇರಿದಂತೆ ಹಲವು ಬೇಡಿಕೆಯನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಮೋಹನ್, ರಾಜ್ಯ ಕಾರ್ಯದರ್ಶಿ ಸ್ವಾಮಿ, ಜಿಲ್ಲಾ ಕಾರ್ಯದರ್ಶಿ ದಿಲೀಪ್, ಪದಾಧಿಕಾರಿಗಳಾದ ನಿತಿನ್, ನಾಗಲಾಂಬಿಕಾ, ಮಮತಾ, ಚಂದನ್, ಯೋಗೇಶ್ ಸೇರಿದಂತೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಹಳೇ ಪಿಂಚಣಿ ಯೋಜನೆ ಜಾರಿಗೆ ಆಗ್ರಹಿಸಿ ರಕ್ತದಾನ ಮೂಲಕ ವಿನೂತನ ಪ್ರತಿಭಟನೆ

- ರಕ್ತ ಕೊಟ್ಟೇವು... ಪಿಂಚಣಿ ಬಿಡೇವು... ಘೋಷಣೆ ಕೂಗಿ ಆಕ್ರೋಶ
- ನಾಳೆ ಬೆಂಗಳೂರಿನಲ್ಲಿ 'ಮಾಡು ಇಲ್ಲವೇ ಮಡಿ' ಹೋರಾಟ



ಚಾಮರಾಜನಗರ, ಡಿ.17–ಹಳೇ ಪಿಂಚಣಿ ಯೋಜನೆ ಜಾರಿಗೆ ಒತ್ತಾಯಿಸಿ ಚಾಮರಾಜನಗರ ವಿಭಾಗದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ–ಸಂಸ್ಥೆಗಳ ಒಕ್ಕೂಟ ಹಾಗೂ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ನೌಕರರು ರಕ್ತದಾನ ಮಾಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ನಗರದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಸ್ಥೆಗಳ ಒಕ್ಕೂಟಗಳ ಕಚೇರಿ ಆವರಣದಲ್ಲಿ ಸಮಾವೇಶಗೊಂಡ ನೌಕರರು, ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ರಕ್ತ ಕೊಟ್ಟೇವು... ಪಿಂಚಣಿ ಬಿಡೇವು ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಕಾರ್ಯಪಾಲಕ ಅಭಿಯಂತರರಾದ ಆರ್.ವಸಂತಕುಮಾರ್ ಮಾತನಾಡಿ, ಎನ್‌ಪಿಎಸ್ ಉತ್ತಮ ಯೋಜನೆಯಲ್ಲ. ಇದರಿಂದ ಸರ್ಕಾರಿ ನೌಕರರಿಗೆ ಯಾವುದೇ ಭದ್ರತೆ ಇಲ್ಲದಂತಾಗಿದೆ. ಆದ್ದರಿಂದ ಒಪಿಎಸ್ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಎನ್‌ಪಿಎಸ್ ಯೋಜನೆ ವಿರೋಧಿಸಿ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದಿಂದ ಡಿ.19ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ 'ಮಾಡು ಇಲ್ಲವೇ ಮಡಿ' ಅನಿರ್ದಿಷ್ಟಾವಧಿ ಹೋರಾಟ ಹಮ್ಮಿಕೊಳ್ಳಲಾಗಿದೆ. ಈ ಹೋರಾಟ ಬೆಂಬಲಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ–ಸಂಸ್ಥೆಗಳ ಒಕ್ಕೂಟ ಹಾಗೂ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆಯ ರಕ್ತನಿಧಿ ಕೇಂದ್ರದಿಂದ ರಕ್ತದಾನ ಶಿಬಿರ ಆಯೋಜಿಸಿ ರಕ್ತ ಕೊಟ್ಟೇವು... ಪಿಂಚಣಿ ಬಿಡೇವು ಎಂಬ ಘೋಷಣೆಯೊಂದಿಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ನೌಕರರಿಗೆ ಮಾರಕವಾಗಿರುವ ಎನ್‌ಪಿಎಸ್ ರದ್ದುಪಡಿಸಿ ನೌಕರರಿಗೆ ಅನುಕೂಲವಾಗಿರುವ ಒಪಿಎಸ್ ಯೋಜನೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಲೆಕ್ಕಾಧಿಕಾರಿ ಭಾಸ್ಕರ್, ಸಂಘದ ಕಾರ್ಯದರ್ಶಿ ಎಸ್.ಸಿದ್ದರಾಜಪ್ಪ, ಹರದನಹಳ್ಳಿ ಪ್ರಾಥಮಿಕ ಸಮಿತಿ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಚೆನ್ನಂಜಕುಮಾರ್, ಗುಂಡ್ಲುಪೇಟೆ ಅಧ್ಯಕ್ಷ ಶರಣಬಸಪ್ಪ ಚಿನ್ನಪುರ, ಕಾರ್ಯದರ್ಶಿ ಸುನೀಲ್ ರಕ್ತದಾನ ಮಾಡಿದರು.

ಪ್ರತಿಭಟನೆಯಲ್ಲಿ ಚಾಮರಾಜನಗರ–ಕೊಡುಗು ವೃತ್ತದ ಸಂಘಟನಾ ಕಾರ್ಯದರ್ಶಿ ಎನ್.ಮಹೇಶ್, ಸಂಘದ ಸ್ಥಳೀಯ ಸಮಿತಿ ಅಧ್ಯಕ್ಷ ಮುರಳಿ ಕೃಷ್ಣಸ್ವಾಮಿ, ಉಪಾಧ್ಯಕ್ಷ ಎಸ್.ಮಂಜುನಾಥ್, ಸಹ ಕಾರ್ಯದರ್ಶಿ ಮಹೇಶ್, ಖಜಾಂಚಿ ರಮೇಶ್, ನಿರ್ದೇಶಕರಾದ ನಾಗರಾಜು, ಶಿವಪ್ಪ, ಸಿ.ರಾಜು, ಸೋಮಶೇಖರ್, ಡಾ.ಮಹೇಶ್, ಎಸ್‌ಸಿ/ಎಸ್‌ಟಿ ಕಲ್ಯಾಣ ಸಂಸ್ಥೆ ಕಾರ್ಯದರ್ಶಿ ಮಂಜುನಾಥ್ ಇದ್ದರು.

ಚೀನಾ ವಿರುದ್ಧ ಶಾಲಾ ಮಕ್ಕಳು, ಗ್ರಾಮಸ್ಥರ ಪ್ರತಿಭಟನೆ



ಚಾಮರಾಜನಗರ, ಡಿ.17– ತಾಲೂಕಿನ ವೆಂಕಟಯ್ಯನಛತ್ರ ಗ್ರಾಮದ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ನಡೆಯುವ ಶ್ರೀಸ್ವಾಮಿ ವಿವೇಕಾನಂದ ಪಾಠಶಾಲೆಯ ಮಕ್ಕಳು ಹಾಗೂ ಗ್ರಾಮಸ್ಥರು ಚೀನಾ ದೇಶದ ವಿರುದ್ಧ ಪ್ರತಿಭಟನೆ ಮಾಡಿದರು.


ಗ್ರಾಮದ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ಬಸ್ ನಿಲ್ದಾಣದವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಿತು, ಮೆರವಣಿಗೆಯಲ್ಲಿ ಅಕ್ರಮವಾಗಿ ಭಾರತದ ಗಡಿ ಪ್ರವೇಶಿಸುತ್ತಿರುವ ಚೀನಾ ಸೈನಿಕರಿಗೆ ಧಿಕ್ಕಾರ ಹಾಗೂ ಚೀನಾ ದೇಶದ ವಸ್ತುಗಳನ್ನು ಬಹಿಷ್ಕರಿಸಿ ಎಂಬ ಘೋಷಣೆಯನ್ನು ಕೂಗಿದರು, ವೆಂಕಟಯ್ಯನಛತ್ರದಿಂದ ಬಿಸಲವಾಡಿಗೆ ಹೋಗುವ ಮುಖ್ಯರಸ್ತೆಯಲ್ಲಿ ಚೀನಾದ ಅಧ್ಯಕ್ಷ ಪ್ರತಿಕೃತಿಯನ್ನು ದಹನ ಮಾಡಿದರು. ಇದೇ ಸಂದರ್ಭದಲ್ಲಿ ಗ್ರಾಪಂ ಸದಸ್ಯ ರಂಗಸ್ವಾಮಿ, ಯಜಮಾನ ಚಿಕ್ಕಣ್ಣ, ಅರ್ಚಕರಾದ ಶೇಷಾನಂದಾಆಚಾರ್, ತಿರುಮಲಾಚಾರ್, ಪಾಠಶಾಲೆ ಮಕ್ಕಳಾದ ಪ್ರೇಮಕುಮಾರ್, ಮಹೇಶ್, ಆಕಾಶ್, ಮಾನಸ, ಮಹಾಲಕ್ಷ್ಮಿ, ಸೇರಿದಂತೆ ಗ್ರಾಮಸ್ಥರು ಹಾಗೂ ಮಕ್ಕಳು ಹಾಜರಿದ್ದರು.

ದಾಳಿ ನಡೆಸಿದ್ದು ಅಕ್ರಮ ಮದ್ಯಕ್ಕಾಗಿ, ಸಿಕ್ಕಿದ್ದು ಗಾಂಜಾ: ಆರೋಪಿ ಬಂಧನ



ಚಾಮರಾಜನಗರ, ಡಿ.17– ಜಿಲ್ಲೆಯ ಯಳಂದೂರು ತಾಲೂಕಿನ ಕೆ.ದೇವರಹಳ್ಳಿಯಲ್ಲಿ ಅಕ್ರಮ ಮದ್ಯ ಮಾರಾಟ ಪತ್ತೆಗೆ ದಾಳಿ ನಡೆಸಿದ ಅಬಕಾರಿ ಅಧಿಕಾರಿಗಳಿಗೆ ಒಣ ಗಾಂಜಾ ಸಿಕ್ಕಿದ್ದು, ಈ ಸಂಬಂಧ ಆರೋಪಿಯೊಬ್ಬನನ್ನು ಬಂಧಿಸಲಾಗಿದೆ. ಗ್ರಾಮದ ಮಾದೇಗೌಡ ಬಂಧಿತ ಆರೋಪಿಯಾಗಿದ್ದು, ಈತನಿಂದ 180 ಗ್ರಾಂ ಒಣ ಗಾಂಜಾ ವಶಕ್ಕೆ ಪಡೆಯಲಾಗಿದೆ.

ಜಿಲ್ಲೆಯ ಅಬಕಾರಿ ಉಪ ಆಯುಕ್ತ ಆರ್.ನಾಗಸೇನಾ ಅವರ ಮಾರ್ಗದರ್ಶನದ ಮೇರೆಗೆ ಶನಿವಾರ ಮಾದೇಗೌಡ ಮನೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತದೆ ಎಂಬ ಮಾಹಿತಿ ಮೇರೆಗೆ ಮನೆ ಮೇಲೆ ಅಬಕಾರಿ ಚಾಮರಾಜನಗರ ಉಪವಿಭಾಗದ ಸಿಬ್ಬಂದಿ ದಾಳಿ ನಡೆಸಿದಾಗ ಈ ವೇಳೆ ಅಕ್ರಮವಾಗಿ ಸಂಗ್ರಹಿಸಿದ್ದ ಒಣ ಗಾಂಜಾ ಪತ್ತೆಯಾಗಿದ್ದು, ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ದಾಳಿಯಲ್ಲಿ ಅಬಕಾರಿ ನಿರೀಕ್ಷಕ ಉಮಾಶಂಕರ್, ಉಪ ನಿರೀಕ್ಷಕರಾದ ನಂದಿನಿ, ಪೇದೆ ರವಿಕುಮಾರ್, ಚಾಲಕ ವೀರಪ್ಪ ಪಾಲ್ಗೊಂಡಿದ್ದರು.



ಕ್ಷೇತ್ರದ ಶಾಸಕರ ಪರಂಪರೆ

2008	ಸಿದ್ದರಾಮಯ್ಯ	ಕಾಂಗ್ರೆಸ್
2013	ಸಿದ್ದರಾಮಯ್ಯ	ಕಾಂಗ್ರೆಸ್
2018	ಡಾ.ಯತೀಂದ್ರ	ಕಾಂಗ್ರೆಸ್

ರಾಜ್ಯಕ್ಕೆ ಮುಖ್ಯಮಂತ್ರಿ ಕೊಟ್ಟ 'ವರುಣ'ನ ಕೃಪೆಗೆ ಕಾಂಗ್ರೆಸ್ ಜೊತೆಗೆ ಬಿಜೆಪಿ, ಜೆಡಿಎಸ್ ಆಕಾಂಕ್ಷಿಗಳ ಮೊರೆ!



■ ಎಂ.ಟಿ.ಯೋಗೇಶ್‌ಕುಮಾರ್

2008ರಲ್ಲಿ ಕ್ಷೇತ್ರ ಪುನರ್‌ವಿಂಗಡಣೆಯಾದಾಗ ಹೊಸದಾಗಿ ಉದಯಿಸಿದ ವರುಣಾ ವಿಧಾನಸಭಾ ಕ್ಷೇತ್ರ ಇಡೀ ರಾಜ್ಯದ ಪ್ರತಿಷ್ಠಿತ ಕ್ಷೇತ್ರವಾಗಿ ಪರಿಗಣಿತವಾಗಿದೆ. ಇಲ್ಲಿ ಈವರೆಗೂ ಮೂರು ಚುನಾವಣೆಗಳು ನಡೆದಿದ್ದು, ಮೊದಲ ಬಾರಿಗೆ ಇಲ್ಲಿಂದ ಆಯ್ಕೆಯಾದ ಸಿದ್ದರಾಮಯ್ಯ ವಿಧಾನ ಸಭೆಯಲ್ಲಿ ವಿಪಕ್ಷ ನಾಯಕರಾದರೆ, 2ನೇ ಚುನಾವಣೆಯಲ್ಲಿ ಮರು ಆಯ್ಕೆಯಾಗಿ ಮುಖ್ಯಮಂತ್ರಿಗಾದಿಗೇರಿದರು. ನಂತರದ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಈ ಕ್ಷೇತ್ರದಿಂದ ತಮ್ಮ ಪುತ್ರನಿಗೆ ಅವಕಾಶ ಮಾಡಿಕೊಟ್ಟು ತಾವು ಚಾಮುಂಡೇಶ್ವರಿ ಹಾಗೂ ಬಾದಾಮಿಯಲ್ಲಿ ಸ್ಪರ್ಧಿಸಿದ್ದರು. ಚಾಮುಂಡೇಶ್ವರಿಯಲ್ಲಿ ಸೋತರೆ, ಬಾದಾಮಿಯಲ್ಲಿ ಗೆಲುವು ಸಾಧಿಸಿ, ಈಗ ಮತ್ತೆ ವಿಧಾನಸಭೆ ವಿಪಕ್ಷ ನಾಯಕರಾಗಿದ್ದಾರೆ. ಈ ಮಧ್ಯೆ ಸಿದ್ದರಾಮಯ್ಯರ ಪುತ್ರ ಡಾ. ಯತೀಂದ್ರ ಈ ಕ್ಷೇತ್ರದಿಂದ ಎದುರಿಸಿದ ಪ್ರಥಮ ಚುನಾವಣೆಯಲ್ಲೇ ಗೆಲುವಿನ ನಗೆ ಬೀರಿ, ವಿಧಾನಸಭೆ ಪ್ರವೇಶಿಸಿದರು.

ರಾಜ್ಯಕ್ಕೆ 'ಮುಖ್ಯಮಂತ್ರಿ' ನೀಡಿದ ಕ್ಷೇತ್ರ ಎಂಬ ಹೆಗ್ಗಳಿಕೆಗೆ ವರುಣಾ ಪಾತ್ರವಾಗಿದೆ. ತಂದೆ ಹಾಗೂ ಮಗನನ್ನು ಸತತವಾಗಿ ಗೆಲ್ಲಿಸಿದ ಕ್ಷೇತ್ರ ಎಂಬ ದಾಖಲೆಯನ್ನೂ ಕೂಡ ವರುಣಾ ತನ್ನೊಡಲಿಗೆ ಸೇರಿಸಿಕೊಂಡಿದೆ. ಸಂಪೂರ್ಣವಾಗಿ ಗ್ರಾಮಾಂತರ ಪ್ರದೇಶಗಳನ್ನೇ ಹೊಂದಿರುವ ಈ ಕ್ಷೇತ್ರದ ವ್ಯಾಪ್ತಿಗೆ ಮೈಸೂರು, ನಂಜನಗೂಡು ಮತ್ತು ತಿ.ನರಸೀಪುರ ತಾಲೂಕಿನ ಗ್ರಾಮಗಳು ಸೇರಿವೆ. ಈ ಮೂರು ತಾಲೂಕುಗಳಲ್ಲಿ ವ್ಯಾಪ್ತಿಸಿಕೊಂಡಿರುವ ವರುಣಾ ಕ್ಷೇತ್ರವು ಯಾವುದೇ ತಾಲೂಕು ಕೇಂದ್ರವನ್ನೂ ತನ್ನ ವ್ಯಾಪ್ತಿಯಲ್ಲಿ ಹೊಂದಿರದ ವಿಶೇಷತೆಯಿಂದ ಕೂಡಿದೆ. ವರುಣಾ ವಿಧಾನಸಭಾ ಕ್ಷೇತ್ರ ಅಸ್ತಿತ್ವಕ್ಕೆ ಬಂದ ನಂತರ ನಡೆದಂತಹ ಮೂರೂ ಚುನಾವಣೆಗಳಲ್ಲೂ ಕಾಂಗ್ರೆಸ್ ಗೆಲುವಿನ ನಗೆ ಬೀರಿದ್ದು, ಹಾಗಾಗಿ ಈ ಕ್ಷೇತ್ರ ಇಲ್ಲಿವರೆಗೆ ಕಾಂಗ್ರೆಸ್‌ನ ಭದ್ರಕೋಟೆ ಎಂದೆನಿಸಿದೆ. ಈ ಮೂರೂ ಚುನಾವಣೆಯಲ್ಲೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದ್ದು, ಈ ಕ್ಷೇತ್ರದಲ್ಲಿ ಜೆಡಿಎಸ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ಮೊದಲನೇ ಚುನಾವಣೆಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ರೇವಣ ಸಿದ್ದಯ್ಯ ವಿರುದ್ಧ ಸಿದ್ದರಾಮಯ್ಯ ಗೆಲುವು ಸಾಧಿಸಿದರೆ, 2ನೇ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಪ್ತ ಸಹಾಯಕ ಕಾಪು ಸಿದ್ದಲಿಂಗಸ್ವಾಮಿ ಅವರನ್ನು ಸಿದ್ದರಾಮಯ್ಯ ಮಣಿಸಿದ್ದರು. 3ನೇ ಚುನಾವಣೆಯಲ್ಲಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಅವರು ಬಿಜೆಪಿಯ ತೋಟದಪ್ಪ ಬಸವರಾಜು ಎದುರು ಭರ್ಜರಿ ಗೆಲುವು ಸಾಧಿಸಿದ್ದರು.

ಮುಂಬರುವ ಚುನಾವಣೆಯಲ್ಲಿ ಸಿದ್ದರಾಮಯ್ಯನವರೇ ಈ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬ ನಿರೀಕ್ಷೆಯನ್ನು ಇಲ್ಲಿನ ಮತದಾರರು ಹೊಂದಿದ್ದಾರೆ. ಒಂದು ವೇಳೆ ಸಿದ್ದರಾಮಯ್ಯ ಸ್ಪರ್ಧಿಸದಿದ್ದರೆ ಅವರ ಪುತ್ರ ಡಾ. ಯತೀಂದ್ರ 2ನೇ ಬಾರಿ ಇಲ್ಲಿಂದ ಕಣಕ್ಕಿಳಿಯಲಿದ್ದಾರೆ. ಟಿಕೆಟ್‌ಗಾಗಿ ಈ ಕ್ಷೇತ್ರದಿಂದ ಡಾ. ಯತೀಂದ್ರ ಅವರು ಮಾತ್ರ ಕಾಂಗ್ರೆಸ್‌ನಿಂದ ಅರ್ಜಿ ಸಲ್ಲಿಸಿದ್ದಾರೆ. ಈ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅಥವಾ ಅವರ ಪುತ್ರ ಸ್ಪರ್ಧಿಸಲಿ ಎಂಬ ಇರಾದೆಯನ್ನು ಇತರೆ ಕಾಂಗ್ರೆಸ್ ಮುಖಂಡರು ಹೊಂದಿದಂತಿದೆ. ಹೀಗಾಗಿ ಬೇರೆ ಯಾರೂ ಇಲ್ಲಿಂದ ಕಾಂಗ್ರೆಸ್ ಟಿಕೆಟ್‌ಗೆ ಅರ್ಜಿ ಸಲ್ಲಿಸಿಲ್ಲ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ. ವಿಜಯೇಂದ್ರ ಅವರ ನಾಯಕತ್ವ ಹೊರಹೊಮ್ಮಿದ್ದು, ವರುಣಾ ಕ್ಷೇತ್ರದಿಂದಲೇ ಎಂಬುದು ವಿಶೇಷ. ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಸ್ಪರ್ಧಿಸಲು ವಿಜಯೇಂದ್ರ ಅವರು ಭರ್ಜರಿ ತಯಾರಿ ನಡೆಸಿದ್ದರು. ಅದಕ್ಕೆ ಅನುಕೂಲವಾಗುವಂತೆ ವರುಣಾ ಗ್ರಾಮದಲ್ಲೇ ಮನೆಯನ್ನೂ ಮಾಡಿದ್ದರು. ಕ್ಷೇತ್ರಾದ್ಯಂತ ಸಂಚರಿಸಿ, ಪಕ್ಷ ಸಂಘಟಿಸಿದ್ದರು. ಅವರ ವಿರುದ್ಧ ಬೇರೆ ಯಾರೂ ಆಕಾಂಕ್ಷಿಗಳಿರಲಿಲ್ಲ. ಆದರೆ ಕೊನೆ ಕ್ಷಣದಲ್ಲಿ ಬಿಜೆಪಿ ವರಿಷ್ಠರು ವಿಜಯೇಂದ್ರ ಅವರಿಗೆ ಟಿಕೆಟ್ ನಿರಾಕರಿಸಿದ್ದರು. ವಿಜಯೇಂದ್ರ ಸ್ಪರ್ಧಿಸುವುದಿಲ್ಲ ಎಂಬುದು ಖಚಿತವಾದ ನಂತರ ರೊಚ್ಚಿಗೆದ್ದ ಅವರ ಬೆಂಬಲಿಗರು ಹಾಗೂ ಕಾರ್ಯಕರ್ತರನ್ನು ಸಮಾಧಾನ ಪಡಿಸುವ ಹೊಣೆಗಾರಿಕೆಯನ್ನು ಯಡಿಯೂರಪ್ಪ ಅವರಿಗೇ ಒಪ್ಪಿಸಿದ್ದರು. ನಂಜನಗೂಡಿನಲ್ಲಿ ಸಾರ್ವಜನಿಕ ಸಭೆ ನಡೆಸಿದ ಯಡಿಯೂರಪ್ಪ ವರುಣಾದಿಂದ ತಮ್ಮ ಪುತ್ರ ಸ್ಪರ್ಧಿಸುವುದಿಲ್ಲ ಎಂದು ತಿಳಿಸಿದ್ದಲ್ಲದೆ, ತೋಟದಪ್ಪ ಬಸವರಾಜು ಬಿಜೆಪಿ ಅಧಿಕೃತ ಅಭ್ಯರ್ಥಿ ಎಂದು ಘೋಷಿಸಿದಾಗ ಉದ್ರಿಕ್ತ ಬಿಜೆಪಿ ಕಾರ್ಯಕರ್ತರು ಹಾಗೂ ವಿಜಯೇಂದ್ರ ಬೆಂಬಲಿಗರು ದಾಂಧಲೆ ನಡೆಸಿದ್ದರು. ಚೇರುಗಳನ್ನು ಎಸೆದು ಆಕ್ರೋಶ ವ್ಯಕ್ತಪಡಿಸಿದ್ದರು. ನಂತರ ಯಡಿಯೂರಪ್ಪ ಮತ್ತು ವಿಜಯೇಂದ್ರ ಮೈಸೂರಿನ ಹೋಟೆಲ್‌ವೊಂದಕ್ಕೆ ಆಗಮಿಸಿದಾಗ ಅಲ್ಲಿಗೂ ಲಗ್ಗೆಯಿಟ್ಟ ಕಾರ್ಯಕರ್ತರು ವಿಜಯೇಂದ್ರ ಸ್ಪರ್ಧಿಸಲೇಬೇಕೆಂದು ಆಗ್ರಹಿಸಿದರಲ್ಲದೆ, ಅವರಿಗೆ ಟಿಕೆಟ್ ಕೈ ತಪ್ಪಿದ್ದಕ್ಕೆ ಪಕ್ಷದ ಕೆಲವು ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಇಡೀ ಕ್ಷೇತ್ರದಾದ್ಯಂತ ಬಿಜೆಪಿ ಕಾರ್ಯಕರ್ತರ ಆಕ್ರೋಶ ವ್ಯಕ್ತವಾಗಿತ್ತು. ಅಭ್ಯರ್ಥಿಯಾಗಿದ್ದ ತೋಟದಪ್ಪ ಬಸವರಾಜು ಕೇವಲ ಸೂಚಕರನ್ನು ಮಾತ್ರ ಕರೆದೊಯ್ದು ನಾಮಪತ್ರ ಸಲ್ಲಿಸುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಮುಂದಿನ ಚುನಾವಣೆಯಲ್ಲಿ ವಿಜಯೇಂದ್ರ ಈ ಕ್ಷೇತ್ರದಿಂದಲೇ ಸ್ಪರ್ಧಿಸಬೇಕು ಎಂಬುದು ಬಿಜೆಪಿ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರ ಒತ್ತಾಯವಾಗಿದೆ. ಒಂದು ವೇಳೆ ವಿಜಯೇಂದ್ರ ಶಿಕಾರಿಪುರದಿಂದ ಸ್ಪರ್ಧೆಗಿಳಿದರೆ ತಮಗೆ ಅವಕಾಶ ಕಲ್ಪಿಸಬೇಕು ಎಂದು ಸುಮಾರು ಒಂದು ಡಜನ್ ಮುಖಂಡರು ಮುಂದೆ ಬಂದಿದ್ದಾರೆ. ಅದೇ ವೇಳೆ ಯಾರಿಗೆ ಟಿಕೆಟ್ ದೊರೆತರೂ ಒಗ್ಗಟ್ಟಿನಿಂದ ದುಡಿದು, ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಇತ್ತೀಚೆಗೆ ತಿ.ನರಸೀಪುರದಲ್ಲಿ ಸಭೆ ಸೇರಿದ್ದ ಮುಖಂಡರು ಒಗ್ಗಟ್ಟಿನ ಮಂತ್ರ ಪಠಿಸಿದ್ದಾರೆ.

ವಿಜಯೇಂದ್ರ ಅವರು ಸ್ಪರ್ಧಿಸದಿದ್ದರೆ ತಮಗೆ ಅವಕಾಶ ನೀಡಿ ಎಂದು ಕಳೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ತೋಟದಪ್ಪ ಬಸವರಾಜು ಮಾತ್ರವಲ್ಲದೆ, ಜಿಪಂ ಮಾಜಿ ಸದಸ್ಯರೂ ಆದ ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎನ್. ಸದಾನಂದ, ವಿಜಯೇಂದ್ರ ಆಪ್ತ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ವರುಣಾದಲ್ಲಿ ನಡೆದ 2ನೇ ಚುನಾವಣೆಯಲ್ಲಿ ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸಿದ್ದ ಕಾಪು ಸಿದ್ದಲಿಂಗಸ್ವಾಮಿ, ಯುವಮೋರ್ಚಾ ರಾಜ್ಯ ಉಪಾಧ್ಯಕ್ಷರಾಗಿದ್ದ ಪ್ರತಾಪ್ ಜಿ. ದೇವನೂರು, ಜಿಪಂ ಮಾಜಿ ಸದಸ್ಯ ಮಲ್ಲರಾಜಯ್ಯನಹುಂಡಿ ಗುರುಸ್ವಾಮಿ, ಯಡಿಯೂರಪ್ಪ ಅವರ ಸಂಬಂಧಿಯೂ ಆದ ಮೈಮುಲ್ ನಿರ್ದೇಶಕ ಎಸ್.ಸಿ. ಅಶೋಕ್, ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಪಕ್ಷದ ಹಿರಿಯ ಮುಖಂಡ ಕುಪ್ಪರವಳ್ಳಿ ಶಿವಣ್ಣ, ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಕೆ.ಎನ್. ಪುಟ್ಟಬುದ್ಧಿ ಪುತ್ರ ಶರತ್ ಪುಟ್ಟಬುದ್ಧಿ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ನಂದೀಶ್ ಹಂಚೆ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ಎಲ್.ಆರ್. ಮಹದೇವಸ್ವಾಮಿ ಅವರು ತಾಲೂಕು ಪಂಚಾಯಿತಿ ಅಧ್ಯಕ್ಷರಾಗಿ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾಗಿ ಪಕ್ಷ ಕಟ್ಟುವ ಕೆಲಸ ಮಾಡಿದ್ದಾರೆ. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ, ಕೋವಿಡ್–19 ಸಮಯದಲ್ಲಿ ಎದುರಾದ ಆರ್ಥಿಕ ಸಂಕಷ್ಟದಲ್ಲೂ ಸಂಪನ್ಮೂಲ ಕ್ರೋಢೀಕರಿಸಿಕೊಂಡು ಮೃಗಾಲಯದ ಪ್ರಾಣಿ–ಪಕ್ಷಿ ಸಂಕುಲ ಸಂರಕ್ಷಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ್ದರು. ಬಿ.ವೈ. ವಿಜಯೇಂದ್ರ ವರುಣಾದಲ್ಲಿ ಸ್ಪರ್ಧಿಸದಿದ್ದರೆ ಈ ಕ್ಷೇತ್ರಕ್ಕೆ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡುವುದೇ ಬಿಜೆಪಿ ವರಿಷ್ಠರಿಗೆ ತಲೆನೋವಾಗಿ ಪರಿಣಮಿಸಬಹುದು ಎಂಬ ಮಾತುಗಳು ಕೇಳಿಬಂದಿವೆ.

ಜೆಡಿಎಸ್‌ನಲ್ಲಿ ಟಿಕೆಟ್‌ಗಾಗಿ ಇಬ್ಬರು ಆಕಾಂಕ್ಷಿಗಳಿದ್ದಾರೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅಭಿಷೇಕ್ ಮತ್ತು ಅಹಿಂದ ಹೋರಾಟಗಾರ ಜವರಪ್ಪ ಆಕಾಂಕ್ಷಿಗಳಾಗಿದ್ದಾರೆ. ಮುಂದಿನ ಚುನಾವಣೆಯಲ್ಲೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ ಎಂದೇ ಹೇಳಲಾಗುತ್ತಿದೆ. ಈಗಾಗಲೇ ಪ್ರತಿಷ್ಠಿತ ಕ್ಷೇತ್ರ ಎಂದು ಹೆಸರು ಪಡೆದಿರುವ ಇಲ್ಲಿ ಸಿದ್ದರಾಮಯ್ಯ ಮತ್ತು ವಿಜಯೇಂದ್ರ ಸ್ಪರ್ಧೆಗಿಳಿದು ಬಿಟ್ಟರೆ ಈ ಕ್ಷೇತ್ರ, ರಾಜ್ಯ ಮಾತ್ರವಲ್ಲ ದೇಶದ ಗಮನವನ್ನೇ ಸೆಳೆಯಲಿದೆ.


ಸಿದ್ದರಾಮಯ್ಯ


ಯತೀಂದ್ರ ಸಿದ್ದರಾಮಯ್ಯ


ಬಿ.ವೈ.ವಿಜಯೇಂದ್ರ


ಎಲ್.ಆರ್.ಮಹದೇವಸ್ವಾಮಿ


ಕಾ.ಪು.ಸಿದ್ದಲಿಂಗಸ್ವಾಮಿ


ಮಂಗಳಾ



ಅಭಿಷೇಕ್


ಗುರುಸ್ವಾಮಿ


ಕುಪ್ಪರವಳ್ಳಿ ಶಿವಣ್ಣ


ನಂದೀಶ್


ಪ್ರತಾಪ್


ಸದಾನಂದ


ಶರತ್

ಕ್ರೆಡಲ್ ಅಧಿಕಾರಿ ದಿನೇಶ್‌ಕುಮಾರ್ ನಿಗೂಢ ಸಾವು ಪ್ರಕರಣ
ಎಫ್‌ಎಸ್‌ಎಲ್ ವರದಿಯ ನಿರೀಕ್ಷೆಯಲ್ಲಿ ಪೊಲೀಸರು



ಮೈಸೂರು, ಡಿ.17(ಆರ್‌ಕೆ)–ಕ್ರೆಡಲ್ ಅಧಿಕಾರಿ ಡಿ.ಕೆ. ದಿನೇಶ್ ಕುಮಾರ್ ನಿಗೂಢ ಸಾವಿನ ನಿಖರ ಕಾರಣ ತಿಳಿಯಲು ಸರಸ್ವತಿಪುರಂ ಠಾಣೆ ಪೊಲೀಸರು ಎಫ್‌ಎಸ್‌ಎಲ್ ಪರೀಕ್ಷಾ ವರದಿಯ ನಿರೀಕ್ಷೆಯಲ್ಲಿದ್ದಾರೆ.

ನವೆಂಬರ್ 28ರಂದು ಬೆಳಗ್ಗೆ ಅವರ ಪತ್ನಿ ಮತ್ತು ಪುತ್ರ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದಾಗಿ ದಿನೇಶ್‌ಕುಮಾರ್ ಅವರನ್ನು ಕಾಮಾಕ್ಷಿ ಆಸ್ಪತ್ರೆಗೆ ಕರೆತಂದಾಗ ವೈದ್ಯರು ಮೃತಪಟ್ಟಿರುವುದನ್ನು ದೃಢಪಡಿಸಿದ್ದರು. ಆದರೆ, ರಕ್ತಸ್ರಾವದೊಂದಿಗೆ ಮೃತದೇಹ ಊದಿಕೊಂಡಿದ್ದರಿಂದ ಅವರು ಒಂದೂವರೆ ದಿನದ ಹಿಂದೆಯೇ ಸಾವನ್ನಪ್ಪಿರಬಹುದೆಂದು ಶಂಕಿಸಲಾಗಿತ್ತು.

ಸಂಶಯಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದ ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಸಿ.ಎಂ. ರವೀಂದ್ರ, ಮರುದಿನ(ನ.29) ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ್ದರು. ನಂತರ ಎಫ್‌ಎಸ್‌ಎಲ್‌ಗೂ ಸ್ಯಾಂಪಲ್ ಕಳುಹಿಸಲಾಗಿತ್ತು. ಆದರೆ ಇನ್ನೂ ಎಫ್‌ಎಸ್‌ಎಲ್ ವರದಿ ಬಂದಿಲ್ಲ.



ಅದು ಕೈಸೇರಿದ ನಂತರವಷ್ಟೇ ಮರಣೋತ್ತರ ಪರೀಕ್ಷೆ ನಡೆಸಿರುವ ವೈದ್ಯರು ವರದಿ ನೀಡುವುದಾಗಿ ಹೇಳಿದ್ದಾರೆ. ನಂತರವಷ್ಟೇ ಡಿ.ಕೆ.ದಿನೇಶ್ ಕುಮಾರ್ ಸಾವಿನ ನಿಖರ ಕಾರಣ ಏನೆಂಬುದು ತಿಳಿಯುತ್ತದೆ ಎಂದು ತನಿಖಾಧಿಕಾರಿ ರವೀಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ತಾವು ಹಲವು ಬಾರಿ ವಿಚಾರಣೆ ಮಾಡಿದರೂ ಪತ್ನಿ ಮತ್ತು ಪುತ್ರ ಒಂದೇ ರೀತಿಯ ಹೇಳಿಕೆ ನೀಡಿದ್ದಾರೆ. ಅದು ಸಂಶಯಕ್ಕೆ ಕಾರಣವಾಗಿರುವುದರಿಂದ ಕೆ.ಆರ್.ಆಸ್ಪತ್ರೆ ಮಾನಸಿಕ ತಜ್ಞರು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಿಂದಲೂ ಆಪ್ತ ಸಮಾಲೋಚನೆ ನಡೆಸಿದೆಯಾದರೂ ಪ್ರಯೋಜನವಾಗಿಲ್ಲ ಎಂದು ತಿಳಿಸಿದರು. ಅದಕ್ಕಾಗಿಯೇ ನಾವು ತಾಂತ್ರಿಕ ಸಾಕ್ಷ್ಯಾಧಾರಗಳ ಮೊರೆ ಹೋಗಿದ್ದೇವೆ. ಎಫ್‌ಎಸ್‌ಎಲ್‌ನಿಂದ ವರದಿ ಬಂದರೆ ದಿನೇಶ್ ಕುಮಾರ್ ಸಾವಿನ ಕಾರಣ ತಿಳಿಯುತ್ತದೆ ಎಂದು ರವೀಂದ್ರ ತಿಳಿಸಿದರು.

ಅಕ್ರಮ ಸಂಬಂಧದ ಹಿನ್ನೆಲೆಯಲ್ಲಿ ತಮ್ಮನೊಂದಿಗೆ ಸೇರಿ ಪತ್ನಿ ಹತ್ಯೆಗೈದ ಪತಿ

ಬೆಳಕವಾಡಿ, ಡಿ.17–ಪರ ಪುರುಷನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಗೃಹಿಣಿಯನ್ನು ಪತಿ ಮತ್ತು ಮೈದುನ ನೀರಿನಲ್ಲಿ ಮುಳುಗಿಸಿ ಹತ್ಯೆ ಮಾಡಿದ್ದಲ್ಲದೇ, ಆಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಕಥೆ ಕಟ್ಟಿದ್ದ ಪ್ರಕರಣ ವರದಿಯಾಗಿದೆ. ಮಳವಳ್ಳಿ ತಾಲೂಕು ಬಿ.ಜಿ.ಮೋಳೆ ಗ್ರಾಮದ ಗೃಹಿಣಿ ಸುಮತಿ(38) ಹತ್ಯೆಗೀಡಾಗಿದ್ದು, ಈಕೆಯನ್ನು ಕೊಂದ ಪತಿ ಮಹದೇವಸ್ವಾಮಿ ಅಲಿಯಾಸ್ ಸ್ವಾಮಿ(45)ಯನ್ನು ಪೊಲೀಸರು ಬಂಧಿಸಿದ್ದು, ತಲೆಮರೆಸಿಕೊಂಡಿರುವ ಈತನ ಸಹೋದರ ರಾಚಶೆಟ್ಟಿ ಅಲಿಯಾಸ್ ರಾಚಯ್ಯನಿಗಾಗಿ ಹುಡುಕಾಟ ನಡೆಸಿದ್ದಾರೆ.

ವಿವರ: ಬಿ.ಜಿ.ಮೋಳೆ ಗ್ರಾಮದ ಸುಮತಿ ಡಿ.11ರಂದು ಸಂಜೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆಕೆಯ ಸಹೋದರಿ ತಿ.ನರಸೀಪುರ ತಾಲೂಕು ಹೊಸಹಳ್ಳಿ ಮೋಳೆ ನಿವಾಸಿ ಮಹದೇವಮ್ಮ ಎಂಬಾಕೆ ಡಿ.12ರಂದು ಬೆಳಗ್ಗೆ ಬೆಳಕವಾಡಿ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿದ್ದು, ಈ ವಿಚಾರ ಗ್ರಾಮಸ್ಥರ ಮೂಲಕ ನನಗೆ ಗೊತ್ತಾಗಿದೆ. ಆದರೆ ಆಕೆಯ ಗಂಡ ಕ್ಷುಲ್ಲಕ ಕಾರಣಗಳಿಗಾಗಿ ಪದೇ ಪದೆ ಹೊಡೆಯುತ್ತಿದ್ದ. ಹೀಗಾಗಿ ಸಹೋದರಿಯ ಸಾವಿನ ಬಗ್ಗೆ ಅನುಮಾನವಿದೆ ಎಂದು ತಿಳಿಸಿದ್ದಳು. ಈ ಹಿನ್ನೆಲೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡ ಸಬ್ ಇನ್ಸ್‌ಪೆಕ್ಟರ್ ವಿ.ಸಿ.ಅಶೋಕ, ಸುಮತಿಯ ಶವವನ್ನು ವಶಕ್ಕೆ ಪಡೆದು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಿದ್ದರು. ಅಲ್ಲದೇ ವಿಧಿ–ವಿಜ್ಞಾನ ವಿಭಾಗದ ವೈದ್ಯರು ಸಾವಿನ ನೈಜತೆ ಬಗ್ಗೆ ವರದಿ ನೀಡಬೇಕೆಂದು ಕೋರಿದ್ದರು.

ಕೆಲ ದಿನಗಳ ನಂತರ ಮರಣೋತ್ತರ ಪರೀಕ್ಷೆಯ ವರದಿ ನೀಡಿದ ವೈದ್ಯರು, ಸುಮತಿಯ ಸಾವು ನೀರಿನಲ್ಲಿ ಮುಳುಗಿ ಉಸಿರುಗಟ್ಟಿರುವುದರಿಂದ ಸಂಭವಿಸಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವರದಿ ನೀಡಿದ್ದರು. ಈ ವರದಿಯನ್ನಾಧರಿಸಿ ಡಿ.15ರಂದು ಸ್ವಯಂಪ್ರೇರಿತರಾಗಿ ಕೊಲೆ ಹಾಗೂ ಸಾಕ್ಷ್ಯ ನಾಶ ಪ್ರಕರಣ ದಾಖಲಿಸಿಕೊಂಡ ಸಬ್ ಇನ್ಸ್‌ಪೆಕ್ಟರ್ ಸಿ.ವಿ. ಆನಂದ ಅವರು, ಸುಮತಿಯ ಪತಿ ಮಹದೇವಸ್ವಾಮಿ ಅಲಿಯಾಸ್ ಸ್ವಾಮಿಯನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಆತ, ತನ್ನ ಪತ್ನಿ ತಮ್ಮದೇ ಗ್ರಾಮದ ಬಸಯ್ಯ ಎಂಬಾತನ ಜೊತೆ ಅಕ್ರಮ ಸಂಬಂಧ ಹೊಂದಿದ್ದಾಳೆ ಎಂದು ಗ್ರಾಮಸ್ಥರು ಮಾತನಾಡಿಕೊಳ್ಳುತ್ತಿದ್ದರು. ಡಿ.11ರಂದು ಆಡುಗಳನ್ನು ಮೇಯಿಸುವ ನೆಪದಲ್ಲಿ ಪತ್ನಿ ಹೊಲದ ಕಡೆ ಹೋದಾಗ ತಾನೂ ಹಾಗೂ ಸಹೋದರ ರಾಚಶೆಟ್ಟಿ ಹೊಲಕ್ಕೆ ಹೋಗಿ ನೋಡಿದಾಗ ಬಸಯ್ಯನ ಜೊತೆ ಸುಮತಿ ಸರಸ–ಸಲ್ಲಾಪದಲ್ಲಿ ತೊಡಗಿದ್ದು ಕಂಡು ಬಂತು. ನಮ್ಮನ್ನು ನೋಡಿ ಬಸಯ್ಯ ಓಡಿ ಹೋಗಿದ್ದು, ತಾನು ಹಾಗೂ ಸಹೋದರ ರಾಚಶೆಟ್ಟಿ ಸುಮತಿಯನ್ನು ಎಳೆತಂದು ಹೊಲದಲ್ಲಿದ್ದ ಡ್ರಮ್‌ನ ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿದ್ದು, ನಂತರ ಆಕೆಯ ಸೀರೆಯನ್ನು ಕುತ್ತಿಗೆಗೆ ಬಿಗಿದು ಶವವನ್ನು ಗ್ರಾಮಕ್ಕೆ ತಂದು ಪತ್ನಿ ನೇಣು ಹಾಕಿಕೊಂಡು ಸತ್ತಿದ್ದಾಳೆ ಎಂದು ಗ್ರಾಮಸ್ಥರಿಗೆ ತಿಳಿಸಿದ್ದಾಗಿ ಹೇಳಿಕೆ ನೀಡಿದ್ದಾನೆ. ಈ ಹಿನ್ನೆಲೆಯಲ್ಲಿ ಮಹದೇವಸ್ವಾಮಿಯನ್ನು ಬಂಧಿಸಿದ ಸಬ್ ಇನ್ಸ್‌ಪೆಕ್ಟರ್, ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ತಲೆಮರೆಸಿಕೊಂಡಿರುವ ರಾಚಶೆಟ್ಟಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ವಾಯುವಿಹಾರದಲ್ಲಿದ್ದ ಮಹಿಳೆ ಸರ ಕಳವು

ಬೆಳಕವಾಡಿ, ಡಿ.17–ವಾಯುವಿಹಾರಕ್ಕೆ ತೆರಳಿದ್ದ ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮಳವಳ್ಳಿ ತಾಲೂಕು ನೆಟ್ಕಲ್ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಗೃಹಿಣಿ ಚೆನ್ನಾಜಮ್ಮ(65) ಸರ ಕಳೆದುಕೊಂಡವರಾಗಿದ್ದು, ಇವರು ಡಿ.14ರಂದು ಬೆಳಗ್ಗೆ 9.45ರ ಸುಮಾರಿನಲ್ಲಿ ತಮ್ಮ ಮನೆಯಿಂದ ಶಿಂಷಾ ರಸ್ತೆಯಲ್ಲಿ ವಾಯುವಿಹಾರ ನಡೆಸುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಇವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ವೇಳೆ ಚೆನ್ನಾಜಮ್ಮ ಸರವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರಿಂದ ಅದು ತುಂಡಾಗಿ 15 ಗ್ರಾಂ ಅಷ್ಟೇ ಖದೀಮರ ಪಾಲಾಗಿದೆ. ಈ ಸಂಬಂಧ ಬೆಳಕವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2024ರ ಅಂತ್ಯಕ್ಕೆ ದೇಶದ ರಸ್ತೆಗಳು ಅಮೆರಿಕ ರಸ್ತೆಗಳಂತೆ ಕಂಗೊಳಿಸುತ್ತವೆ

ನವದೆಹಲಿ, ಡಿ.17–2024ರ ಅಂತ್ಯದ ವೇಳೆಗೆ ದೇಶದ ರಸ್ತೆ ಗುಣಮಟ್ಟವು ಅಮೆರಿಕದ ರಸ್ತೆಗೆ ಸಮನಾಗಿರುತ್ತದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದರು. 95ನೇ ಎಫ್‌ಐಸಿಸಿಐ ವಾರ್ಷಿಕ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ನಾವು ದೇಶದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ರಸ್ತೆಯನ್ನು ಮಾಡುತ್ತಿದ್ದೇವೆ. 2024ರ ಅಂತ್ಯದ ವೇಳೆಗೆ ನಮ್ಮ ರಸ್ತೆ ಮೂಲ ಸೌಕರ್ಯವು ಅಮೆರಿಕ, ಇಂಗ್ಲೆಂಡ್‌ಗೆ ಸಮನಾಗಿರುತ್ತದೆ ಎಂದು ಭರವಸೆ ನೀಡಿದರು.



ಖಾಸಗಿ ಸಂಸ್ಥೆಗಳಿಂದ ಮತದಾರರ ಮಾಹಿತಿ ಸಂಗ್ರಹಕ್ಕೆ ಚುನಾವಣಾ ಆಯೋಗ ನಿಷೇಧ

ಬೆಂಗಳೂರು, ಡಿ.17– ರಾಜ್ಯದಲ್ಲಿ ಯಾವುದೇ ಖಾಸಗಿ ಸಂಸ್ಥೆಗಳು ಇನ್ನು ಮುಂದೆ ಮತದಾರರ ಮಾಹಿತಿ ಸಂಗ್ರಹಿಸದಂತೆ ಕ್ರಮ ಕೈಗೊಳ್ಳುವಂತೆ ಭಾರತ ಚುನಾವಣಾ ಆಯೋಗ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸಿದೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ಈ ಸಂಬಂಧ ಎಲ್ಲಾ ಅಧಿಕಾರಿಗಳಿಗೂ ನಿರ್ದೇಶನ ನೀಡಿದ್ದಾರೆ.

ಖಾಸಗಿ ಸಂಸ್ಥೆಗಳು ಮನೆ–ಮನೆ ಸಮೀಕ್ಷೆ ಅಥವಾ ನಕಲಿ ಗುರುತಿನ ಚೀಟಿಗಳ ಮೂಲಕ ಮಾಹಿತಿ ಸಂಗ್ರಹಿಸುವ ಯಾವುದೇ ಪ್ರಯತ್ನವನ್ನು ಅನುಮತಿಸಲಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಯಾವುದೇ ಖಾಸಗಿ ಸಂಸ್ಥೆಗಳಿಗೆ ಡಿಇಒಗಳು ಅಥವಾ ಇಆರ್‌ಒಗಳಿಂದ ದೃಢೀಕರಣ ಅಥವಾ ನಿರಾಕ್ಷೇಪಣಾ ಪ್ರಮಾಣಪತ್ರ ನೀಡುವ ಮೂಲಕ ಮತದಾರರ ಡೇಟಾ ಸಂಗ್ರಹಣೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೆಲವು ಜಿಲ್ಲೆಗಳಲ್ಲಿ ಕೆಲವು ಖಾಸಗಿ ಸಂಸ್ಥೆಗಳು ಮತದಾರರ ಮನೆಗಳಿಗೆ ತೆರಳಿ ಅರ್ಜಿಗಳ ಮೂಲಕ ಮತದಾರರ ವೈಯಕ್ತಿಕ ಮಾಹಿತಿ ಕೇಳುತ್ತಿರುವ ಬಗ್ಗೆ ದೂರುಗಳು ಬಂದಿವೆ ಎಂದು ಕೆಲವು ಮಾಧ್ಯಮಗಳಲ್ಲಿ ವರದಿಯಾಗಿದ್ದು, ಈ ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆಗಳು ಮತದಾರರ ಮಾಹಿತಿ ಸಂಗ್ರಹಣೆ ಮಾಡುವುದರ ಮೇಲೆ ನಿಷೇಧ ಹೇರಲಾಗಿದೆ ಎಂದಿದ್ದಾರೆ.

ಜ.1ರವರೆಗೆ ದಸರಾ ವಸ್ತುಪ್ರದರ್ಶನ ವಿಸ್ತರಣೆ

ಮೈಸೂರು, ಡಿ.17–ದಸರಾ ವಸ್ತುಪ್ರದರ್ಶನವನ್ನು ಬರುವ ಜನವರಿ 1ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ತಿಳಿಸಿದ್ದಾರೆ. ವಸ್ತುಪ್ರದರ್ಶನ ಡಿ.24ಕ್ಕೆ ಅಂತ್ಯಗೊಳ್ಳಬೇಕಿತ್ತು. ಆದರೆ ವಾಣಿಜ್ಯ ವಲಯ ಹಾಗೂ ಸಾರ್ವಜನಿಕರ ಒತ್ತಾಯದ ಮೇರೆಗೆ ಸರ್ಕಾರ ಜನವರಿ 1ರವರೆಗೆ ವಿಸ್ತರಿಸಿದೆ. ಜನರಿಗೆ ಮನರಂಜನೆ ಮತ್ತು ಅರಿವು ಮೂಡಿಸುವಂತಹ ಕಾರ್ಯ ಯೋಜನೆ ಮುಂದುವರೆಯಲಿದೆ. ಅಲ್ಲದೇ ಪ್ರತಿನಿತ್ಯ ಒಂದಲ್ಲಾ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಗೌಡರು ಹೇಳಿದ್ದಾರೆ.

ಲಾಭದಾಯಕ ಉದ್ದಿಮೆಗಳು ಕಾರ್ಪೊರೇಟ್ ಕಂಪನಿ ಮಡಿಲಿಗೆ: ಎಐಯುಟಿಯುಸಿ ರಾಜ್ಯಾಧ್ಯಕ್ಷರ ಆರೋಪ





ಮೈಸೂರು,ಡಿ.17(ಎಂಟಿವೈ)– ಲಾಭದಾಯಕವಾಗಿ ನಡೆಯುತ್ತಿರುವ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ಹಾಗೂ ಕಾರ್ಪೊರೇಟ್ ಕಂಪನಿಗಳ ಮಡಿಲಿಗೆ ಹಾಕಿ ದೇಶದ ಬಡ ಜನರನ್ನು ಮತ್ತಷ್ಟು ದಾರಿದ್ರ್ಯಕ್ಕೆ ತಳ್ಳಲಾಗುತ್ತಿದೆ ಎಂದು ಎಐಯುಟಿಯುಸಿ ರಾಜ್ಯ ಅಧ್ಯಕ್ಷ ಕೆ.ಸೋಮಶೇಖರ್ ಆರೋಪಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಎಐಯುಟಿಯುಸಿ ಸಂಯೋಜಿತ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ ವತಿಯಿಂದ ಹಾಸ್ಟೆಲ್ ಹೊರಗುತ್ತಿಗೆ ಕಾರ್ಮಿಕರ ಪ್ರಥಮ ರಾಜ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಫಿಕ್ಸೆಡ್ ಟರ್ಮ್ ಎಂಪ್ಲಾಯ್ಮೆಂಟ್ ಜಾರಿ ಮೂಲಕ ಕಾಯಂ ಹುದ್ದೆಗಳನ್ನು ನಾಶ ಮಾಡಲಾಗುತ್ತಿದೆ. ದೇಶದ ಜನರ ತೆರಿಗೆ ಹಣದಿಂದ ಕಟ್ಟಿದ್ದ ಎಲ್ಲ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ಮಾರಾಟ ಮಾಡಲಾಗುತ್ತಿದೆ. ಎಲ್ಲ ಹುದ್ದೆಗಳನ್ನು ಗುತ್ತಿಗೆ ಮತ್ತು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳುವ ಮೂಲಕ ಪುಡಿಗಾಸಿಗೆ ಕಾರ್ಮಿಕರನ್ನು ಶೋಷಣೆ ಮಾಡಲಾಗುತ್ತಿದೆ. ಇಂತಹ ಶೋಷಣೆಯ ವಿರುದ್ಧ ಸಂಘಟಿತ ಹೋರಾಟದ ಮೂಲಕ ಶೋಷಣಾರಹಿತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಕಿಡಿಕಾರಿದರು.

ಬ್ರಿಟಿಷ್ ವಸಾಹತುಶಾಹಿಯ ದಬ್ಬಾಳಿಕೆಯನ್ನು ಕೊನೆಗಾಣಿಸಬೇಕು. ದುಡಿಯುವ ವರ್ಗದ ಪರವಾದ ಸಮಾಜವಾದಿ ವ್ಯವಸ್ಥೆಯ ಸ್ಥಾಪನೆ ಮಾಡಬೇಕೆಂಬುದು ಸ್ವಾತಂತ್ರ್ಯ ಹೋರಾಟಗಾರರ, ಮಹಾನ್ ಕ್ರಾಂತಿಕಾರಿಗಳ ಕನಸಾಗಿತ್ತು. ಆದರೆ, ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳು ಬಂಡವಾಳಶಾಹಿ ಪರವಾದ ಆಡಳಿತ ನಡೆಸುತ್ತಿವೆ. ಇದರಿಂದಾಗಿ ಇಲ್ಲಿಯವರೆಗೂ ಕಾರ್ಮಿಕರು ಹೋರಾಟದ ಮೂಲಕ ಗಳಿಸಿದ್ದ ಕಾರ್ಮಿಕರ ಪರವಾಗಿದ್ದ ಕಾನೂನುಗಳಿಗೆ ತಿದ್ದುಪಡಿ ತಂದು ಮೂಲಕ ದುಡಿಯುವ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ. ಸರ್ಕಾರಗಳು ಕಾರ್ಮಿಕರ ಮೇಲೆ ಹೇರುತ್ತಿರುವ ಕಾರ್ಮಿಕ ವಿರೋಧಿ, ಜನ ವಿರೋಧಿ ನೀತಿಗಳನ್ನು ಅರ್ಥ ಮಾಡಿಕೊಂಡು ಅವುಗಳ ವಿರುದ್ಧ ಹೋರಾಟ ಮಾಡಬೇಕು ಎಂದರು.

ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ ಅಧ್ಯಕ್ಷ ಸೋಮಶೇಖರ್ ಯಾದಗಿರಿ ಮಾತನಾಡಿ, 20 ವರ್ಷಕ್ಕೂ ಹಿಂದೆ ಕೈ ರಸೀದಿಯ ಮೂಲಕ ಮಾಸಿಕ 200 ರೂ, 300 ರೂ.ಇದ್ದ ವೇತನವನ್ನು ಸಂಘಟಿತ ಹೋರಾಟದ ಫಲವಾಗಿ ಸರ್ಕಾರದ ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ವೇತನ ಪಡೆಯಲಾಗುತ್ತಿದೆ. ಆದರೂ, ಇಂದಿನ ಬೆಲೆ ಏರಿಕೆ ದಿನದಲ್ಲಿ ಈ ವೇತನ ಸಾಕಾಗುತ್ತಿಲ್ಲ. ಆದ್ದರಿಂದ ಮಾಸಿಕ ವೇತನ ಪರಿಷ್ಕರಿಸಿ, 35,950 ರೂ. ನಿಗದಿಪಡಿಸಬೇಕು. ಗುತ್ತಿಗೆ ಪದ್ಧತಿ ರದ್ದು ಪಡಿಸಿ ಹಲವು ವರ್ಷಗಳಿಂದ ಸೇವೆಯಲ್ಲಿರುವ ಕಾರ್ಮಿಕರ ಸೇವೆಯನ್ನು ಕಾಯಂ ಮಾಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು. ಸಮಾವೇಶದಲ್ಲಿ ರಾಜ್ಯ ಉಪಾಧ್ಯಕ್ಷರಾದ ಹೆಚ್.ಟಿ.ಮಲ್ಲಿಕಾರ್ಜುನ್ ಯಶೋಧರ್, ರಾಜ್ಯ ಕಾರ್ಯದರ್ಶಿ ಕೆ.ವಿ.ಭಟ್, ರಾಜ್ಯ ಸಮಿತಿ ಸದಸ್ಯರಾದ ಚಂದ್ರಶೇಖರ್ ಮೇಟಿ, ಗಂಗಾಧರ್ ಬಡಿಗೇರ್, ರಾಘವೇಂದ್ರ ಎಂ.ಜಿ, ಮಹೇಶ್ ನಾಡಗೌಡ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಮೆರವಣಿಗೆ: ಸಮ್ಮೇಳನದ ಅಂಗವಾಗಿ ಮೆರವಣಿಗೆ ನಡೆಯಿತು. ನಂಜರಾಜ ಬಹದ್ದೂರ್ ಛತ್ರದಿಂದ ನಾರಾಯಣ ಶಾಸ್ತ್ರಿ ರಸ್ತೆ ಮೂಲಕ ಸಾಗಿದ ಮೆರವಣಿಗೆಯು ರಾಮಸ್ವಾಮಿ ವೃತ್ತದ ಮಾರ್ಗವಾಗಿ ಮಹಾರಾಜ ಕಾಲೇಜು ಶತಮಾನೋತ್ಸವ ಭವನಕ್ಕೆ ತಲುಪಿತು. ಸಹಸ್ರಾರು ಕಾರ್ಮಿಕರು ಕೆಂಪು ಬಾವುಟ, ಬೇಡಿಕೆಗಳ ಫಲಕಗಳನ್ನು ಕೈಯಲ್ಲಿ ಹಿಡಿದು ಘೋಷಣೆ ಕೂಗುತ್ತ ಗಮನ ಸೆಳೆದರು.

ಒಂದನೇ ಪುಟದಿಂದ

ಬರೀ ಮೇಲಾಟಕ್ಕೆ ವೇದಿಕೆಯಾಗುವ ಸಾಧ್ಯತೆ

ಚಾಲನೆ ನೀಡಲು ಉಭಯ ಸದನಗಳಲ್ಲಿ ಒಂಭತ್ತು ಮಸೂದೆಗಳನ್ನು ಮಂಡಿಸಿ, ಅನುಮೋದನೆ ಪಡೆಯಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಸಿದ್ಧವಾಗಿದೆ. ವೋಟರ್ ಐಡಿ ಹಗರಣ,ಮತದಾರರ ಪಟ್ಟಿ ಪರಿಷ್ಕರಣೆಯ ನೆಪದಲ್ಲಿ ದೊಡ್ಡ ಸಂಖ್ಯೆಯ ಮತದಾರರನ್ನು ಪಟ್ಟಿಯಿಂದ ಕೈ ಬಿಟ್ಟಿರುವುದು ಸೇರಿದಂತೆ ಹಲವು ವಿಷಯಗಳು ಸರ್ಕಾರದ ವಿರುದ್ಧ ಪ್ರತಿಪಕ್ಷಗಳು ಬಾಣ ಪ್ರಯೋಗಿಸಲು ಅಸ್ತ್ರವಾಗಲಿವೆ. ಚಿಲುಮೆ ಸಂಸ್ಥೆಯ ಮೂಲಕ ನಡೆದ ಈ ಹಗರಣದಲ್ಲಿ ಹಲವು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆಯಾದರೂ, ಇದರ ಹಿಂದೆ ಸರ್ಕಾರದಲ್ಲಿರುವ ಪ್ರಮುಖ ಸಚಿವರೊಬ್ಬರೇ ಭಾಗೀದಾರರು ಎಂದು ಪ್ರತಿಪಕ್ಷಗಳು ಸರ್ಕಾರದ ಮೇಲೆರಗಲಿವೆ. ಇದೇ ರೀತಿ ಮಂಗಳೂರಿನಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಭಯೋತ್ಪಾದಕನನ್ನು ಸೃಷ್ಟಿಸಿದ್ದು ಬಿಜೆಪಿಯ ಷಡ್ಯಂತ್ರ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾಡಿದ ಆರೋಪ ಆಡಳಿತಾರೂಢ ಬಿಜೆಪಿಗೆ ಪ್ರಬಲ ಅಸ್ತ್ರವಾಗಿ ದಕ್ಕಿದೆ. ಈ ಮಧ್ಯೆ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ನ್ಯಾಯಯುತ ಬೆಲೆ ನೀಡುತ್ತಿಲ್ಲ ಎಂಬ ವಿಷಯವನ್ನು ಹಿಡಿದುಕೊಂಡು ಪ್ರತಿಪಕ್ಷಗಳು ಸರ್ಕಾರದ ಮೇಲೆರಗಲಿವೆ. ಕರ್ನಾಟಕ–ಮಹಾರಾಷ್ಟ್ರದ ನಡುವೆ ಭುಗಿಲೆದ್ದಿರುವ ಗಡಿ ವಿವಾದದ ಬಗ್ಗೆ ಉಭಯ ರಾಜ್ಯಗಳ ನಾಯಕರ ಜತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚರ್ಚಿಸಿದ್ದು, ಈ ಹಿನ್ನೆಲೆಯಲ್ಲಿ ಸದರಿ ವಿವಾದ ತಾತ್ಕಾಲಿಕವಾಗಿ ತಣ್ಣಗಾಗಿದೆಯಾದರೂ,ಅಧಿವೇಶನದ ಮೂಲಕ ಗಡಿ ವಿವಾದ ಕೆದಕುತ್ತಿರುವ ಮಹಾರಾಷ್ಟ್ರಕ್ಕೆ ಎಚ್ಚರಿಕೆಯ ಸಂದೇಶ ರವಾನೆ ಆಗಲಿದೆ ಎಂಬುದು ಮೂಲಗಳ ಹೇಳಿಕೆ.

ಈ ಮಧ್ಯೆ ಭಾವನಾತ್ಮಕ ವಿಷಯಗಳನ್ನು ಎತ್ತಿಕೊಂಡು ಬಿಜೆಪಿ ರೂಪಿಸುತ್ತಿರುವ ಹೋರಾಟಗಳ ಬಗ್ಗೆ ಪ್ರತಿಪಕ್ಷ ಕಾಂಗ್ರೆಸ್ ತಕರಾರು ಮಾಡುವುದು ನಿಚ್ಚಳವಾಗಿದೆ.

ಹಿಂದುತ್ವದ ಹೆಸರಿನಲ್ಲಿ ಜನರನ್ನು ಒಡೆಯುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ.ಇದು ಸರಿಯಲ್ಲ ಎಂದು ಆಡಳಿತಾರೂಢ ಪಕ್ಷದ ಮೇಲೆ ಧಾಳಿ ಮಾಡುವ ಅವಕಾಶವನ್ನು ಕಳೆದುಕೊಳ್ಳಲು ಕಾಂಗ್ರೆಸ್ ಪಕ್ಷ ಬಯಸುವುದಿಲ್ಲ.

ಈ ಮಧ್ಯೆ ಸರ್ಕಾರದ ವಿರುದ್ಧ ಕೇಳಿ ಬರುತ್ತಿರುವ ಭ್ರಷ್ಟಾಚಾರದ ಆರೋಪಗಳನ್ನು ಪ್ರತಿಪಕ್ಷಗಳು ಎತ್ತಿ ಹಿಡಿದು ಹೋರಾಡುವುದು ಬಹುತೇಕ ಖಚಿತ. ಇದೇ ರೀತಿ ಉತ್ತರ ಕರ್ನಾಟಕ ಭಾಗದಲ್ಲಿ ಅಧಿವೇಶನ ನಡೆಯುತ್ತಿರುವುದರಿಂದ ಆ ಭಾಗದ ಮತದಾರರ ಮೇಲೆ ಪ್ರಭಾವ ಬೀರುವ,ಮುಂದಿನ ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳುವ ಉದ್ದೇಶ ಎಲ್ಲ ರಾಜಕೀಯ ಪಕ್ಷಗಳಿಗೂ ಇರುವುದು ಸ್ಪಷ್ಟವಾ ಗಿದ್ದು,ಇದು ಕೂಡಾ ಹಲವು ವಿಷಯಗಳಲ್ಲಿ ಪರಸ್ಪರ ಮೇಲಾಟ ನಡೆಸಲು ಕಾರಣವಾಗಲಿದೆ. ಇನ್ನು ಮೇಕೆದಾಟು ಅಣೆಕಟ್ಟು ಯೋಜನೆ, ಮಹದಾಯಿ ಯೋಜನೆಗಳ ಜಾರಿಯಲ್ಲಿ ಆಗುತ್ತಿರುವ ವಿಳಂಬ ಪ್ರತಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದ್ದು,ಡಬಲ್ ಎಂಜಿನ್ ಸರ್ಕಾರವಿದ್ದರೂ ಏಕೆ ಈ ವಿಷಯದಲ್ಲಿ ಸರ್ಕಾರ ರಾಜ್ಯದ ಹಿತ ಕಾಪಾಡಿಲ್ಲ ಎಂಬ ಕೂಗು ಪ್ರತಿಪಕ್ಷಗಳಿಂದ ಕೇಳಲಿದೆ.

ರಾಮನಗರ ಜೆಡಿಎಸ್ ಅಭ್ಯರ್ಥಿ

ಕನಸಿನಲ್ಲೂ ಯೋಚನೆ ಮಾಡಿರಲಿಲ್ಲ: ತಾಯಿ ಇದ್ದಕ್ಕಿದ್ದಂತೆ ಘೋಷಣೆ ಮಾಡಿದ್ದಾರೆ. ನಾನು ಕನಸಿನಲ್ಲೂ ಯೋಚನೆ ಮಾಡಿರಲಿಲ್ಲ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ತಾಯಿ ಅನಿತಾ ಅವರು ತಮ್ಮ ಹೆಸರನ್ನು ಘೋಷಣೆ ಮಾಡಿದ ಬಳಿಕ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ತಾಯಿ ಬಹಳ ದೊಡ್ಡ ಜವಾಬ್ದಾರಿ ನೀಡಿದ್ದಾರೆ. ಇವತ್ತಿಗೂ ನನ್ನ ಅಭಿಪ್ರಾಯದಲ್ಲಿ ರಾಮನಗರಕ್ಕೆ ಸೂಕ್ತ ಅಭ್ಯರ್ಥಿ ಅಂದರೆ ಅದು ಕುಮಾರಣ್ಣ. ನಮ್ಮ ತಂದೆ ಜನತೆ ಪರವಾಗಿ ಧ್ವನಿ ಎತ್ತಿ ಕೆಲಸ ಮಾಡಿದ್ದಾರೆ ಎಂದು ಹೇಳಿ ಅವರು ಗದ್ಗದಿತರಾದರು. ಹಿಂದೆ ದೇವೇಗೌಡರ ಪರವಾಗಿ ನಿಂತಿದ್ದೀರಿ. ನಂತರ ಎರಡು ಬಾರಿ ಕುಮಾರಸ್ವಾಮಿ ಪರ ನಿಂತಿದ್ದೀರಿ. ಕುಮಾರಣ್ಣನನ್ನು ರಾಜಕೀಯವಾಗಿ ಬೆಳೆಸಿದ್ದೀರಿ. ಈಗ ತಾಯಿ ಬಹಳ ದೊಡ್ಡ ಜವಾಬ್ದಾರಿ ನೀಡಿದ್ದಾರೆ. ನನಗೆ ನಿಮ್ಮ ಸೇವೆ ಮಾಡಲು ಅವಕಾಶ ನೀಡಿ ಎಂದು ರಾಮನಗರ ಜನತೆಗೆ ಮನವಿ ಮಾಡಿದರು.

ಫಿಫಾ ಫುಟ್‌ಬಾಲ್ ವಿಶ್ವಕಪ್ ಫೈನಲ್

ಇದು ತನ್ನ ಕೊನೆ ವಿಶ್ವಕಪ್ ಪಂದ್ಯ ಎಂದು ಅರ್ಜೆಂಟೀನಾದ ಸ್ಟಾರ್ ಆಟಗಾರ ಲಿಯೋನಲ್ ಮೆಸ್ಸಿ ಈಗಾಗಲೇ ಘೋಷಿಸಿದ್ದು, ಅರ್ಜೆಂಟೀನಾ ಟ್ರೋಫಿಗಾಗಿ ಕಠಿಣ ಪ್ರಯತ್ನ ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ. ಮೇಲಾಗಿ ಹಿಂದಿನ ದಾಖಲೆಗಳೂ ಆ ತಂಡದ ಪರವಾಗಿವೆ. ಇದುವರೆಗೆ ಫ್ರಾನ್ಸ್ ವಿರುದ್ಧದ ಮುಖಾಮುಖಿಯಲ್ಲಿ ಅರ್ಜೆಂಟೀನಾ ಮೇಲುಗೈ ಸಾಧಿಸಿದೆ.

12 ಬಾರಿ ಮುಖಾಮುಖಿ: ಅರ್ಜೆಂಟೀನಾ ಮತ್ತು ಫ್ರಾನ್ಸ್ ಇದುವರೆಗೆ 12 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಇದರಲ್ಲಿ ಅರ್ಜೆಂಟೀನಾ 6 ಪಂದ್ಯಗಳನ್ನು ಗೆದ್ದಿದೆ. ಫ್ರಾನ್ಸ್ ಮೂರರಲ್ಲಿ ಗೆದ್ದರೆ, ಉಳಿದ ಮೂರು ಡ್ರಾದಲ್ಲಿ ಕೊನೆಗೊಂಡಿತು. ಈ ಎರಡು ತಂಡಗಳು ಇಲ್ಲಿಯವರೆಗೆ ಫಿಫಾ ವಿಶ್ವಕಪ್‌ನಲ್ಲಿ ಮೂರು ಬಾರಿ ಆಡಿವೆ. ಅರ್ಜೆಂಟೀನಾ ಎರಡು ಗೆಲುವುಗಳನ್ನು ಪಡೆದಿದೆ.

ಅರ್ಜೆಂಟೀನಾ 1930ರಲ್ಲಿ ಒಮ್ಮೆ 1–0 ಮತ್ತು 1978ರಲ್ಲಿ 2–1ರಲ್ಲಿ ಫ್ರಾನ್ಸ್ ಅನ್ನು ಸೋಲಿಸಿತು. ಆದರೆ 2018ರ ವಿಶ್ವಕಪ್‌ನಲ್ಲಿ ಕೊನೆಯ ಬಾರಿಗೆ ಈ ಎರಡು ತಂಡಗಳು ಮುಖಾಮುಖಿಯಾದಾಗ ಫ್ರಾನ್ಸ್ ಅರ್ಜೆಂಟೀನಾವನ್ನು 4–3 ಅಂತರದಿಂದ ಸೋಲಿಸಿತ್ತು. ಇದು ಫೈನಲ್‌ಗೂ ಮುನ್ನ ಫ್ರಾನ್ಸ್‌ಗೆ ಕೊಂಚ ಸಮಾಧಾನ ತಂದಿದೆ.

ಅದ್ಧೂರಿ ಸಮಾರಂಭ: ಫೈನಲ್ ಪಂದ್ಯಕ್ಕೂ ಮುನ್ನಾ ಲುಸೇಲ್ ಸ್ಟೇಡಿಯಂನಲ್ಲಿ ಅದ್ಧೂರಿ ಸಮಾರೋಪ ಸಮಾರಂಭ ನಡೆಯಲಿದ್ದು, ಹಲವು ಸೆಲೆಬ್ರಿಟಿಗಳು ಪ್ರೇಕ್ಷಕರನ್ನು ರಂಜಿಸಲಿದ್ದಾರೆ. ಸೌಂಡ್‌ಟ್ರ್ಯಾಕ್ ತಾರೆಗಳಾದ ಡೇವಿಡೋ ಮತ್ತು ಆಯೇಶಾ, ಓಝುನಾ ಮತ್ತು ಗಿಮ್ಸ್, ನೋರಾ ಫತೇಹಿ, ಬಾಲ್ಕೀಸ್, ರಹ್ಮಾ ರಿಯಾಡ್ ಮತ್ತು ಮನಲ್ ಲೈವ್ ಪ್ರದರ್ಶನ ನೀಡಿ ಪ್ರೇಕ್ಷಕರನ್ನು ರಂಜಿಸಲಿದ್ದಾರೆ.

ಭಾರೀ ಬಹುಮಾನ: ಪಂದ್ಯಾವಳಿಯ ಚಾಂಪಿಯನ್ ತಂಡ 42 ಮಿಲಿಯನ್ ಹಾಗೂ ಟ್ರೋಫಿ ತನ್ನದಾಗಿಸಿಕೊಂಡರೇ, ರನ್ನರ್ ಅಪ್ ತಂಡ 30 ಮಿಲಿಯನ್, 3ನೇ ಸ್ಥಾನ ಪಡೆಯುವ ತಂಡ 27 ಮಿಲಿಯನ್ ಹಾಗೂ 4ನೇ ಸ್ಥಾನ ಪಡೆಯುವ ತಂಡ 25 ಮಿಲಿಯನ್ ಹಣವನ್ನು ಬಹುಮಾನವಾಗಿ ಪಡೆಯಲಿವೆ. ಒಟ್ಟಾರೆ ನಾಳಿನ ಪಂದ್ಯ ಲಯೊನಲ್ ಮೆಸ್ಸಿ ಹಾಗೂ ಕಿಲಿಯನ್ ಎಂಬಾಪೆ ನಡುವಿನ ಕದನವಾಗಿದ್ದು, ಇವರಿಬ್ಬರ ಕಾಲ್ಚಳಕ ಕಣ್ತುಂಬಿಗೊಳ್ಳಲು ಕ್ರೀಡಾಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ.

ಲಿಂಗಾಯತ ಪ್ರಥಮ ಮಹಾ ಅಧಿವೇಶನ

ಸೇವಕನಾಗುತ್ತೇನೆ. ಆದರೆ ಅವರು ಬೃಹತ್ ಆಸ್ಪತ್ರೆ ನಿರ್ಮಾಣಕ್ಕೆ ರಾಜಕಾಲುವೆ ಒತ್ತುವರಿ ಮಾಡಿಕೊಂಡು ಅದರ ನೀರನ್ನೇ ಕುಡಿದಿದ್ದಾರೆ. ಇಂತಹ ನೂರಾರು ಪ್ರಕರಣಗಳನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ ಎಂದರು.

2 ಲಕ್ಷ ಜನರ ನಿರೀಕ್ಷೆ: ಲಿಂಗಾಯತ ಮಹಾಸಭಾ ಬೀದರ್ ಜಿಲ್ಲಾಧ್ಯಕ್ಷ ಬಸವರಾಜ ದನ್ನೂರು ಮಾತನಾಡಿ, ಬೀದರ್ ಜಿಲ್ಲೆಯಿಂದಲೇ 2017ರಲ್ಲಿ ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟ ಆರಂಭವಾಗಿ ರಾಷ್ಟ್ರಾದ್ಯಂತ ಸಂಚಲನವಾಗಿತ್ತು. ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೇಂದ್ರಕ್ಕೆ ಶಿಫಾರಸು ಮಾಡಿದರಾದರೂ ಸ್ವತಂತ್ರ ಧರ್ಮದ ಸಾಂವಿಧಾನಿಕ ಮಾನ್ಯತೆ ಸಿಕ್ಕಿಲ್ಲ. ಇದೀಗ ಬಸವಕಲ್ಯಾಣದಿಂದಲೇ ರಾಷ್ಟ್ರದುದ್ದಕ್ಕೂ ಪ್ರತ್ಯೇಕ ಧರ್ಮದ ಕಹಳೆ ಮೊಳಗಲಿದೆ. ಜನವರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಾ ಅಧಿವೇಶನದಲ್ಲಿ 2 ಲಕ್ಷಕ್ಕೂ ಹೆಚ್ಚು ಜನ ಭಾಗಿಯಾಗುವ ನಿರೀಕ್ಷೆಯಿದೆ. ಇದಕ್ಕೂ ಪೂರ್ವದಲ್ಲಿ ಜ.12ರಿಂದ 14ರವರೆಗೆ ಕೂಡಲಸಂಗಮದಲ್ಲಿ 36ನೇ ಶರಣ ಮೇಳ ಜರುಗಲಿದೆ ಎಂದು ತಿಳಿಸಿದರು.

ಕಳಂಕರಹಿತರಾದರೆ ನಮ್ಮವರು: ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಜಿ.ಬಿ.ಪಾಟೀಲ್ ಚಿತ್ರದುರ್ಗದ ಮುರುಘಾಶ್ರೀಗಳ ಪ್ರಕರಣ ಸಂಬಂಧ ಪ್ರತಿಕ್ರಿಯಿಸಿ, ಗುರುಗಳು ಕಳಂಕರಹಿತರಾಗಿರಬೇಕು ಎನ್ನುವುದು ಲಿಂಗಾಯತರ ಆಶಯ. ಶ್ರೀಗಳ ವಿರುದ್ಧದ ಆಪಾದನೆ ಬಗ್ಗೆ ನ್ಯಾಯಾಲಯ ತೀರ್ಮಾನಿಸುತ್ತದೆ. ಅಲ್ಲಿಯವರೆಗೆ ಶ್ರೀಗಳಿಗೆ ಬೆಂಬಲ ವ್ಯಕ್ತಪಡಿಸುವುದು ಸರಿಯಲ್ಲ ಎಂದು ಈಗಾಗಲೇ ತೀರ್ಮಾನಿಸಲಾಗಿದೆ. ಶ್ರೀಗಳು ಕಳಂಕರಹಿತರಾಗಿ ಹೊರಬಂದರೆ ನಮ್ಮವರಾಗುತ್ತಾರೆ. ನ್ಯಾಯಾಲಯ ಶಿಕ್ಷೆ ವಿಧಿಸಿದರೆ ಅವರು ಅನುಭವಿಸುತ್ತಾರೆ ಎಂದರು. ಈ ವೇಳೆ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ರಾಷ್ಟ್ರೀಯ ಬಸವಸೇನೆ ಅಧ್ಯಕ್ಷ ಶಂಕರ್ ಗುಡಸ್, ಲಿಂಗಾಯತ ಮಹಾಸಭಾದ ಬೆಳಗಾವಿ ಜಿಲ್ಲಾಧ್ಯಕ್ಷ ಬಸವರಾಜ ರೊಟ್ಟಿ, ಮೈಸೂರು ಜಿಲ್ಲಾಧ್ಯಕ್ಷ ಶರಣ ಮಹದೇವಪ್ಪ, ಪ್ರಧಾನ ಕಾರ್ಯದರ್ಶಿ ಬಿ.ಎಂ.ಮರಪ್ಪ ಸೇರಿದಂತೆ ಸುಮಾರು 20 ಜಿಲ್ಲೆಗಳ ಪದಾಧಿಕಾರಿಗಳು ಹಾಜರಿದ್ದರು.

ಉದ್ಯಮಿಗಳಿಗೆ ಶೇ.50ರಷ್ಟು ಸಹಾಯಧನ

ಸರ್ಕಾರದಿಂದ ಹೆಚ್ಚಿನ ನೆರವು ಒದಗಿಸಲಾಗುವುದು ಎಂದರು. ವಿದ್ಯುತ್ ಮಗ್ಗಗಳಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೂ ನೇಕಾರ್ ಸಮ್ಮಾನ್ ಯೋಜನೆ ವಿಸ್ತರಿಸಲಾಗುವುದು. ಜನವಸತಿ ಪ್ರದೇಶದಲ್ಲಿರುವ ನೇಕಾರರಿಗೆ ವಾಸ್ತವ್ಯ ಪ್ರಮಾಣಪತ್ರ ವಿತರಿಸಲಾಗುವುದು. ಕೈಮಗ್ಗದ ಮೂಲಕ ನೇಕಾರಿಕೆ ನಡೆಸುವುದನ್ನು ಗುಡಿ ಕೈಗಾರಿಕೆ ಎಂದು ಪರಿಗಣಿಸಿ, ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿ ಪಡೆಯುವುದರಿಂದ ವಿನಾಯ್ತಿ ನೀಡಲು ಆದೇಶ ಹೊರಡಿಸಲಾಗುವುದು ಎಂದು ತಿಳಿಸಿದರು.

ವಿದ್ಯಾ ವಿಕಾಸ ಯೋಜನೆಯಡಿ ಸಮವಸ್ತ್ರ ಪೂರೈಕೆಗೆ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳಿಂದ ಬಟ್ಟೆ ಖರೀದಿಗೆ ಆದ್ಯತೆ ನೀಡಲಾಗುವುದು. ಮಗ್ಗಗಳಿಂದ ಲಭ್ಯವಾಗುವ ಬಟ್ಟೆಯ ಪ್ರಮಾಣವನ್ನು ನಿಗದಿಪಡಿಸಿ, ಉಳಿದ ಪ್ರಮಾಣದ ಬಟ್ಟೆ ಖರೀದಿಗೆ ಟೆಂಡರ್ ಕರೆಯಲಾಗುವುದು. ಮಗ್ಗಗಳಿಂದ ಬಟ್ಟೆ ಖರೀದಿಗೆ ಡಿಸೆಂಬರ್ ತಿಂಗಳಿನಲ್ಲೇ ಕಾರ್ಯಾದೇಶ ನೀಡಲಾಗುವುದು. ವಿವಿಧ ಇಲಾಖೆಗಳಲ್ಲಿ ಸಮವಸ್ತ್ರಕ್ಕೆ ಅಗತ್ಯವಿರುವ ಬಟ್ಟೆಯ ಶೇ 25ರಷ್ಟನ್ನು ಕೈಮಗ್ಗ ನಿಗದಮ ಮೂಲಕ ಖರೀದಿಗೆ ನಿರ್ಧರಿಸಲಾಗಿದೆ ಎಂದರು.

ನೇಕಾರರಿಗೆ 2 ಲಕ್ಷದವರೆಗೆ ಬಡ್ಡಿರಹಿತ ಸಾಲ ವಿತರಿಸುವುದು, ಐದು ಅಶ್ವಶಕ್ತಿ (ಎಚ್.ಪಿ) ಸಾಮರ್ಥ್ಯದವರೆಗಿನ ವಿದ್ಯುತ್ ಮಗ್ಗ ಮತ್ತು ಮಗ್ಗ ಪೂರ್ವ ಘಟಕಗಳಿಗೆ ತಮಿಳುನಾಡು ಮಾದರಿಯಲ್ಲಿ ಉಚಿತ ವಿದ್ಯುತ್ ಪೂರೈಕೆ, ವಿದ್ಯುತ್ ಬಿಲ್‌ನ ನಿಶ್ಚಿತ ಶುಲ್ಕದಲ್ಲಿ ಶೇ 50ರಷ್ಟು ರಿಯಾಯ್ತಿ, ನೇಕಾರರನ್ನು ಅಸಂಘಟಿತ ವಲಯದ ಕಾರ್ಮಿಕರ ವ್ಯಾಪ್ತಿಗೆ ಸೇರಿಸಿ ಸೌಲಭ್ಯ ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಆಲಂಬಾಡಿ ಜುಂಜೇಗೌಡ, ಬೊಪ್ಪೇಗೌಡರ ಅಧ್ಯಯನ ಅವಶ್ಯವಾಗಿದೆ

● ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಅಭಿಮತ ● ಪಶುಪಾಲಕರ ಸಾಂಸ್ಕೃತಿಕ ಕಮ್ಮಟ, ಪ್ರಶಸ್ತಿ ಪ್ರದಾನ

ಮೈಸೂರು,ಡಿ.17(ಎಂಟಿವೈ)– ಕುರುಬ ಸಮುದಾಯಕ್ಕೆ ಸೇರಿರುವ ಆಲಂಬಾಡಿ ಜುಂಜೇಗೌಡ ಹಾಗೂ ಬೊಪ್ಪೇಗೌಡರು ಸಮುದಾಯ ಸೇವೆ ಮಾತ್ರವಲ್ಲದೆ, ಧರ್ಮ ಸಂರಕ್ಷಣೆಯಲ್ಲೂ ತೊಡಗಿಸಿಕೊಂಡು ನೀಡಿರುವ ಕೊಡುಗೆಗಳ ಬಗ್ಗೆ ಜನರಿಗೆ ತಿಳಿಸಲು ಅಧ್ಯಯನ ಮಾಡುವ ಅಗತ್ಯವಿದೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಆಲಂಬಾಡಿ ಕುರುಬ ಜುಂಜೇಗೌಡ ಪ್ರತಿಷ್ಠಾನ, ಹಾಗೂ ಕರ್ನಾಟಕ ಪ್ರದೇಶ ಕುರುಬರ ಸಂಘ ಹಾಗೂ ಅಖಿಲ ಭಾರತೀಯ ಪಶುಪಾಲಕರ ಕ್ಷತ್ರಿಯರು ಟ್ರಸ್ಟ್ ವತಿಯಿಂದ ಶನಿವಾರ ಆಯೋಜಿಸಿದ್ದ ಪಶುಪಾಲಕರ ಸಾಂಸ್ಕೃತಿಕ ಕಮ್ಮಟ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಆಲಂಬಾಡಿ ಜುಂಜೇಗೌಡರ ಜಾನಪದ ಕಥನ ಸಾಕಷ್ಟು ಮಂದಿಗೆ ಹೊಸದಾಗಿದೆ. ನಾವು ಸೇರಿದಂತೆ ಸಾಕಷ್ಟು ಮಂದಿ ಮಹದೇಶ್ವರ ಬೆಟ್ಟಕ್ಕೆ ಹೋದರೂ ಜುಂಜೇಗೌಡ ಎಂಬ ಕುರುಬ ಸಮುದಾಯ ಸಾಹುಕಾರರ ಬಗ್ಗೆ ತಿಳಿದುಕೊಳ್ಳಲು ಹೋಗುವುದಿಲ್ಲ ಎಂದು ವಿಷಾದಿಸಿದರು.

ಆಲಂಬಾಡಿ ಜುಂಜೇಗೌಡರು ಸಾವಿರಾರು ಹಸು ಸಾಕಿ ಪಶುಸಂಗೋಪನೆ ಮಾಡಿದ್ದ ವಿಚಾರ ಜನರಿಗೆ ತಿಳಿದಿಲ್ಲ. ಇದೆಲ್ಲದರ ಬಗ್ಗೆ ಬೆಳಕು ಚೆಲ್ಲುವ ಕೆಲಸ ಆಗಬೇಕು. ಜುಂಜೇಗೌಡರ ಫೋಟೊ ನೋಡಿದರೆ ಅಭಿಮಾನ ಮೂಡುತ್ತದೆ. ಸಮಾಜಕ್ಕೆ ಜುಂಜೇಗೌಡರು, ಬೊಪ್ಪೇಗೌಡರು ಧರ್ಮ ಸಂಸ್ಥಾಪನೆ ಮತ್ತು ಸಂರಕ್ಷಣೆಯಲ್ಲಿ ಇವರ ಸೇವೆ ಸಲ್ಲಿಸಿರುವುದನ್ನು ಎಲ್ಲರಿಗೂ ತಿಳಿಸಬೇಕಾಗಿದೆ. ಜಾನಪದ ವಿದ್ವಾಂಸರಾದ ಜಿಶಂ. ಪರಮಶಿವಯ್ಯ ಹಾಗೂ ಡಾ.ರಾಜಶೇಖರ್ ಅವರು ಜುಂಜೇಗೌಡರ ಬಗ್ಗೆ ಅಧ್ಯಯನ ಮಾಡಿ ಬರೆದಿದ್ದಾರೆ ಎಂದರು.

ಪ್ರಪಂಚದಾದ್ಯಂತ ಕುರುಬರ ಸಂಸ್ಕೃತಿ ಪಸರಿಸಿದೆ. ಕುರುಬರು ಜಗತ್ತನ್ನು ಆಳಿದ್ದಾರೆ. ಅದರ ಬಗ್ಗೆ ಬೆಳಕು ಚೆಲ್ಲಲು ಈ ಹಿಂದೆ ನಾನು, ಹೆಚ್.ಎಂ.ರೇವಣ್ಣ ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ ಸಂಘಟನೆಯಲ್ಲಿ ತೊಡಗಿಸಿಕೊಂಡೆವು. ಯುರೋಪ್ ದೇಶಕ್ಕೆ ಹೋಗಿ ಪರಿಶೀಲಿಸಿದೆವು. ಅಲ್ಲಿ ಶೆಫರ್ಡ್ ಸಮುದಾಯ ಪಶುಪಾಲನೆ ಹಾಗೂ ರಾಜ್ಯಾಡಳಿತಕ್ಕೆ ಹೆಸರಾದವರು. ಈಜಿಪ್ಟ್ ದೇಶದ ಸರ್ಕಾರದ ಲಾಂಛನವೇ ಕುರಿಯ ತಲೆ. ಜಗತ್ತಿನ ದೊಡ್ಡ ಸಂಶೋಧಕ ಸಾಕ್ರಟಿಸ್ ಕೂಡ ಕುರಿ ಮೇಯಿಸುವ ಸಮುದಾಯದಿಂದ ಬಂದವರು ಎನ್ನುವುದನ್ನು ಜನರಿಗೆ ತಿಳಿಸಬೇಕು. ಗ್ರೀಸ್‌ನಲ್ಲಿ 2500 ವರ್ಷಗಳ ಹಿಂದೆ ಪ್ರಜಾಪ್ರಭುತ್ವ ಹಾಗೂ ಮತದಾನ ಆರಂಭವಾಯಿತು. ಅಲ್ಲಿಯೂ ಕುರುಬ ಸಮುದಾಯ ಕುರುಹು ಎದ್ದು ಕಾಣುತ್ತಿದೆ. ಜಗತ್ತಿನಲ್ಲಿ ಕುರುಬರ ಇತಿಹಾಸ ಉತ್ತಮವಾಗಿದೆ. ಅದಕ್ಕಾಗಿ ಶೆಫರ್ಡ್ ಇಂಟರ್‌ನ್ಯಾಷನಲ್ ಲಾಂಛನವನ್ನು 'ಚಂದ್ರಗುಪ್ತ ಮೌರ್ಯ' ಚಿತ್ರವನ್ನೇ ಬಳಸಿಕೊಳ್ಳಲಾಗಿದೆ ಎಂದು ವಿವರಿಸಿದರು.

ಇಂದೂರಿನ ರಾಣಿ ಅಹಲ್ಯಾಬಾಯಿ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅವರು 12 ಜ್ಯೋತಿರ್ಲಿಂಗ ಸ್ಥಾಪನೆ, ಕಾಶಿಯಲ್ಲಿ ವಿಶ್ವನಾಥ್ ದೇವಾಲಯ ಜೀರ್ಣೋದ್ಧಾರ ಮಾಡಿದ್ದಾರೆ. ಇತ್ತೀಚಿಗೆ ಪ್ರಧಾನಿ ಮೋದಿ ಕಾಶಿ ಕಾರಿಡಾರ್ ಉದ್ಘಾಟಿಸಿದರು. ಆ ವೇಳೆ ಅಹಲ್ಯಾಬಾಯಿ ಹೋಳ್ಕರ್ ಅವರ ನೆನಪು ಮಾಡಿಕೊಳ್ಳಲೇ ಇಲ್ಲ. ಮುಸಲ್ಮಾನ ದೊರೆಗಳಿಂದ ಕಾಶಿ ವಿಶ್ವಾಥ ದೇವಾಲಯವನ್ನು ವಾಪಸ್ ಪಡೆದು ಜೀರ್ಣೋದ್ಧಾರ ಮಾಡಿದ್ದರು. ಅಹಲ್ಯಬಾಯಿ ಹೋಳ್ಕರ್ ನೆನಪು ಮಾಡದೇ ಇರುವುದಕ್ಕೆ ನಾನು ಆಕ್ಷೇಪಿಸಿದ್ದೆ. ಪ್ರಧಾನಮಂತ್ರಿಗಳ ಕಚೇರಿಗೂ ಮಾಹಿತಿ ರವಾನೆಯಾಗಿತ್ತು. ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು 15 ದಿನದಲ್ಲೇ ಅಹಲ್ಯಾ ಬಾಯಿ ಹೋಳ್ಕರ್ ಪ್ರತಿಮೆ ಸ್ಥಾಪಿಸಿತು. ದೆಹಲಿಯ ಸಂಸತ್ ಭವನದ ಬಳಿಯಿರುವ ಗ್ರಂಥಾಲಯದ ಬಳಿ ಅಹಲ್ಯಬಾಯಿ ಹೋಳ್ಕರ್ ಪ್ರತಿಮೆ ಇದೆ. ಅಲ್ಲಿ 24 ಗಂಟೆಯೂ ದೀಪ ಉರಿಯುತ್ತಿದೆ.

ಮಾಜಿ ಸಚಿವ ಹೆಚ್.ಎಂ.ರೇವಣ್ಣ ಮಾತನಾಡಿ, ಆಲಂಬಾಡಿ ಜುಂಜೇಗೌಡರ ಕ್ಷೇತ್ರ ಅಭಿವೃದ್ಧಿಗೆ ನಮ್ಮಿಂದ ಆಗುವ ನೆರವು ನೀಡುತ್ತೇವೆ. ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಕನಕದಾಸರ ಅಧ್ಯಯನ ಪೀಠ, ಸಂಗೊಳ್ಳಿ ರಾಯಣ್ಣ ಅಧ್ಯಯನ ಪೀಠ ಸೇರಿದಂತೆ ವಿವಿಧ ಅಧ್ಯಯನ ಪೀಠಗಳ ಮೂಲಕ ಆಲಂಬಾಡಿ ಗ್ರಾಮ ಹಾಗೂ ಆಲಂಬಾಡಿ ಜುಂಜೇಗೌಡರ ಬಗ್ಗೆ ಅಧ್ಯಯನ ನಡೆಸಲು ಕ್ರಮ ಕೈಗೊಳ್ಳಲಾಗುತ್ತದೆ. ಈಗಾಗಲೇ ಕುರುಬರ ಇತಿಹಾಸವನ್ನು ಸಿದ್ದರಾಮಯ್ಯರ ನೇತೃತ್ವದಲ್ಲಿ 15 ಸಂಪುಟಗಳಲ್ಲಿ ಹೊರ ತರಲಾಗುತ್ತಿದೆ. ಮನೆ ಮನೆಗೆ ತಲುಪಿಸುವ ಕೆಲಸ ಆರಂಭಿಸಲಾಗುತ್ತದೆ. ಅಲ್ಲದೆ ಚಿಕ್ಕ, ಚಿಕ್ಕ ಪುಸ್ತಕದ ಮೂಲಕ ಇನ್ನಷ್ಟು ಜನರಿಗೆ ತಲುಪಿಸಬೇಕು. ಅದಕ್ಕಾಗಿ ನಾನು ನೆರವು ನೀಡಲು ಸಿದ್ಧನಿದ್ದೇನೆ ಎಂದರು.

ಇದೇ ವೇಳೆ ಆಲಂಬಾಡಿ ಕುರುಬ ಜುಂಜೇಗೌಡ ಪ್ರತಿಷ್ಠಾನದ ಗೌರವಾಧ್ಯಕ್ಷರೂ ಆಗಿರುವ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್.ಆನಂದ್ ಅವರು ಆಲಂಬಾಡಿ ಜುಂಜೇಗೌಡರ ನಿವಾಸ ಪಾಳುಬಿದ್ದ ಸ್ಥಿತಿಯಲ್ಲಿತ್ತು. ಅದನ್ನು ಜೀರ್ಣೋದ್ಧಾರ ಮಾಡಲಾಗಿದೆ ಎಂದರು.

ಜನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿ, ಸಾಹಿತಿ ಡಾ.ವಡ್ಡಗೆರೆ ನಾಗರಾಜಯ್ಯ, ಡಾ.ಎ.ಜೆ.ಮಹದೇಶ್ ಪ್ರಸಾದ್ ಅವರಿಗೆ ಆಲಂಬಾಡಿ ಜುಂಜೇಗೌಡ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಅಖಿಲ ಭಾರತೀಯ ಪಶುಪಾಲಕ ಕ್ಷತ್ರಿಯರು ಟ್ರಸ್ಟ್ ವತಿಯಿಂದ ಅಧ್ಯಯನ ಸಿರಿ ಪ್ರಶಸ್ತಿಯನ್ನು ಜನಪದ ವಿದ್ವಾಂಸ ಡಾ.ಸಿದ್ದಣ್ಣ ಎಫ್.ಜಕಬಾಳ, ಮಾರ್ಗಸಿರಿ ಪ್ರಶಸ್ತಿಯನ್ನು ಹಂಪಿ ವಿವಿ ಹಸ್ತಪ್ರತಿ ವಿಭಾಗದ ಡಾ.ಎಫ್.ಟಿ.ಹಳ್ಳಿಕೇರಿ, ಜನಪದ ಸಿರಿ ಪ್ರಶಸ್ತಿಯನ್ನು ಸಂಶೋಧಕ ಡಾ.ಚಂದ್ರಪ್ಪ ಸೊಬಟಿ ಹಾಗೂ ಸಂಶೋಧನಾ ಸಿರಿ ಪ್ರಶಸ್ತಿಯನ್ನು ಡಾ.ಶೋಭಾ ಟಿ.ತಪಶಿ ಅವರಿಗೆ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಪತ್ರಕರ್ತ ಟಿ.ಗುರುರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಆಲಂಬಾಡಿ ಕುರುಬ ಜುಂಜೇಗೌಡ ಪ್ರತಿಷ್ಠಾನ ಅಧ್ಯಕ್ಷ ಎಂ.ಎಸ್.ಮನೋಹರ್, ಪಾಲಿಕೆ ಸದಸ್ಯ ರಮೇಶ್, ಮಾಜಿ ಸದಸ್ಯ ಎಂ.ಕೆ.ಶಂಕರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

> ಆಲಂಬಾಡಿ ಜುಂಜೇಗೌಡರು ಸಾವಿರಾರು ಹಸು ಸಾಕಿ ಪಶು ಸಂಗೋಪನೆ ಮಾಡಿದ್ದ ವಿಚಾರ ಜನರಿಗೆ ತಿಳಿದಿಲ್ಲ. ಇದೆಲ್ಲದರ ಬಗ್ಗೆ ಬೆಳಕು ಚೆಲ್ಲುವ ಕೆಲಸ ಆಗಬೇಕು. ಜುಂಜೇಗೌಡರ ಫೋಟೊ ನೋಡಿದರೆ ಅಭಿಮಾನ ಮೂಡುತ್ತದೆ. ಸಮಾಜಕ್ಕೆ ಜುಂಜೇಗೌಡರು, ಬೊಪ್ಪೇಗೌಡರು ಧರ್ಮ ಸಂಸ್ಥಾಪನೆ ಮತ್ತು ಸಂರಕ್ಷಣೆಯಲ್ಲಿ ಇವರು ಸೇವೆ ಸಲ್ಲಿಸಿರುವುದನ್ನು ಎಲ್ಲರಿಗೂ ತಿಳಿಸಬೇಕಾಗಿದೆ.
>
> -ಅಡಗೂರು ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ಇಂದು ಶ್ರೀ ಶಾರದಾ ಮಹಿಳಾ ಸೇವಾ ಸಮಾಜದ ಸುವರ್ಣ ಮಹೋತ್ಸವ



ಮೈಸೂರು,ಡಿ.17(ಪಿಎಂ)–ಮೈಸೂರು ವೀರಶೈವ ಸಜ್ಜನ ಸಂಘದ ಅಧೀನದ ಶ್ರೀ ಶಾರದಾ ಮಹಿಳಾ ಸೇವಾ ಸಮಾಜದ 50ನೇ ವರ್ಷದ ಸುವರ್ಣ ಮಹೋತ್ಸವ ಡಿ.18ರಂದು ನಡೆಯಲಿದೆ ಎಂದು ಸಮಾಜದ ಅಧ್ಯಕ್ಷೆ ಶೋಭಾ ಜೈಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 50 ವರ್ಷಗಳ ಹಿಂದೆ ದಿ.ಜಗದೀಶ್ವರಿ ನಂಜುಂಡಸ್ವಾಮಿಯವರು ಸಮಾಜವನ್ನು ಸ್ಥಾಪಿಸಿದರು. ಮೈಸೂರಿನ ಜೆಕೆ ಮೈದಾನದ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಸುವರ್ಣ ಮಹೋತ್ಸವಕ್ಕೆ ವೈದ್ಯ ಲೇಖಕಿ ಡಾ.ವಿಜಯಲಕ್ಷ್ಮಿ ಐ.ಬಾಳೇಕುಂದ್ರಿ ಚಾಲನೆ ನೀಡಲಿದ್ದಾರೆ ಎಂದರು.

ಮೈಸೂರು ವಿವಿ ಪ್ರಾಧ್ಯಾಪಕಿ ಡಾ.ಜ್ಯೋತಿ ಶಂಕರ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಸ್.ರಮಾನಂದ ಉಪಸ್ಥಿತರಿರಲಿದ್ದಾರೆ. ಇದೇ ವೇಳೆ ಮೈಸೂರು ವೀರಶೈವ ಸಜ್ಜನ ಸಂಘದ ಮಾಜಿ ಅಧ್ಯಕ್ಷರು ಹಾಗೂ ಸಮಾಜದ ಕಾರ್ಯಕಾರಿ ಸಮಿತಿಯವರನ್ನು ಸನ್ಮಾನಿಸಲಾಗುವುದು. ಅಲ್ಲದೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು. ಸಮಾಜದ ಉಪಾಧ್ಯಕ್ಷೆ ಬೀನಾ ರಮಾನಂದ, ಕಾರ್ಯದರ್ಶಿ ಮೀನಾಕ್ಷಿ ಪ್ರಾಣೇಶ್, ಕೋಶಾಧ್ಯಕ್ಷೆ ಸಾವಿತ್ರಿ ಮಹಾದೇವ್, ಸಹಕಾರ್ಯದರ್ಶಿ ಲೀಲಾ ಗಿರೀಶ್ ಗೋಷ್ಠಿಯಲ್ಲಿದ್ದರು.

ಇಂದು, 23ರಂದು 'ರಾವಿ ನದಿ ದಂಡೆಯಲ್ಲಿ' ನಾಟಕ ಪ್ರದರ್ಶನ



ಮೈಸೂರು,ಡಿ.17(ಪಿಎಂ)–ಪರಿವರ್ತನ ರಂಗ ಸಮಾಜದ ವತಿಯಿಂದ ಡಿ.18 ಮತ್ತು ಡಿ.23ರಂದು 'ರಾವಿ ನದಿ ದಂಡೆಯಲ್ಲಿ' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ರಂಗ ಸಮಾಜದ ಅಧ್ಯಕ್ಷ ಎಸ್.ಆರ್.ರಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಸ್ಗರ್ ವಜಾಹತ್ ಅವರು ಉರ್ದು ಭಾಷೆಯಲ್ಲಿ ರಚಿಸಿರುವ ಈ ನಾಟಕವನ್ನು ಡಾ.ತಿಪ್ಪೇಸ್ವಾಮಿ ಕನ್ನಡಕ್ಕೆ ಅನುವಾದಿಸಿದ್ದಾರೆ. ದೇಶ ವಿಭಜನೆಯ ಸಂದರ್ಭದ ಚಿತ್ರಣದೊಂದಿಗೆ ಕೋಮು ಸೌಹಾರ್ದ ಸಂದೇಶ ಹೊಂದಿರುವ ನಾಟಕ ಇದಾಗಿದೆ ಎಂದರು.

ಡಿ.18ರಂದು ಸಂಜೆ 6.30ಕ್ಕೆ ಮೈಸೂರಿನ ರಾಮಕೃಷ್ಣನಗರದ ನಟನ ರಂಗ ಮಂದಿರದಲ್ಲಿ ಈ ನಾಟಕ ಪ್ರದರ್ಶನಗೊಳ್ಳಲಿದ್ದು, 125 ರೂ. ಟಿಕೆಟ್ ವ್ಯವಸ್ಥೆ ಇದೆ. ಅಂತೆಯೇ ಡಿ.23ರಂದು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಸಂಜೆ 7ಕ್ಕೆ ಪ್ರದರ್ಶನಗೊಳ್ಳಲಿದ್ದು, 100 ರೂ. ಟಿಕೆಟ್ ಇದೆ. ಎರಡು ಗಂಟೆ ಅವಧಿಯ ನಾಟಕ ಇದಾಗಿದೆ ಎಂದು ಹೇಳಿದರು. ರಂಗ ಸಮಾಜದ ಉಪಾಧ್ಯಕ್ಷ ಶಿವಾಜಿರಾವ್ ಜಾಧವ್, ಕಾರ್ಯದರ್ಶಿ ಮಾಧವಖರೆ, ಖಜಾಂಚಿ ಬಿ.ಎಸ್. ಸತೀಶ್, ಪತ್ರಕರ್ತ ರವಿಕುಮಾರ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಂಜನಗೂಡು ಕ್ಷೇತ್ರದಲ್ಲಿ ಸ್ಪರ್ಧಿಸಲು ಬಿಜೆಪಿ ಟಿಕೆಟ್ ನೀಡಿ



ಮೈಸೂರು,ಡಿ.17(ಪಿಎಂ)– ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ನಂಜನಗೂಡು ಮೀಸಲು ಕ್ಷೇತ್ರದ ಬಿಜೆಪಿ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿರುವುದಾಗಿ ತಿಳಿಸಿದ ಪಕ್ಷದ ಎಸ್‌ಸಿ ಮೋರ್ಚಾದ ರಾಜ್ಯ ಸಮಿತಿ ಸದಸ್ಯ ಕೂಡ್ಲೂರು ಶ್ರೀಧರಮೂರ್ತಿ, ಪಕ್ಷದ ವರಿಷ್ಠರು ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕೋರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2005ರಲ್ಲಿ ಕೊಳ್ಳೇಗಾಲ ಕ್ಷೇತ್ರದ ಪ್ರಬಲ ಆಕಾಂಕ್ಷಿಯಾಗಿ ಬಿಜೆಪಿ ಸೇರ್ಪಡೆಗೊಂಡೆ. ಆದರೆ 2008ರಲ್ಲಿ ಚುನಾವಣೆ ಬಂದಾಗ ನನಗೆ ಟಿಕೆಟ್ ಕೈತಪ್ಪಿತು. 2013 ಮತ್ತು 2018ರಲ್ಲಿಯೂ ಟಿಕೆಟ್ ಸಿಗಲಿಲ್ಲ. ಕಳೆದ 15 ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದೇನೆ. ಆದ್ದರಿಂದ ಪಕ್ಷದ ವರಿಷ್ಠರು ನ್ಯಾಯಸಮ್ಮತವಾಗಿ ಈ ಬಾರಿ ನಂಜನಗೂಡು ಮೀಸಲು ಕ್ಷೇತ್ರದಿಂದ ಸ್ಪರ್ಧಿಸಲು ಪಕ್ಷದ ಟಿಕೆಟ್ ನೀಡಬೇಕು. ಇಲ್ಲವಾದರೆ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ತಿಳಿಸಿದರು. ಪಕ್ಷದ ಮುಖಂಡರಾದ ಪುಟ್ಟಮಾದೇವ್, ಪ್ರಭಾಕರ್, ರಂಗಸ್ವಾಮಿ ಗೋಷ್ಠಿಯಲ್ಲಿದ್ದರು.

ಇಂದು ಗಾನಾಮೃತ ಗಾಯನ ಕಾರ್ಯಕ್ರಮ

ಮೈಸೂರು,ಡಿ.17(ಪಿಎಂ)– ಸ್ಟ್ಯಾನ್ಲಿ ಪಾರ್ಕರ್ಸ್ ಸ್ಕೂಲ್ ಆಫ್ ಮ್ಯೂಸಿಕ್ ವತಿಯಿಂದ ಡಿ.18ರಂದು 'ಗಾನಾಮೃತ' ಶೀರ್ಷಿಕೆಯಡಿ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗಾಯಕ ಸ್ಟ್ಯಾನ್ಲಿ ಪಾರ್ಕರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುವೆಂಪುನಗರದ ವೀಣೆ ಶೇಷಣ್ಣ ಭವನದ ಗಾನಭಾರತೀ ವೇದಿಕೆಯಲ್ಲಿ ಸಂಜೆ 4ಕ್ಕೆ ಗಾಯನ ಕಾರ್ಯಕ್ರಮ ನಡೆಯಲಿದೆ 27 ಮಂದಿ ಗಾಯಕರು ಕನ್ನಡ ಚಲನಚಿತ್ರ ಗೀತೆಗಳ ಜೊತೆಗೆ ಭಾವಗೀತೆಗಳನ್ನು ಸಾದರಪಡಿಸಲಿದ್ದಾರೆ. ಪ್ರವೇಶ ಉಚಿತವಿದೆ ಎಂದರು. ಗಾಯಕ ಸಿ.ಜಿ.ಮೂರ್ತಿ ಗೋಷ್ಠಿಯಲ್ಲಿದ್ದರು.

ನಾಳೆ ಶ್ರೀ ಅಭಯಾಂಜನೇಯ ಏಕಶಿಲಾ ಮೂರ್ತಿ ರಥಯಾತ್ರೆ

ಕೃಷ್ಣಶಿಲೆಯಲ್ಲಿ ಪೀಠ ಸೇರಿದಂತೆ 9 ಅಡಿ ಎತ್ತರದ ಮೂರ್ತಿ ಇದು



ಮೈಸೂರು,ಡಿ.17(ಪಿಎಂ)– ಮೈಸೂರಿನ ರಾಘವೇಂದ್ರನಗರದ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರತಿಷ್ಠಾಪಿಸಲಿರುವ ಶ್ರೀ ಅಭಯಾಂಜನೇಯ ಏಕಶಿಲಾ ಮೂರ್ತಿ ಮೆರವಣಿಗೆಯನ್ನು ಡಿ.19ರಂದು ಏರ್ಪಡಿಸಲಾಗಿದೆ ಎಂದು ಧಾರ್ಮಿಕ ಮುಖಂಡ ಡಾ.ಕೆ.ರಘುರಾಮ್ ವಾಜಪೇಯಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಅಭಯಾಂಜನೇಯ ಏಕಶಿಲಾ ಮೂರ್ತಿಯು ಪೀಠ ಸೇರಿದಂತೆ 9 ಅಡಿ ಎತ್ತರವಿದ್ದು, ಕೃಷ್ಣಶಿಲೆಯಿಂದ ಇದು ಕೆತ್ತಲ್ಪಟ್ಟಿದೆ. ಅಂದು ಶ್ರೀ ಅವಧೂತ ದತ್ತಪೀಠದ ಶ್ರೀಗಣಪತಿ ಸಚ್ಚಿದಾನಂದ ಆಶ್ರಮದಿಂದ ಪಾಳ್ಯಂ ಶ್ರೀ ಶಾಸ್ತಾ ಪೀಠಂನ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದವರೆಗೆ ಶ್ರೀ ಅಭಯಾಂಜನೇಯ ಏಕಶಿಲಾ ಮೂರ್ತಿಯ ರಥಯಾತ್ರೆ ಮೆರವಣಿಗೆ ನಡೆಯಲಿದೆ ಎಂದರು.

ಅಂದು ಬೆಳಗ್ಗೆ 9.30ಕ್ಕೆ ಶ್ರೀಗಣಪತಿ ಸಚ್ಚಿದಾನಂದ ಆಶ್ರಮದ ಕಾರ್ಯಸಿದ್ಧಿ ಶ್ರೀ ಆಂಜನೇಯ ಕ್ಷೇತ್ರದಿಂದ ಮೆರವಣಿಗೆ ಚಾಲನೆ ದೊರೆಯಲಿದೆ. ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತವಿಜಯಾನಂದತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಎಸ್.ಎ.ರಾಮದಾಸ್, ಮೇಯರ್ ಶಿವಕುಮಾರ್, ಪಾರಂಪರಿಕ ವೈದ್ಯ ಯೋಗಿ ಚಂದ್ರಶೇಖರ್ ಗೂರೂಜಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಶ್ರೀ ಅಭಯಾಂಜನೇಯ ಏಕಶಿಲಾ ಮೂರ್ತಿಯ ಶಿಲ್ಪಿ ವೈಸೂರ್ಯ ಪ್ರಕಾಶ್ ಮತ್ತು ಅವರ ತಂಡದವರನ್ನು ಸನ್ಮಾನಿಸಲಾಗುವುದು. ಮೇಲುಕೋಟೆಯ ವಂಗೀಪುರ ನಂಬೀಮಠದ ಶ್ರೀ ಇಳೈಆಳ್ವಾರ್ ಸ್ವಾಮೀಜಿ ದಿವ್ಯ ನೇತೃತ್ವದಲ್ಲಿ ರಥಯಾತ್ರೆ ನಡೆಯಲಿದೆ ಎಂದರು. ಶ್ರೀ ಇಳೈಆಳ್ವಾರ್ ಸ್ವಾಮೀಜಿ, ಪಾಳ್ಯಂ ಶ್ರೀ ಶಾಸ್ತಾ ಪೀಠಂನ ಧರ್ಮದರ್ಶಿ ಎಂ.ಎಸ್.ಮುರಳೀಧರ ಶಾಸ್ತಾ, ಮುಖಂಡರಾದ ಚಕ್ರಪಾಣಿ, ಟಿ.ಸುರೇಶ್ ಗೋಲ್ಡ್, ಸವಿತಾ ಘಾಟ್ಕೆ ಗೋಷ್ಠಿಯಲ್ಲಿದ್ದರು.

ಚೈನ್‌ಲಿಂಕ್ ಬಿಸಿನೆಸ್: ಮಹಿಳೆಯರಿಗೆ ಲಕ್ಷಾಂತರ ರೂ. ವಂಚನೆ

ಮೈಸೂರು, ಡಿ. 17– ಮಹಿಳೆಯೊಬ್ಬರು ಆನ್‌ಲೈನ್ ಮೂಲಕ ಚೈನ್‌ಲಿಂಕ್ ಬಿಸಿನೆಸ್‌ನಲ್ಲಿ ಹಣ ಹೂಡಿಕೆ ಮಾಡಿ 2.60 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಕೆ ಉಷಾ ಬಾಯಿ(49) ಎಂಬುವರು ತಮಗೆ ಗೊತ್ತಿದ್ದ ವ್ಯಕ್ತಿ ಕಳುಹಿಸಿದ ಬಾಸ್ಟನ್ ಡೈನಾಮಿಕ್ಸ್ ಎಂಬ ಚೈನ್‌ಲಿಂಕ್ ಬಿಸಿನೆಸ್‌ನಲ್ಲಿ 2,60,200 ರೂ.ಗಳನ್ನು ಹೂಡಿಕೆ ಮಾಡಿ, ವಂಚನೆಗೊಳಗಾಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಬನ್ನಿಮಂಟಪದ ಶ್ರೀ ಶಿವರಾತ್ರೀಶ್ವರನಗರದ ನಿವಾಸಿಯಾದ ಎಸ್. ಮಮತಾ(34) ಎಂಬುವರು ತಮ್ಮ ಮೊಬೈಲ್‌ಗೆ ಬಾಬು ಎಂಬಾತ ಕಳುಹಿಸಿದ ಲಿಂಕ್ ಅನ್ನು ಓಪನ್ ಮಾಡಿ ನೋಡಿದಾಗ ಸದರಿ ಆ್ಯಪ್‌ನಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರುತ್ತದೆ ಎಂಬುದು ಕಂಡುಬಂದಿದೆ. ಅದನ್ನು ನಂಬಿದ ಅವರು ಡಿಸೆಂಬರ್ 2ರಿಂದ 18ರವರೆಗೆ ವಿವಿಧ ಹಂತಗಳಲ್ಲಿ 2,59,400 ರೂ. ಹೂಡಿಕೆ ಮಾಡಿದ್ದು, ಅವರಿಗೆ 42,605 ರೂ. ಮಾತ್ರ ವಾಪಸ್ ಬಂದಿದ್ದು, 2,16,795 ರೂ. ವಂಚನೆಯಾಗಿದೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.


ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಡಿ.17(ಎಂಟಿವೈ)– ನಂಜನಗೂಡು ತಾಲೂಕಲ್ಲಿ ನೆಲೆಸಿರುವ ಕುರುಬ ಸಮುದಾಯಕ್ಕೆ ಸೇರಿರುವ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲು ಶ್ರೀಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘ ಅರ್ಜಿ ಆಹ್ವಾನಿಸಿದೆ.



2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದಿರುವ ನಂಜನಗೂಡು ತಾಲೂಕಲ್ಲಿ ನೆಲೆಸಿರುವ ಕುರುಬ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಡಿ.20ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಇತ್ತೀಚಿನ ಭಾವಚಿತ್ರ ಅಂಕಪಟ್ಟಿ ಪ್ರತಿ, ಜಾತಿ ಪ್ರಮಾಣ ಪತ್ರ, ಟಿಸಿ ಹಾಗೂ ಆಧಾರ್ ಕಾರ್ಡ್ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ನಂಜನಗೂಡು ಬಸ್ ನಿಲ್ದಾಣದ ಸಮೀಪವಿರುವ ಶ್ರೀಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಚೇರಿಗೆ ತಲುಪಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 9739258545, 9380339266 ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

ಅನಧಿಕೃತ ಬಾರ್ ಎಂಬ ಆರೋಪ ಶುದ್ಧ ಸುಳ್ಳು ; ಸ್ಪಷ್ಟನೆ



ಮೈಸೂರು,ಡಿ.17(ಪಿಎಂ)– ಹೆಗ್ಗಡದೇವನಕೋಟೆ ತಾಲೂಕು ಹಂಪಾಪುರ ಹೋಬಳಿಯ ಹೊಮ್ಮರಗಳ್ಳಿಯಲ್ಲಿ ಗ್ರಾಮದ ಮೃತ ಪುಟ್ಟಸ್ವಾಮಿಯವರ ಸ್ವತ್ತಿನಲ್ಲಿ ಕಾನೂನುಬಾಹಿರವಾಗಿ ಚಾಮುಂಡೇಶ್ವರಿ ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ ಎಂಬ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯವರ ಆರೋಪ ಶುದ್ಧ ಸುಳ್ಳು. ಇಲ್ಲಿ ಎಲ್ಲವೂ ಕಾನೂನು ಬದ್ಧವಾಗಿಯೇ ನಡೆಯುತ್ತಿದೆ ಎಂದು ಸದರಿ ಬಾರ್ ಮಾಲೀಕ ವಿಜಯ್ ಕುಮಾರ್ ಮತ್ತು ಪುಟ್ಟಸ್ವಾಮಿಯವರ ನಾಲ್ವರು ಸೊಸೆಯಂದಿರು ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದಿ.ಪುಟ್ಟಸ್ವಾಮಿಯವರ ಸೊಸೆ ಹೆಚ್.ಪಿ.ಸೌಮ್ಯ ಶ್ರೀಧರ್, ಸದರಿ ಬಾರ್‌ನ ನಿವೇಶನ ಮತ್ತು ಕಟ್ಟಡಕ್ಕೆ ನಾನೂ ಸೇರಿದಂತೆ ಪುಟ್ಟಸ್ವಾಮಿಯವರ ನಾಲ್ವರು ಸೊಸೆಯಂದಿರು ಮಾಲೀಕರಾಗಿದ್ದೇವೆ. ಬಾರ್ ನಡೆಸಲು ವಿಜಯ್‌ಕುಮಾರ್ ಅವರಿಗೆ 2025ರವರೆಗೆ ಭೋಗ್ಯಕ್ಕೆ ನೀಡಿದ್ದೇವೆ. ಇಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಹೇಳಿದರು.

ಬಾರ್ ಇರುವ ಭೂಮಿಯನ್ನು ನಿವೇಶನ ಎಂದು ಪರಿಗಣಿಸಿ ಪಂಚಾಯಿತಿಯು ಅಸೆಸ್‌ಮೆಂಟ್ ಡಿಮ್ಯಾಂಡ್ ನೀಡಿದೆ. ಸರ್ವೆ ನಂ. 257/ಎ, 257/ಬಿ ಹಿಡುವಳಿ ಜಮೀನು ಅಲ್ಲ. ಇದು ನಿವೇಶನವಾಗಿ ಪರಿವರ್ತನೆಯಾಗಿದೆ. ಇದರ ನಂಬರ್ 648 ಆಗಿದೆ. ಪಂಚಾಯಿತಿ ವ್ಯಾಪ್ತಿಯ ಕಂದಾಯ ಕೂಡ ಪಾವತಿಯಾಗಿದೆ. ಇವರು ಆಪಾದನೆ ಮಾಡಿರುವುದೆಲ್ಲಾ ಸುಳ್ಳು. ಯಾರು ಬೇಕಾದರೂ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಬಹುದು ಎಂದು ತಿಳಿಸಿದರು.

ಅಸೆಸ್‌ಮೆಂಟ್ ನಂ.330, ಆಸ್ತಿ ನಂ. 221–ಎ ಮತ್ತು ಬಿ, ಡಿಮ್ಯಾಂಡ್ ಜಂಜರ್ ನಂ. 280 ಈ ಜಾಗದಲ್ಲಿ ಬಾರ್ ಇರುತ್ತದೆ. ಪುಟ್ಟಸ್ವಾಮಿಯವರ 6 ಮಂದಿ ಹೆಣ್ಣುಮಕ್ಕಳಿಂದ ಹಕ್ಕು ಖುಲಾಸೆಯೂ ಆಗಿದ್ದು, ಪೌತಿ ಖಾತೆ ಕೂಡ ಆಗಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯವರು ಮಾಡಿರುವ ಆರೋಪವೆಲ್ಲವೂ ಸತ್ಯಕ್ಕೆ ದೂರ. ವಿನಾಕಾರಣ ಇದೇ ರೀತಿ ಆರೋಪ ಮಾಡಿದರೆ ನಾವು ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಪುಟ್ಟಸ್ವಾಮಿಯವರ ಸೊಸೆಯಂದಿರಾದ ಸಾವಿತ್ರಿ, ಚಂದ್ರಕಾಂತ, ಸುಕನ್ಯ ಮತ್ತಿತರರು ಗೋಷ್ಠಿಯಲ್ಲಿದ್ದರು.

ಜಿಲ್ಲಾಧಿಕಾರಿ ನಡೆ, ಹಳ್ಳಿ ಕಡೆ: ಪಿ.ಪಟ್ಟಣದ ಮಾಕೋಡಿನಲ್ಲಿ 209 ಅರ್ಜಿ ಪರಿಶೀಲನೆ





ಮೈಸೂರು, ಡಿ.17– ವಿವಿಧ ಇಲಾಖೆಗಳಿಗೆ ಸಂಬಂಧಿಸಿದ 209 ಅರ್ಜಿಗಳನ್ನು ಪರಿಶೀಲಿಸಿ, ಸಮಸ್ಯೆ ಪರಿಹಾರಕ್ಕೆ ಶೀಘ್ರ ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು ಸೂಚಿಸಿದರು.

ಪಿರಿಯಾಪಟ್ಟಣ ತಾಲೂಕಿನ ಮಾಕೋಡು ಗ್ರಾಮ ಪಂಚಾಯಿತಿಯಲ್ಲಿ ಆಯೋಜಿಸಿದ್ದ 'ಜಿಲ್ಲಾಧಿಕಾರಿಗಳ ನಡೆ, ಹಳ್ಳಿ ಕಡೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಂದಾಯ ಇಲಾಖೆಗೆ ಸಂಬಂಧಿಸಿದ 93, ಗ್ರಾಪಂನ 99, ಸೆಸ್ಕ್‌ಗೆ ಸಂಬಂಧಿಸಿದ 8, ಸರ್ವೇ ಇಲಾಖೆಯ 5, ಆರೋಗ್ಯ ಇಲಾಖೆಗೆ ಸಂಬಂಧಿಸಿದ 2, ಸಮಾಜ ಕಲ್ಯಾಣ ಇಲಾಖೆ ಹಾಗೂ ಕೆಎಸ್‌ಆರ್‌ಟಿಸಿಗೆ ಸಂಬಂಧಿಸಿದ ತಲಾ 1 ಸೇರಿ ಒಟ್ಟು 209 ಅರ್ಜಿಗಳು ಸಲ್ಲಿಕೆಯಾಗಿದೆ ಎಂದರು.

ಗ್ರಾಮ ವಾಸ್ತವ್ಯ ನನಗೆ ಹೊಸದೇನಲ್ಲ. ಗ್ರಾಮಗಳಿಗೆ ಭೇಟಿ ನೀಡಿ, ಅಲ್ಲಿನ ಸಮಸ್ಯೆಗಳನ್ನು ಪ್ರತ್ಯಕ್ಷವಾಗಿ ಕಂಡು ಸಾಧ್ಯವಾದಷ್ಟು ಪರಿಹರಿಸುವ ಜವಾಬ್ದಾರಿಯನ್ನು ಹಿಂದಿನಿಂದಲೂ ನಡೆಸಿಕೊಂಡು ಬರುತ್ತಿದ್ದೇನೆ. ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮದಿಂದ ಅಧಿಕಾರಿಗಳು ಮತ್ತು ಸಾರ್ವಜನಿಕರ ನಡುವಿನ ಅಂತರ ಕಡಿಮೆಯಾಗಲಿದೆ. ಗ್ರಾಪಂ ಆವರಣದಿಂದ ಸಭಾ ಕಾರ್ಯಕ್ರಮದ ವೇದಿಕೆವರೆಗೆ ನಡೆದುಕೊಂಡು ಬಂದಿದ್ದರಿಂದ ಗ್ರಾಮದ ಹಲವು ಸಮಸ್ಯೆಗಳನ್ನು ಪ್ರತ್ಯಕ್ಷವಾಗಿ ಕಾಣಲು ಸಾಧ್ಯವಾಯಿತು. ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ನಮ್ಮೊಂದಿಗಿದ್ದು, ಸ್ವೀಕೃತ ಅರ್ಜಿಗಳ ಪರಿಶೀಲಿಸಿ 15 ದಿನಗಳೊಳಗೆ ಸಮಸ್ಯೆ ಬಗೆಹರಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ಅಭಿವೃದ್ಧಿಗೆ ಮನವಿ: ಮಾಕೋಡು ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನ ನಿರ್ವಹಣೆ, ಶ್ರೀ ಚನ್ನಕೇಶ್ವರ ದೇವಸ್ಥಾನ ಅಭಿವೃದ್ಧಿ ಬಗ್ಗೆ ಮನವಿ ಮಾಡಿದರು. ಉಳಿದಂತೆ ಜೈನ ಬಸದಿಗೆ ಕೌಂಪೌಂಡ್, ಶಾಲಾ ಆವರಣ ಒತ್ತುವರಿ ತೆರವು, 83 ಎಕರೆ ಗೋಮಾಳ ಅತಿಕ್ರಮಣ ತೆರವು, ಗ್ರಂಥಾಲಯ ನಿರ್ಮಾಣ, ಮೆಟ್ಲಿಂಗ್ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ, ಮುಸ್ಲಿಂ ಸ್ಮಶಾನ ಅಭಿವೃದ್ಧಿ ಸೇರಿದಂತೆ ಸಾರ್ವಜನಿಕ ಹಾಗೂ ವೈಯಕ್ತಿಕ ಸಮಸ್ಯೆ ಹಾಗೂ ಬೇಡಿಕೆಗಳ ಸಂಬಂಧ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರು.

'ಜಿಲ್ಲಾಧಿಕಾರಿಗಳ ನಡೆ, ಹಳ್ಳಿ ಕಡೆ' ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಾಕೋಡು ಗ್ರಾಮ ವಿಶೇಷ ಕಳೆಗಟ್ಟಿತ್ತು. ಸಮಸ್ಯೆ ಆಲಿಸಲು ಮನೆ ಬಾಗಿಲಿಗೆ ಬರುತ್ತಿರುವ ಅಧಿಕಾರಿಗಳ ತಂಡವನ್ನು ಸ್ವಾಗತಿಸಲು ಗ್ರಾಮವನ್ನು ಸಿಂಗರಿಸಲಾಗಿತ್ತು. ಪೂರ್ಣಕುಂಭ, ವಿವಿಧ ಕಲಾತಂಡಗಳ ಜೊತೆಗೆ ಅಲಂಕರಿಸಿದ್ದ ಎತ್ತಿನ ಗಾಡಿಗಳ ಮೆರವಣಿಗೆ ಮೂಲಕ ಅಧಿಕಾರಿಗಳನ್ನು ಗ್ರಾಪಂ ಆವರಣದಿಂದ ವೇದಿಕೆಯವರೆಗೆ ಕರೆತಂದಿದ್ದು ವಿಶೇಷವಾಗಿತ್ತು.

ಶಾಸಕರಾದ ಕೆ.ಮಹದೇವ್, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪ್ರೇಮ್ ಕುಮಾರ್, ತಹಸಿಲ್ದಾರ್ ಕೆ.ಚಂದ್ರಮೌಳಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸಿ.ಆರ್.ಕೃಷ್ಣಕುಮಾರ್ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆಯಿಂದ 3 ದಿನ ಅದ್ಧೂರಿ ಹನುಮ ಜಯಂತಿ



ಹೆಚ್.ಡಿ.ಕೋಟೆ, ಡಿ.17– ಪಟ್ಟಣದಲ್ಲಿ 3 ದಿನಗಳ ಕಾಲ ಅದ್ಧೂರಿಯಾಗಿ ಹನುಮ ಜಯಂತಿ ನಡೆಯಲಿದೆ ಎಂದು ಹನುಮ ಸೇವಾ ಸಮಿತಿ ಅಧ್ಯಕ್ಷ ನಂದೀಶ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.19ರಂದು ಬೆಳಗ್ಗೆ ಪಟ್ಟಣದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಭಕ್ತರಿಂದ ಮಾಲಾಧಾರಣೆ ಕಾರ್ಯಕ್ರಮ, ಡಿ.20ರಂದು ಪಟ್ಟಣದ ವರದರಾಜಸ್ವಾಮಿ ದೇವಸ್ಥಾನದಲ್ಲಿ ಪವಮಾನ ಹೋಮ, ಮಧ್ಯಾಹ್ನ 12ಗಂಟೆಗೆ ಭಜರಂಗದಳದ ರಾಷ್ಟ್ರೀಯ ಸಹ ಸಂಯೋಜಕ ಸೂರ್ಯ ನಾರಾಯಣ್ ಅವರಿಂದ ಧಾರ್ಮಿಕ ಸಭೆ ನಡೆಯಲಿದೆ.

ಡಿ.21ರಂದು ಬೆಳಗ್ಗೆ ಪಟ್ಟಣದ ಗದ್ದಿಗೆ ವೃತ್ತದ ಬಳಿಯ ಬಣ್ಣಾರಿ ಅಮ್ಮನ್ ದೇವಸ್ಥಾನದಿಂದ ಶೋಭಾ ಯಾತ್ರೆ ಹೊರಡಲಿದೆ. ಈ ಯಾತ್ರೆಗೆ ಪಡುವಲ ವಿರಕ್ತಮಠದ ಮಹದೇವಸ್ವಾಮೀಜಿ ಆಂಜನೇಯಸ್ವಾಮಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಿದ್ದಾರೆ. ಮೆರವಣಿಗೆ ಪಟ್ಟಣದ ವರದರಾಜಸ್ವಾಮಿ ದೇವಸ್ಥಾನದಲ್ಲಿ ಮುಕ್ತಾಯಗೊಳ್ಳಲಿದೆ. ಶೋಭಾಯಾತ್ರೆಯಲ್ಲಿ ಪಕ್ಷಾತೀತ, ಜಾತ್ಯಾತೀತ ಹಾಗೂ ಧರ್ಮಾತೀತವಾಗಿ ಸಾರ್ವಜನಿಕರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

3 ದಿನಗಳ ಕಾಲ ಹನುಮ ಭಕ್ತರು ತಮ್ಮ ಅಂಗಡಿ, ಮನೆ, ದೇವಾಲಯ ಹಾಗೂ ರಸ್ತೆ ಬದಿಗಳಲ್ಲಿ ಕೇಸರಿ ಧ್ವಜ ಹಾರಿಸಬೇಕು. ತಳಿರು ತೋರಣ ಕಟ್ಟಿ ಸ್ವಾಗತಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಹನುಮ ಸೇವಾ ಸಮಿತಿ ಕಾರ್ಯದರ್ಶಿ ರಾಜು, ಖಜಾಂಚಿ ಮುತ್ತಣ್ಣ, ವರ್ತಕ ಸಂಘದ ಅಧ್ಯಕ್ಷ ವಿನಯ್ ಭಜರಂಗಿ, ಶ್ರೀಕಾಂತ್, ನಾಗೇಶ್ ಉಪಸ್ಥಿತರಿದ್ದರು.

ಮೋದಿ ವಿರುದ್ಧ ಬಿಲಾವಲ್ ಭುಟ್ಟೊ ಹೇಳಿಕೆ ಖಂಡಿಸಿ ಪ್ರತಿಭಟನೆ



ನಂಜನಗೂಡು, ಡಿ.17– ಪ್ರಧಾನಿ ಮೋದಿ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ವಿರುದ್ಧ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಪಾಕಿಸ್ತಾನದ ವಿರುದ್ಧ ಘೋಷಣೆ ಕೂಗಿ ಬಿಲಾವಲ್ ಭುಟ್ಟೊ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಮಾತನಾಡಿ, ಪಾಕ್ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ದೇಶದ ಜನಸೇವಕ ಮೋದಿ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ ಭಾರತೀಯರಿಗೆ ಅವಮಾನಿಸಿದ್ದಾರೆ. ಇದು ಖಂಡನೀಯ. ಪಾಕಿಸ್ತಾನ ಭಯೋತ್ಪಾದನೆ ಪೋಷಿಸುತ್ತಾ ಅಮಾಯಕರ ರಕ್ತ ಕುಡಿದು ಬದುಕುತ್ತಿದೆ. ಪಾಕ್ ವಿದೇಶಾಂಗ ಸಚಿವರಿಗೆ ಮೋದಿ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಅವರ ಹೇಳಿಕೆ ಹಿಂಪಡೆದು ಭಾರತೀಯರ ಕ್ಷಮೆ ಯಾಚಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಜಯ್ ಶರ್ಮಾ, ಶ್ರೀನಿವಾಸರೆಡ್ಡಿ, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಸದಸ್ಯರಾದ ಕಪಿಲೇಶ್, ಮಹದೇವಪ್ರಸಾದ್, ಬಾಲಚಂದ್ರು, ಸಿದ್ದರಾಜು, ಮಾದೇಶ, ಕೃಷ್ಣಂರಾಜು, ಕೃಷ್ಣ ಮೂರ್ತಿ, ಸೇರಿದಂತೆ ಕಾರ್ಯಕರ್ತರು ಇದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಹನಗೋಡು, ಡಿ.17– ಕಳೆದೊಂದು ತಿಂಗಳಿಂದೀಚೆಗೆ ಹುಣಸೂರು ತಾಲೂಕಿನ ವಿವಿಧೆಡೆ ಲೋಕೋಪಯೋಗಿ, ಜಿಪಂ ನೀರಾವರಿ ಇಲಾಖೆ, ಕೆಆರ್‌ಐಡಿಎಲ್ ಮೂಲಕ 38 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ಕಡೇಮನುಗನಹಳ್ಳಿ ಗ್ರಾಪಂ ವ್ಯಾಪ್ತಿಯ ಕಾಡಂಚಿನ ಗ್ರಾಮ ಉಡುವೇಪುರದಲ್ಲಿ 41 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹನಗೋಡು ಹೋಬಳಿಯ ಕಚುವಿನ ಹಳ್ಳಿಯಲ್ಲಿ 30 ಲಕ್ಷ, ಹೊಸಪೆಂಜಳ್ಳಿ 20 ಲಕ್ಷ, ಹೊಸ ವಾರಂಚಿ 38 ಲಕ್ಷ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿ ಸೇರಿದಂತೆ ಒಟ್ಟು 1.29 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು ಗ್ರಾಮದ ಮುಖಂಡರು ಕಾಮಗಾರಿ ಮೇಲುಸ್ತುವಾರಿ ವಹಿಸಬೇಕೆಂದು ತಿಳಿಸಿದರು.

5 ಲಕ್ಷ ಸಹಾಯಧನ: ಉಡುವೇಪುರದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ದೇವಾಲಯಕ್ಕೆ ಗ್ರಾಮಸ್ಥರ ಕೋರಿಕೆ ಮೇರೆಗೆ ವೈಯಕ್ತಿಕವಾಗಿ ತಮ್ಮ ತಾಯಿ ರತ್ನಮ್ಮರ ಹೆಸರಿನಲ್ಲಿ 5 ಲಕ್ಷ ರೂ. ಸಹಾಯಧನ ನೀಡುವುದಾಗಿ ಶಾಸಕ ಮಂಜುನಾಥ್ ಘೋಷಿಸಿದರು.

ಶಾಂತಿಗೆ ಆದ್ಯತೆ: ಇದು ಚುನಾವಣಾ ವರ್ಷವಾಗಿದ್ದು, ಕಾರ್ಯಕರ್ತರನ್ನು ಪ್ರಚೋದಿಸುವುದು, ಸೆಳೆಯುವ ಪ್ರಯತ್ನಗಳು ನಡೆಯುತ್ತಿರುತ್ತವೆ. ಆದರೆ ಕಾರ್ಯಕರ್ತರು ಎದೆಗುಂದದೆ ತಮ್ಮ ಹಾಗೂ ಸಿದ್ದರಾಮಯ್ಯನವರ ಅಧಿಕಾರ ವಧಿಯಲ್ಲಿ ಆಗಿರುವ ಅಭಿವೃದ್ಧಿ ಬಗ್ಗೆ ಜನರಿಗೆ ತಿಳಿಸುವ ಕೆಲಸ ಮಾಡಿರೆಂದು ಕಾರ್ಯಕರ್ತರಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತಾಪಂ ಮಾಜಿ ಸದಸ್ಯೆ ರೂಪ, ಗ್ರಾಪಂ ಅಧ್ಯಕ್ಷ ಉದಯನ್, ಪಾರ್ವತಿ ಉಪಾಧ್ಯಕ್ಷರಾದ ಜವರಮ್ಮ, ಕಾಳೇಗೌಡ, ಸದಸ್ಯರಾದ ಕುಮಾರ್, ರುಕ್ಮಿಣಿ, ಗೀತಾ, ರಂಗಯ್ಯ, ಅಮಾಸೇಗೌಡ, ಸುಬ್ರಮಣಿ, ಮುಖಂಡರಾದ ಸಿ.ಎ.ಚಂಗಪ್ಪ ಉಜ್ಜನೀಗೌಡ, ಆನಂದ್, ಲೋಕೇಶ್, ಸಣ್ಣತಮ್ಮೇಗೌಡ, ಯಾಲಕ್ಕಿಗೌಡ, ಜವರೇಗೌಡ, ಸೋಮಶೇಖರ್, ಬಸವರಾಜ್, ವಕೀಲ ಪುಟ್ಟರಾಜ್, ಕಾಂಗ್ರೆಸ್ ಯುವ ಮುಖಂಡ ರಾಘು, ಉದ್ಯಮಿ ರಾಜು ಶಿವರಾಜೇಗೌಡ, ಮಹದೇವ್ ಸೇರಿದಂತೆ ಅನೇಕರಿದ್ದರು.

ಬಲರಾಮನಿಗೆ ಚಿಕಿತ್ಸೆ ಮುಂದುವರಿಕೆ



ಹನಗೋಡು, ಡಿ.17– ರೈತನಿಂದ ಗುಂಡೇಟು ತಿಂದು ಗಾಯಗೊಂಡಿದ್ದ ನಾಡಹಬ್ಬ ದಸರಾ ಮಹೋತ್ಸವದಲ್ಲಿ 13 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ, ಈಗ ಬಲರಾಮನಿಗೆ ಪಶುವೈದ್ಯ ಡಾ. ರಮೇಶ್ ಚಿಕಿತ್ಸೆ ಮುಂದುವರೆಸಿದ್ದಾರೆ.

ಅರಣ್ಯ ಇಲಾಖೆ ವತಿಯಿಂದ ಬಲರಾಮನಿಗೆ ವಿಶೇಷ ಆರೈಕೆ ಮಾಡಲಾಗುತ್ತಿದೆ ಎಂದು ಅರಣ್ಯ ಸಂರಕ್ಷಣಾಧಿಕಾರಿ ರತನ್ ಕುಮಾರ್ ತಿಳಿಸಿದ್ದಾರೆ.

ಚಿರತೆ ದಾಳಿ: ನಾಲ್ಕು ಮೇಕೆಗಳು ಸಾವು

ಹುಣಸೂರು, ಡಿ.17– ಚಿರತೆ ದಾಳಿಗೆ ನಾಲ್ಕು ಮೇಕೆಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಮುತ್ತುರಾಯನ ಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ದೇವರಾಜು ಎಂಬುವರಿಗೆ ಸೇರಿದ ಮೇಕೆಗಳು ಸಾವನ್ನಪ್ಪಿದ್ದು, ಎಂದಿನಂತೆ ಜಮೀನಿನಲ್ಲಿ ಮೇಕೆಗಳನ್ನು ಮೇಯಲು ಬಿಟ್ಟಿದ್ದ ವೇಳೆ ಚಿರತೆ ದಾಳಿ ನಡೆಸಿ ಮೇಕೆಗಳನ್ನು ಬಲಿ ಪಡೆದಿದೆ. ಅದರಲ್ಲಿ ಒಂದನ್ನು ಎತ್ತಿಕೊಂಡು ಹೋಗಿದ್ದು, ಮೂರು ಮೇಕೆಗಳನ್ನು ಅಲ್ಲೇ ಬಿಟ್ಟು ಹೋಗಿದೆ. ಇದನ್ನು ಕಂಡ ದೇವರಾಜು ಅವರು ಸಹಾಯಕ್ಕಾಗಿ ಕೂಗಿಕೊಂಡಿದ್ದಾರೆ. ಈ ವೇಳೆ ಅಕ್ಕಪಕ್ಕದ ಜಮೀನಿನವರು ಬರುವಷ್ಟರಲ್ಲಿ ಚಿರತೆ ಪರಾರಿಯಾಗಿದ್ದು, ಗ್ರಾಮಸ್ಥರಲ್ಲಿ ಆತಂಕವನ್ನುಂಟು ಮಾಡಿದೆ. ತಕ್ಷಣ ಚಿರತೆ ಹಿಡಿದು ತಮ್ಮನ್ನು ಮತ್ತು ಜಾನುವಾರುಗಳನ್ನು ರಕ್ಷಿಸುವಂತೆ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಬಗ್ಗೆ ಮಾತನಾಡಲು ತಮ್ಮ ಸ್ಥಾನದ ಅರಿವಿರಬೇಕು

ಬಿಜೆಪಿ ಮುಖಂಡನಿಗೆ ಆಲಗೂಡು ರಾಚಪ್ಪಾಜಿ ತಿರುಗೇಟು



ತಿ.ನರಸೀಪುರ, ಡಿ.17– ವಿಪಕ್ಷ ನಾಯಕ ಸಿದ್ದರಾಮಯ್ಯನವರ ಮೇಲೆ ಆರೋಪ ಮಾಡುವವರು ರಾಜಕೀಯದಲ್ಲಿ ತಮ್ಮ ಸ್ಥಾನ ಹಾಗೂ ಮಾತನಾಡುವ ಅರ್ಹತೆ ಇದೆಯೇ ಎಂಬುದನ್ನು ಅರಿತು ಮಾತನಾಡಬೇಕು ಎಂದು ಎಸ್.ಮದನ್ ರಾಜ್ ಅಭಿಮಾನಿ ಬಳಗದ ಅಧ್ಯಕ್ಷ ಆಲಗೂಡು ರಾಚಪ್ಪಾಜಿ ಬಿಜೆಪಿ ಮುಖಂಡ ಮಂಜು ಅವರಿಗೆ ಎಚ್ಚರಿಕೆ ನೀಡಿದರು.

ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್ ವರುಣಾದಲ್ಲಿ ವಿಜಯೇಂದ್ರ ಗೆದ್ದರೆ ರಾಜಕೀಯ ಸನ್ಯಾಸತ್ವ ತೆಗೆದುಕೊಳ್ಳುವುದಾಗಿ ನೀಡಿದ್ದ ಹೇಳಿಕೆಗೆ ಪ್ರತಿಯಾಗಿ ಸುದ್ದಿಗೋಷ್ಠಿ ನಡೆಸಿದ್ದ ಬಿಜೆಪಿ ಮುಖಂಡ ಆಲಗೂಡು ಎಂ.ಮಂಜು, ವರುಣಾದಲ್ಲಿ ಯಾರೇ ನಿಂತರೂ ವಿಜಯೇಂದ್ರರ ಗೆಲುವು ಶತಸಿದ್ಧ, ಮದನ್ ರಾಜ್ ರಾಜಕೀಯ ಸನ್ಯಾಸತ್ವಕ್ಕೆ ಸಿದ್ಧರಾಗಿರಲಿ ಎಂದು ವ್ಯಂಗ್ಯವಾಡಿದ್ದರು. ಈ ಹಿನ್ನೆಲೆಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಂಜು ಹೇಳಿಕೆಗೆ ತಿರುಗೇಟು ನೀಡಿದ ರಾಚಪ್ಪಾಜಿ, ಸಿದ್ದರಾಮಯ್ಯರಂತಹ ರಾಜಕೀಯ ಧುರೀಣರ ಬಗ್ಗೆ ಮಾತನಾಡಬೇಕಾದರೆ ತಮ್ಮ ಘನತೆ, ರಾಜಕೀಯ ಸ್ಥಾನಮಾನದ ಬಗ್ಗೆ ಅರಿವಿರಬೇಕು. ಮಂಜುವಿಗೆ ಯಾವ ರಾಜಕೀಯ ಹಿನ್ನೆಲೆ ಇದೆ. ಮೇರು ವ್ಯಕ್ತಿತ್ವದ ಸಿದ್ದರಾಮಯ್ಯನವರ ಬಗ್ಗೆ ಮಾತನಾಡುವ ಅರ್ಹತೆ, ಯೋಗ್ಯತೆ ಇಲ್ಲ. ಬಾಯಿಗೆ ಬಂತಂತೆ ಹೇಳಿಕೆ ನೀಡುವುದಲ್ಲ. ರಾಜಕೀಯದಲ್ಲಿ ತಮ್ಮ ಸ್ಥಾನವೇನು ಎಂಬುದನ್ನು ಅರಿಯಬೇಕು. ಮದನ್‌ರಾಜ್ ಅವರಿಗೆ ರಾಜಕೀಯ ಸನ್ಯಾಸತ್ವ ಸ್ವೀಕರಿಸಲು ಸಿದ್ಧರಾಗುವಂತೆ ಹೇಳಲು ಮಂಜು ಯಾರು? ಈತ ಯಾವುದಾದರೂ ಗ್ರಾಪಂನಲ್ಲಿ ಸ್ಪರ್ಧಿಸಿ ಜನಪ್ರತಿನಿಧಿಯಾಗಿ ಜನಸೇವೆ ಮಾಡಿರುವ ಹಿನ್ನೆಲೆ ಇದೆಯಾ ಎಂದು ವಾಗ್ದಾಳಿ ನಡೆಸಿದರು.

ರಾಜಕೀಯ ಸನ್ಯಾಸತ್ವಕ್ಕೆ ಸಿದ್ಧ!: ಸಿದ್ದರಾಮಯ್ಯ ಹಾಗೂ ಮದನ್‌ರಾಜ್ ಬಗ್ಗೆ ಆರೋಪ ಮಾಡುತ್ತಿರುವ ಆಲಗೂಡು ಮಂಜು ಕೇವಲ ಗ್ರಾಪಂ ಚುನಾವಣೆಯಲ್ಲಿ ಗೆದ್ದು ಬಂದಲ್ಲಿ ನಾವೆಲ್ಲರೂ ರಾಜಕೀಯ ಸನ್ಯಾಸತ್ವಕ್ಕೆ ಸಿದ್ಧ ಎಂದು ಸವಾಲೆಸೆದರು.

ಗೋಷ್ಠಿಯಲ್ಲಿ ಸಹಕಾರ ಸಂಘದ ಉಪಾಧ್ಯಕ್ಷ ನಂಜುಂಡ, ಮುಖಂಡರಾದ ಸೋಮಣ್ಣ, ಉದ್ಯಮಿ ದಿನಕರ್ ನಾಯಕ್, ಯಜಮಾನರಾದ ದೊರೆ ಪುನೀತ್, ಗೂಳಿ ಸಂತೋಷ್, ಪ್ರಕಾಶ್, ಸಂತೋಷ್, ಗೂಳಿ ಸೋಮಣ್ಣ, ಶ್ಯಾಮ್, ಕದಂಬ ಗೋವಿಂದ, ಪ್ರವೀಣ್, ರಮೇಶ್, ಕೃಷ್ಣ, ಸೂರಪ್ಪ, ಶಿವು ಹಾಜರಿದ್ದರು.

ಭೇರ್ಯದಲ್ಲಿ ಸಾರಾ ಸ್ನೇಹ ಬಳಗದಿಂದ ಸೀಮಂತ ಕಾರ್ಯ



ಭೇರ್ಯ, ಡಿ.17– ತಾಲೂಕಿನ ಎಲ್ಲಾ ಆಸ್ಪತ್ರೆಗಳಲ್ಲೂ ಹೆರಿಗೆ ಬಳಿಕ ತಾಯಿ–ಮಗು ಆರೋಗ್ಯವಾಗಿ ಮನೆಗೆ ಹೋಗುವವರೆಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಭೇರ್ಯದಲ್ಲಿ ತಾಲೂಕು ಆರೋಗ್ಯ ಇಲಾಖೆ ಹಾಗೂ ಸಾರಾ ಸ್ನೇಹ ಬಳಗದಿಂದ ಹಮ್ಮಿಕೊಂಡಿದ್ದ ಮೂರನೇ ಹಂತದ ಸೀಮಂತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರನ್ನು ಆರ್ಥಿಕವಾಗಿ ಸದೃಢಗೊಳಿಸುವ ಜೊತೆಗೆ, ಗರ್ಭಿಣಿಯರಿಗೆ ಸೀಮಂತ ಮಾಡಿ ಉಡುಗೊರೆ ನೀಡಲಾಗುತ್ತಿದೆ. ನಾನು ಶಾಸಕನಾದ ಮೇಲೆ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ ಪ್ರಾರಂಭಿಸಿದ್ದು, ಕೋವಿಡ್ ಬಿಟ್ಟರೆ ನಿರಂತರವಾಗಿ ಸೀಮಂತ ಕಾರ್ಯಕ್ರಮವನ್ನು ಸಾ.ರಾ.ಸ್ನೇಹ ಬಳಗದ ಮೂಲಕ ಮಾಡಲಾಗುತ್ತಿದೆ ಎಂದರು.

ಅವಳಿ ತಾಲೂಕುಗಳಲ್ಲಿ ಹಗಲು ರಾತ್ರಿ ಸೇವೆ ಸಲ್ಲಿಸಿದ ವೈದ್ಯರ ಸೇವೆಯಿಂದ ಜನರಿಗೆ ಅನುಕೂಲವಾಗಿದೆ ಎಂದು ವೈದ್ಯರ ಕಾರ್ಯ ಶ್ಲಾಘಿಸಿದ ಶಾಸಕ ಸಾ.ರಾ. ಮಹೇಶ್, ಪಟ್ಟಣದ ತಾಯಿ–ಮಕ್ಕಳ ಆಸ್ಪತ್ರೆ ರಾಜ್ಯದಲ್ಲೇ ಮೊದಲ ಸ್ಥಾನ ಪಡೆಯಲು ಇಲ್ಲಿನ ವೈದ್ಯರ ಸೇವೆ ಅಪಾರ. ಆಸ್ಪತ್ರೆಗಳಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ಭೇರ್ಯ ಹಾಗೂ ಮೇಲೂರು ಆರೋಗ್ಯ ಕೇಂದ್ರ ವ್ಯಾಪ್ತಿಯ 180 ಗರ್ಭಿಣಿಯರಿಗೆ ತಾಲೂಕು ಆರೋಗ್ಯ ಕೇಂದ್ರ ಮತ್ತು ಸಾ.ರಾ.ಸ್ನೇಹ ಬಳಗದಿಂದ ಉಡುಗೊರೆ ಜೊತೆಗೆ ಫಲತಾಂಬೂಲ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಗ್ರಾಪಂ ಅಧ್ಯಕ್ಷೆ ಜ್ಯೋತಿ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಮೊಹಸಿನ್ ತಾಜ್, ತಾಯಮ್ಮ, ರೂಪ, ಬಿ.ಕೆ.ಕುಮಾರ್, ಬಿ.ಬಿ.ಶಿವಣ್ಣ, ಬಿ.ಎಲ್.ರಾಜಶೇಖರ್, ಜೆಡಿಎಸ್ ಮುಖಂಡರಾದ ಅನೀಫ್ ಗೌಡ, ಜೆಡಿಎಸ್ ತಾಲೂಕು ಅಲ್ಪಸಂಖ್ಯಾತ ಅಧ್ಯಕ್ಷ ಮುಶೀರ್ ಅಹಮದ್ ಖಾನ್, ಮಹಿಳಾ ಸಂಘದ ಮಾಜಿ ಅಧ್ಯಕ್ಷೆ ಶಿವಮ್ಮ, ರತ್ನಮ, ತಹಸೀಲ್ದಾರ್ ಕೆ.ಎನ್.ಮೋಹನ್, ತಾಪಂ ಇಓ ಹೆಚ್.ಕೆ.ಸತೀಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಮಹೇಂದ್ರಪ್ಪ ವೈದ್ಯಾಧಿಕಾರಿ ಡಾ.ಸೌಜನ್ಯ, ಡಾ.ಮಧುಸೂದನ್, ಸಾಲಿಗ್ರಾಮ ಠಾಣೆ ಎಸ್‌ಐ ಕುಮುದಾ, ಸಿಡಿಪಿಓ ಪೂರ್ಣಿಮಾ ಸೇರಿದಂತೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಕಸುವಿನಹಳ್ಳಿಯಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮ



ಮಲ್ಕುಂಡಿ, ಡಿ.17– ತಾಲೂಕು ಆಡಳಿತವೇ ಜನರ ಬಳಿ ಹೋಗಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಹಸೀಲ್ದಾರ್ ಶಿವಮೂರ್ತಿ ತಿಳಿಸಿದರು. ನಂಜನಗೂಡು ತಾಲೂಕಿನ ಕಸುವಿನಹಳ್ಳಿಯಲ್ಲಿ ಪಿಂಚಣಿ ಅದಾಲತ್ ಹಾಗೂ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೈತರು ತಮ್ಮ ಕೆಲಸಕ್ಕಾಗಿ ತಾಲೂಕು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ಥಳದಲ್ಲೇ ಪೌತಿ ಖಾತೆ, ವೃದ್ಧಾಪ್ಯ ವೇತನ, ಪಿಂಚಣಿ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲಾಗುವುದು. ಸಾರ್ವಜನಿಕರು ಇಂತಹ ಕಾರ್ಯಕ್ರಮ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಇಓ ಶ್ರೀನಿವಾಸ್ ಮಾತನಾಡಿ, ಸರ್ಕಾರದ ಈ ಕಾರ್ಯಕ್ರಮ ಪ್ರತಿ ಗ್ರಾಮದಲ್ಲೂ ನಡೆದರೆ ಉತ್ತಮ. ಗ್ರಾಪಂನಿಂದ ಸ್ವಚ್ಛತೆ ಕಾಪಾಡಬೇಕು. ಪ್ರತಿಯೊಬ್ಬರು ಮನೆಯಲ್ಲಿ ಕಡ್ಡಾಯವಾಗಿ ಶೌಚಾಲಯ ನಿರ್ಮಿಸಲು ಮುಂದಾಗಬೇಕಿದೆ ಎಂದರು.


ಗ್ರಾಪಂ ಅಧ್ಯಕ್ಷ ಸ್ವಾಮಿ, ಉಪಾಧ್ಯಕ್ಷೆ ವನಜಾಕ್ಷಮ್ಮ, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್, ತಾಲೂಕು ವೈದ್ಯಾಧಿಕಾರಿ ಈಶ್ವರ್, ಸಿಡಿಪಿಓ ಕವಿತಾ, ಆರ್‌ಐ ಪ್ರಕಾಶ್, ಗ್ರಾಪಂ ಸದಸ್ಯ ಕೆ.ಎನ್.ಮಲ್ಲೇಶ್, ಮುಖಂಡ ನವೀನ, ಮಲ್ಲಿಕಾರ್ಜುನ ಸೇರಿದಂತೆ ರೈತರಿದ್ದರು.

ನಾಗೇಂದ್ರ ನಿಧನ



ಬೆಟ್ಟದಪುರ, ಡಿ.17– ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಬಿ.ಸಿ.ನಾಗೇಂದ್ರ(36) ಶುಕ್ರವಾರ ರಾತ್ರಿ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರರು, ಮೂವರು ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚನ್ನೇಗೌಡ



ಬೈಲಕುಪ್ಪೆ, ಡಿ.17– ಇಲ್ಲಿಗೆ ಸಮೀಪದ ಭೂತನಹಳ್ಳಿ ಗ್ರಾಮದ ನಿವಾಸಿ ಚನ್ನೇಗೌಡ (90) ಶನಿವಾರ ನಿಧನರಾದರು. ಮೃತರು ಪತ್ರಕರ್ತ ಬಿ.ಸಿ.ತಮ್ಮಣ್ಣೇಗೌಡ, ನಂದಿನಾಥಪುರ ಪಿಎಸಿಎಸ್ ಸಿಇಓ ಶಿವಣ್ಣ ಸೇರಿದಂತೆ ನಾಲ್ವರು ಪುತ್ರರು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಕಾಮನಹಳ್ಳಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಜಿಲ್ಲೆ – 571311, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಡಜನ ಅಂಚೆ, ಸರ್ಕಾರಿ ಉತ್ತನಹಳ್ಳಿ ಗ್ರಾಮ, ಮನೆ ನಂ.58/1 ರಲ್ಲಿ ವಾಸವಾಗಿರುವ ಲೇಟ್ ನಂಜಯ್ಯ (ಬಿನ್ ಲೇಟ್ ದಾಸೇಗೌಡ) ರವರ ಧರ್ಮಪತ್ನಿ ಶ್ರೀಮತಿ ಗೌರಮ್ಮ (ಆಧಾರ್ ಸಂಖ್ಯೆ : 9865 2636 1201) ಮತ್ತು ಇತರರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಿಗದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತು

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಡಜನ ಗ್ರಾಮಕ್ಕೆ ಸೇರಿದ ಸರ್ವೆ ನಂ. 185/2, ವಿಸ್ತೀರ್ಣ 2 ಎಕರೆ 08 ಗುಂಟೆ ಖುಷ್ಕಿ ಜಮೀನಿನ ಪೈಕಿ, (ತಹಶೀಲ್ದಾರ್ ರವರ ಕಛೇರಿ, ಮೈಸೂರು ತಾಲ್ಲೂಕು ಇವರಿಂದ ಪಡೆದ 11 ಇ ನಕ್ಷೆ ಸಂಖ್ಯೆ 26041022564233001 ರಲ್ಲಿ ಬ್ಲಾಕ್ 2 ಎಂದು ಗುರುತಿಸಿರುವುದು), ವಿಸ್ತೀರ್ಣ 1 ಎಕರೆ 04 ಗುಂಟೆ ಜಮೀನು ಮಾತ್ರ ಮತ್ತು ಈ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಲಾ.ಸ. ನಂ.186, ಪಶ್ಚಿಮಕ್ಕೆ : ಬ್ಲಾಕ್ 1, ಉತ್ತರಕ್ಕೆ : ನೀರು ಹರಿಯುವ ಹಳ್ಳ ದಕ್ಷಿಣಕ್ಕೆ : ಲಾ.ಸ.ನಂ.184.

ಸಹಿ/– **ಮಹಾದೇವಸ್ವಾಮಿ**, ಬಿ.ಎಸ್.ಸಿ., ಎಲ್.ಎಲ್.ಬಿ, ವಕೀಲರು ಮತ್ತು ನೋಟರಿ, ರೂಂ ನಂ. ಎಫ್–1 & 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕೃಪ ಕಾಂಪ್ಲೆಕ್ಸ್, ರಾಮಾನುಜ ರಸ್ತೆ, ಮೈಸೂರು – 570004.
Mob.No.: 9448222522, Office No.: 0821-4287998.
ದಿನಾಂಕ: 22–07–2022

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು, ಜನತಾ ನಗರ, ಮಾರುತಿ ಟೆಂಟ್ ರಸ್ತೆ, 4ನೇ ಅಡ್ಡ ರಸ್ತೆ, ನಂಬರ್ 1742 ರ ನಿವಾಸಿಯಾದ ಶ್ರೀ. ಮಂಜುನಾಥ ಜೆ. ಬಿನ್ ಶ್ರೀ ಜವರ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (05) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿಗೆ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದ ಸರ್ವೆ ನಂಬರ್ 85/4 ರಲ್ಲಿನ ಮೂವತ್ತನಾಲ್ಕು ಕಾಲುಗುಂಟೆ (0.34.04.00) ವಿಸ್ತೀರ್ಣದ ವಾಸೋಪಯೋಗಿ ಉದ್ದೇಶಕ್ಕೆ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ 347073 ದಿನಾಂಕ: 05/07/2022, ರಂತೆ ಅನ್ಯಕ್ರಾಂತವಾಗಿರುವ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ : ಸರ್ವೆ ನಂಬರ್ : 84 ಮತ್ತು ಲಾಗು ಗಾ// ಹುಂಡಿ, ಪಶ್ಚಿಮಕ್ಕೆ : ಸರ್ವೆ ನಂಬರ್ : 90, ಉತ್ತರಕ್ಕೆ : ಸರ್ವೆ ನಂಬರ್ : 84, ದಕ್ಷಿಣಕ್ಕೆ : ಸರ್ವೆ ನಂಬರ್ : 85/2.

Sd/- M.N.Prakash Kalappa
KAR - 1996-2000
Advocate & Legal Consultant,
#67/7A, P.R.I. Complex No.2 & 3, 1st Floor, New Sayyaji Rao Road, Fort Mohalla, Mysuru - 570004.
Mysore: 17/12/2022

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಸಿದ್ದಯ್ಯನವರು
(ನಿವೃತ್ತ ಮುಡಾ ನೌಕರರು)

ಇವರು ದಿನಾಂಕ: 07–12–2022 ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 18–12–2022 ನೇ ಭಾನುವಾರ ಬೆಳಗ್ಗೆ 11 ಗಂಟೆಗೆ ಉತ್ತರ ಕ್ರಿಯಾದಿ ಕಾರ್ಯವನ್ನು ನಮ್ಮ ಸ್ವಗೃಹ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾಸನಕೊಪ್ಪಲು, ನಂ.254 ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಭಜನೆ: ರಾತ್ರಿ 9.00 ಗಂಟೆಗೆ, ಹರಿಕಥೆ ಏರ್ಪಡಿಸಲಾಗಿದೆ.

ದುಃಖತಪ್ತರು: ಶ್ರೀಮತಿ ಸರಸ್ವತಿ ಮತ್ತು ಮಕ್ಕಳು ಹಾಗೂ ಲೇ|| ಸಿದ್ದಮ್ಮ ಮತ್ತು ಲೇ|| ಈರಯ್ಯನವರ ಕುಟುಂಬವರ್ಗದವರು

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಚುನಾವಣಾ ಶಾಖೆ, ಮೈಸೂರು ಜಿಲ್ಲೆ, ಮೈಸೂರು
ದೂರವಾಣಿ (ಕ): +91(0821)2526301–353 ಇಮೇಲ್:ceo_zp_mys@nic.in

ಸಂಖ್ಯೆ:ಇಎಲ್ಎನ್(1)/ಸಿಆರ್/74/2022–23 ದಿನಾಂಕ:13.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು ಹಾಗೂ ಅಧ್ಯಕ್ಷರು, ಮತದಾರರ ಪಟ್ಟಿ ಪರಿಷ್ಕರಣಾ ಸಮಿತಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಮೈಸೂರು ಇವರು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ರಮದ ಬಿ.ಎಲ್.ಓ.ಗಳಿಗೆ ಬಿ.ಎಲ್.ಓ ಕಿಟ್‌ಗಳನ್ನು ಒದಗಿಸಲು ಅರ್ಹ ನೋಂದಾಯಿತ ಸರಬರಾಜು ಸಂಸ್ಥೆಗಳಿಂದ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಸಂಪೂರ್ಣ ವಿವರಗಳನ್ನು **ದಿನಾಂಕ: 13.12.2022** ರಿಂದ **http://www.eproc.karnataka.gov.in** ನಿಂದ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 21.12.2022ರ ಸಂಜೆ 5.00 ಗಂಟೆಯಾಗಿರುತ್ತದೆ.** ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ ಮಾರ್ಪಾಡುಗಳನ್ನು ಇ–ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಮೈಸೂರು ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

DIPR/MYS/KAVITA/D-18/2022-23